ಕರ್ನಾಟಕ ಲೋಚನ

ಸಂಪುಟ ೧೧ ಜೂನ್-ಡಿಸೆಂಬರ್ ೧೯೯೮ ಸಂಚಿಕೆ ೧, ೨

ಲೋಚನ ದಶವಾರ್ಷಿಕ ವಿಶೇಷಾಂಕ
ಅಂತರಶಿಸ್ತೀಯ ಸಂಶೋಧನ ವಿಧಿವಿಧಾನ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಬೆಂಗಳೂರು-೫೬೦ ೦೧೯

'ಕರ್ನಾಟಕ ಲೋಚನ'

ಲೇಖನಗಳು-ಟಿಪ್ಪಣಿಗಳು

ಸಂಶೋಧನಾತ್ಮಕ, ಪಾಂಡಿತ್ಯ-ವಿದ್ವತ್ತ್ವ ಪೂರ್ಣ ಲೇಖನಗಳು ಹಾಗೂ ಹೊಸದಾಗಿ ಪ್ರಕಟವಾಗುವ ಉತ್ತಮ ಮಟ್ಟದ ಸಂಪಾದಿತ ಗ್ರಂಥಗಳು ಮತ್ತು ಶಾಸ್ತ್ರ ಸಾಹಿತ್ಯದ ಗ್ರಂಥಗಳು–ಇವುಗಳ ಮೇಲಣ ವಿಮರ್ಶೆಗಳು ವಿದ್ವದ್ವಿಚಾರ ಮತ್ತು ವಿದ್ವತ್ ಪ್ರಪಂಚದ ವಿದ್ಯಮಾನ, ಇವುಗಳಿಗೆ ಸಂಬಂಧಿಸಿದ ಟೀಕೆ-ಟಿಪ್ಪಣಿಗಳು–ಇವುಗಳಿಗೆ 'ಕರ್ನಾಟಕ ಲೋಚನ' ಮೀಸಲಾಗಿದೆ.

ಯಾವುದೇ ಲೇಖನದಲ್ಲಿ ಮತ್ತು ಟಿಪ್ಪಣಿಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಜವಾಬುದಾರರು ; ಅವು ಅವಶ್ಯವಾಗಿ ಪ್ರತಿಷ್ಠಾನದ ಪರವಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಎಂದು ತಿಳಿಯತಕ್ಕದ್ದಲ್ಲ.

ಲೇಖನಗಳಿಗೆ ಆಹ್ವಾನ

ಮೇಲ್ಕಂಡ ವಾಕ್ಯವೃಂದದಲ್ಲಿ ವ್ಯಕ್ತಪಟ್ಟಿರುವ ಆಶಯಕ್ಕೆ ಅನುಗುಣವಾಗಿ ಲೇಖನಗಳನ್ನು ವಿದ್ವಾಂಸರೂ ಭಾಷೆ ಸಾಹಿತ್ಯಗಳ ಪ್ರೌಢ ವಿದ್ಯಾರ್ಥಿಗಳೂ ಕಳಿಸಿಕೊಡಬೇಕೆಂದು ವಿನಂತಿ. ಲೋಚನದ ಗಾತ್ರ ಪರಿಮಿತವಾದ್ದರಿಂದ ಲೇಖನಗಳು ಅಚ್ಚಿನ 6–8 ಪುಟಗಳ ಪರಿಮಿತಿಯಲ್ಲಿ ಇದ್ದರೆ ಅನುಕೂಲ. ಲೇಖನಗಳು ಹಾಳೆಯ ಒಂದೇ ಪಕ್ಕದಲ್ಲಿ ಸ್ಫುಟವಾದ ಅಕ್ಷರಗಳಲ್ಲಿ ಬರೆದಿರಬೇಕು. ಅಡಿ ಟಿಪ್ಪಣಿಗಳನ್ನು ಪುಟದ ಅಡಿಯಲ್ಲಿಯೇ ಕಾಣಿಸುವುದು ಒಳಿತು. ಗ್ರಂಥ–ಲೇಖನಾಧಾರ ವಿವರಗಳನ್ನು (Bibliography) ಲೇಖನದ ಕಡೆಯಲ್ಲಿ ಕೊಡಬಹುದು. ಲೇಖನವನ್ನು ಹಿಂದಿರುಗಿಸಲಾಗದ್ದರಿಂದ ಲೇಖಕರು ತಮ್ಮ ಲೇಖನದ ಒಂದು ಪ್ರತಿಯನ್ನು ಉಳಿಸಿಕೊಂಡಿರಬೇಕಾಗಿ ವಿನಂತಿ.

ಕರ್ನಾಟಕ ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಗೋಖಲೆ ಸಂಸ್ಥೆಯ ಆವರಣ

ಎನ್. ಆರ್. ಕಾಲೋನಿ, ಬೆಂಗಳೂರು–560 019, ದೂರವಾಣಿ : 6615877

ಸಂಪಾದಕರು : ವಿದ್ವಾನ್ ಟಿ. ಕೇಶವ ಭಟ್ಟ

ಸಹಾಯಕ ಸಂಪಾದಕರು : ಎನ್ ಎಸ್. ರಾಮಸ್ವಾಮಿ ಅಯ್ಯರ್

ಸಂಪುಟ ೧೧ ಜೂನ್—ಡಿಸೆಂಬರ್ ೯೮ ಸಂಚಿಕೆ ೧, ೨

ಲೋಚನ ದಶವರ್ಷ ವಿಶೇಷಾಂಕ

ಅಂತರ ಶಿಸ್ತೀಯ ಸಂಶೋಧನ ವಿಧಿ ವಿಧಾನ

ಪ ರಿ ವಿ ಡಿ

KarnataKa Lochana

Half-Yearly Research Journal, Published by
B. M. Sri. Smaraka Prathisthana
(B. M. Sri. Memorial Foundation)
N. R. Colony, Bangalore-560 019 Ph : 6615877

Vol. 11 June—December 98 No. 1 & 2

Special Volume of 10th Year of Lochana
INTER DISCIPLINARY RESEARCH METHODOLOGY

CONTENTS

ಸಮಸ್ಯಾಪೂರಣ

ವಿದ್ವತ್ಪತ್ರಿಕೆಯಾಗಿರುವ ಈ 'ಕರ್ನಾಟಕ ಲೋಚನ'ದ ಸಂಪುಟ ೬. ಸಂಚಿಕೆ, ೧ ಜೂನ್ ೧೯೯೩ ಮೊದಲ್ಗೊಂಡು 'ಸಮಸ್ಯಾಪೂರಣ' ಎಂಬ ಅಂಕಣವನ್ನು ಪ್ರಾರಂಭಿಸಲಾಗಿದೆ. ಇದು ಕನ್ನಡಕ್ಕೆ ಅತಿಶಯದ ಲಕ್ಷಣವೆನಿಸುವ ಪ್ರಾಸ-ಪಾದ-ಛಂದೋಬದ್ಧ ಪದ್ಯ ಕವಿತಾ ರಚನೆಗೆ ಸಜೀವತೆಯನ್ನು ನೀಡುವ ಉದ್ದೇಶವುಳ್ಳುದು. ಪ್ರತಿಸಂಚಿಕೆಯಲ್ಲಿಯೂ ಆದರ ಮುಂದಣ ಸಂಚಿಕೆಗಾಗಿ ಸಮಸ್ಯಾಪದ್ಯಪಾದವನ್ನು ಕೊಡಲಾಗುತ್ತದೆ. ಒಬ್ಬೊಬ್ಬರಿಂದ ಒಂದೊಂದು ಪದ್ಯವನ್ನು ಮಾತ್ರ ಸ್ವೀಕರಿಸಲಾಗುವುದು. ಈ ಸಂಚಿಕೆಗಾಗಿ ಕೊಡಲಾಗಿದ್ದ ಪದ್ಯಪಾದ ಹೀಗಿದೆ.

—"ತೊಳಲುತರಸುವ ಬಳ್ಳಿ ಕಾಲ್ತೊಡಕಿದಂತೆ".

—ಜೈಮಿನಿಭಾರತ

1 ಬಳಲಿದೆನು ವಸತಿಯೊಂದರಸುತ್ತ ಬೆಂಗ್ಳೂರ
ಪೊಳಲಿನೊಳು ಶೈಕ್ಷಣಿಕ ತರಬೇತಿಗೆಂದೈದೆ
ಹಳುವದೊಳಗಿರುಳು ಪಥ ಕಳೆದಂತೆ ಸೋತೆ ಎಂದಳಲಿ ಮಿತ್ರನ ನೆನೆಯಲು ||
ತೊಳಲುತರಸುವ ಬಳ್ಳಿ ಕಾಲ್ತೊಡಕಿದಂತೆನ್ನ
ಗೆಳೆಯ ಸಂಧಿಸಿದ ವಿಧಿ ವಶದಿಂದ ಹರ್ಷವಂ
ತಳೆದೆಂದನಾಂ ತೊರೆದ ವಸತಿ ನಿನಗುಂಟೆನೆ ಸಮಸ್ಯೆ ಪರಿಹರವಾದುದು ||

—ತಲೆಂಗಳ ರಾಮಕೃಷ್ಣ ಭಟ್ಟ, ವಿದ್ವಾನ್

2 ತಳಮಳದಿ ಕಾಯುತಿರೆ ಬರಲಿಲ್ಲ ಕಾಂತೆ
ಮಳೆಯಿಂದಲೋಡೋಡಿ ಮರದಡಿಗೆ ನಿಂತೆ
ತೆಳು ದೇಹ ನಿಶೆಯೊಳಗೆ ತಬ್ಬಿತವಳಂತೆ
ತೊಳಲುತರಸುವ ಬಳ್ಳಿ ಕಾಲ್ತೊಡಕಿದಂತೆ ||

—ಎಸ್. ಎನ್. ಸಿಂಹ

3 ತೊಳಲುತರಸುವ ಬಳ್ಳಿ ಕಾಲ್ತೊಡಕಿದಂತೆ
ಕಳಲು ಪೋದಾತನಿಗೆ ನಿಧಿ ದೊರಕಿದಂತೆ
ಕೊಳುಗುಳಕ್ಕೆಯ್ದೆ ರಿಪು ಶರಣು ಬಂದಂತೆ
ಬಳಿಗೆ ಬರವೇಳ್ವ ಮೊದಲೇ ಬಂದನಂತೆ

ಟಿ. ಕೇಶವ ಭಟ್ಟ

4 ಬಳಲಿ ಬೆಂಡಾಗಿ ಮನೆಗೆ ಬಂದಿಹ ಹೊತ್ತು
ಬಳ್ಳ ನಗುವನು ಬೀರೊ ಕಂದನಿರುವನು ಗೊತ್ತು
ತೊಳಲುತರಸುವ ಬಳ್ಳಿ ಕಾಲ್ತೊಡಕಿದಂತಿತ್ತು
ಮಳ್ಳ ! ಮೆಲ್ಲನಡಿತೂರಿ ಷೂ ಬಿಚ್ಚೊಗತ್ತು

—ನಾ. ಗೀತಾಚಾರ್ಯ

5 ಮೊದಲೆ ನಾಂ ಸ್ನಾತಕೋತ್ತರ ಪದವಿಯಂ ಕನ್ನ
ಡದೆ ಪಡೆದು ಗ್ರಂಥ ಸಂಪಾದನೆಗೆ ಕೈಯಿಕ್ಕು
ವುದಕೆ ಹಸ್ತಪ್ರತಿಯ ಶಾಸ್ತ್ರವನ್ನೆಂತರಿವೆನಾರ್ ಕಲಿಸುವರೊ ಎನ್ನುತ
ಕುದಿವ ಮನದೊಳಿರೆ ಬೀ ಎಂ ಶ್ರೀ ಪ್ರತಿಷ್ಠಾನ
ವದಕೆ ಸಂಧ್ಯಾತರಗತಿಯನ್ನೇರ್ಪಡಿಸಿತು ಸೇ
ರಿದು ಕಲ್ತೆನೀ ಪ್ರಾಪ್ತಿ ತೊಳಲು ತರಸುವ ಬಳ್ಳಿ ಕಾಲ್ತೊಡಕಿದಂತೆಯೆ ಸರಿ ||

—ಕೆ. ಪಿ. ರಾಜಗೋಪಾಲ್

ಮುಂದಿನ ಸಂಚಿಕೆಗಾಗಿ ಸಮಸ್ಯಾವಾಕ್ಯ :

"ಆರುಂ ಕೊಲಲಾರ್ಪರೆ ಸಾಯದರಂ"

ಸಮಾಜ ವಿಜ್ಞಾನ / ಸಮಾಜಕಾರ್ಯದಲ್ಲಿ ಸಂಶೋಧನ ವಿಧಿ ವಿಧಾನದ ಸ್ವರೂಪ

—ಎಚ್. ಎಂ. ಮರುಳಸಿದ್ಧಯ್ಯ

ಮನುಷ್ಯನು ಅನ್ಯ ಪ್ರಾಣಿಗಳಿಂದ ಭಿನ್ನವಾಗಿರುವುದು ಅವನು ಪಡೆದಿರುವ ಸಂಸ್ಕೃತಿಯ ಕಾರಣದಿಂದ. ಶಾಸ್ತ್ರಜ್ಞರ ಪ್ರಕಾರ ಸಂಸ್ಕೃತಿಯು ಮನುಷ್ಯನಿಗಷ್ಟೇ ಸೀಮಿತವಾದ, ವಿಶಿಷ್ಟವಾದ ಸಂಗತಿ. ಇದು ಇಲ್ಲವೆಂದರೆ ಮನುಷ್ಯ ಕೇವಲ ಭೌತ ಆಕೃತಿಯಲ್ಲಿ ಮಾತ್ರವೇ ಮಾನವನಾಗಿ ತೋರುತ್ತಾನೆ. ಸಂಸ್ಕೃತಿಯ ಅನೇಕ ಮುಖ್ಯ ಅಂಶಗಳಲ್ಲಿ ಭಾಷೆ ಮತ್ತು ವಿವಿಧ ಪ್ರಕಾರದ ಸಾಹಿತ್ಯ ಸೇರುತ್ತವೆ. ಮಾನವ ತನ್ನ ಭಾಷೆಯ ಮೂಲಕ ಸಾಹಿತ್ಯವನ್ನು ಸೃಷ್ಟಿಸಿ, ಸಂಗ್ರಹಿಸಿ, ಸಂಸ್ಕರಿಸಿ, ಬೆಳೆಸುತ್ತಾ ಸಾಗಿದ್ದಾನೆ. ವೈಜ್ಞಾನಿಕ ಮನೋಭಾವ ಹೊಂದಿದ ಮನುಷ್ಯನು ವಿಶ್ವ ವ್ಯಾಪಾರವನ್ನು ವಸ್ತುನಿಷ್ಠವಾಗಿ ಅರಿತುಕೊಳ್ಳಲು ಪ್ರಯತ್ನಶೀಲನಾಗಿದ್ದಾನೆ. ತನ್ನ ಜ್ಞಾನೇಂದ್ರಿಯಗಳನ್ನು ಉಪಯೋಗಿಸಿಕೊಂಡು ವಿಷಯವನ್ನು ಸಂಗ್ರಹಿಸಿ, ಅದನ್ನು ಸಂಸ್ಕರಿಸಿ ಶಾಸ್ತ್ರ ಸಾಹಿತ್ಯವನ್ನಾಗಿ ಕಟ್ಟುತ್ತಾನೆ. ಈ ಸಾಹಿತ್ಯವು ಕೇವಲ ಕುತೂಹಲವನ್ನು ತೃಪ್ತಿಗೊಳಿಸತಕ್ಕಂಥದ್ದಿರಬಹುದು, ಅಥವಾ ಜನೋಪಯೋಗಿ ಕಾರ್ಯಗಳಿಗೆ ನೆರವಾಗುವಂಥದ್ದಿರಬಹುದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಇದು ಶುದ್ಧ ಸೈದ್ಧಾಂತಿಕ ಶಾಸ್ತ್ರ ಸಾಹಿತ್ಯವಾಗಬಹುದು, ಅಥವಾ ಅನ್ವಯಿಕ ಶಾಸ್ತ್ರ ಸಾಹಿತ್ಯವಾಗಬಹುದು. ಈ ಎರಡೂ ಪ್ರಕಾರದ ಸಾಹಿತ್ಯ ನಿರ್ಮಾಣದಲ್ಲಿ ಮನುಷ್ಯನೂ ಒಂದು ಆಕರವಾಗಿರುತ್ತಾನೆ. ಅದರಲ್ಲೂ ಮನುಷ್ಯನ ಸಾಮಾಜಿಕ ಜೀವನದ ವಿನ್ಯಾಸಕ್ಕೆ ಸಂಬಂಧಿಸಿದ ವಸ್ತುಗಳನ್ನು ಸಂಗ್ರಹಿಸುವಾಗ ಮನುಷ್ಯನೇ ಪ್ರಮುಖವಾದ ಆಕರವಾಗುತ್ತಾನೆ. ಅನ್ವಯಿಕ ಸಂಶೋಧನೆಯ ಕೆಲವು ಭಾಗಗಳು ಮತ್ತು ಸೈದ್ಧಾಂತಿಕ ಸಂಶೋಧನೆಯ ಎಲ್ಲ ಭಾಗಗಳು ಮನುಷ್ಯನನ್ನು 'ಮಾಹಿತಿ—ನಿವೇದಕ' ಅಥವಾ 'ಮಾಹಿತಿದಾತ' ಎಂದೇ ಗುರುತಿಸುತ್ತವೆ. ಹೀಗೆ ಗುರುತಿಸಿ, ಅವನನ್ನು ಉಪಯೋಗಿಸಿಕೊಳ್ಳುತ್ತಿರುವ ವಿಜ್ಞಾನಿಗಳು, ಸಂಶೋಧಕರು ಹೇಗೆ ಅವನನ್ನು ಪರೀಕ್ಷಾಪಶುಗಳನ್ನಾಗಿ ಗುರುತಿಸಿ, ಶೋಷಿಸುತ್ತಾರೆ, ಎಂಬುದನ್ನು ನಾವು ಕಡೆಗಣಿಸುವಂತಿಲ್ಲ. ಪ್ರಾಣಿಶಾಸ್ತ್ರಜ್ಞರು ಇಲಿಗಳನ್ನು, ಕಪ್ಪೆಗಳನ್ನು, ಮೊಲಗಳನ್ನು, ಮಂಗಗಳನ್ನು ಹೀಗೆಯೇ ವಿವಿಧ ಪ್ರಕಾರದ ಪ್ರಾಣಿಗಳನ್ನು ಸೀಳಿ, ಒಳಗನ್ನೆಲ್ಲ ಹೊರಗೆ ಹಾಕಿ, ತಮ್ಮ 'ಒಳನೋಟ'ಗಳನ್ನು ತೃಪ್ತಿಪಡಿಸಿಕೊಳ್ಳುತ್ತಾರೆ.

ಪ್ರಾಥಮಿಕ ಆಕರವಾದ ಮನುಷ್ಯ

ಈಗಾಗಲೇ ಸೂಚಿಸಿದಂತೆ ಸೈದ್ಧಾಂತಿಕ ಶುದ್ಧ ಹಾಗೂ ಅನ್ವಯಿಕ ಸಂಶೋಧನೆಗಳನ್ನು ಕೈಗೊಂಡವರು ಪ್ರಾಥಮಿಕ ಮತ್ತು ಮಾಧ್ಯಮಿಕ ಆಕರಗಳ ಮೂಲಕ ತಮಗೆ ಬೇಕಾದ ಮಾಹಿತಿಗಳನ್ನು ಸಂಗ್ರಹಿಸುತ್ತಾರೆ. ಈಗಾಗಲೇ ಸಂಗ್ರಹಗೊಂಡು ಪುಸ್ತಕಗಳ ರೂಪದಲ್ಲೋ, ವರದಿಗಳ ರೂಪದಲ್ಲೊ, ಬೇರೆ ತೆರನ ದಾಖಲೆಗಳ ರೂಪದಲ್ಲೋ, ಇರುವ ಮಾಹಿತಿಗಳು ಮಾಧ್ಯಮಿಕ ಆಕರಗಳಾಗುತ್ತವೆ. ಇವು ಶೋಧಕರಿಗೆ ತುಂಬಾ ಉಪಯುಕ್ತ. ಇವುಗಳಲ್ಲಿ ಕೆಲವಾದರೂ ಪ್ರಾಥಮಿಕ ಆಕರದಿಂದಲೇ ಬಂದಿರುತ್ತವೆ. ಆದರೆ ಹೊಚ್ಚಹೊಸ ಮಾಹಿತಿಗಳು ಬೇಕಾದರೆ, ಮಾಧ್ಯಮಿಕ ಆಕರದಲ್ಲಿ ದೊರಕುವ ಮಾಹಿತಿಗಳ ಸತ್ಯಾಸತ್ಯತೆಯನ್ನು ಖಚಿತಪಡಿಸಿಕೊಳ್ಳಲು ಪ್ರಾಥಮಿಕ ಆಕರಕ್ಕೇ ಹೋಗಬೇಕಾಗುತ್ತದೆ.

ಪ್ರಾಥಮಿಕ ಆಕರಗಳೆಂದರೆ ಮಾಹಿತಿಯನ್ನು ಒದಗಿಸುವ ಜನರೇ ಆಗಿರುತ್ತಾರೆ. ಸಹಜ, ಕೆಲವೊಮ್ಮೆ ಕೃತಕ, ಸನ್ನಿವೇಶದಲ್ಲಿ ಅವರನ್ನು ಸಂಪರ್ಕಿಸಿ, ಅವರ ಅನುಭವಗಳನ್ನು, ಅಭಿಪ್ರಾಯಗಳನ್ನು, ಆಲೋಚನೆಗಳನ್ನು ಕೇಳಿ, ಅವಲೋಕಿಸಿ ಸಂಗ್ರಹಿಸಲಾಗುವುದು. ಪ್ರಶ್ನಾವಳಿಗಳನ್ನೊ, ಸಂದರ್ಶಕ ಕೈಪಿಡಿಗಳನ್ನೊ, ತಪ್ಸೀಲುಗಳನ್ನೊ, ಉಪಯೋಗಿಸಿಕೊಂಡು ಜನರನ್ನು ಕಂಡು ಅವರಿಂದ ಮಾಹಿತಿಯನ್ನು ಸಂಗ್ರಹಿಸಲಾಗುವುದು. ಬರಿಯ ಕೇಳುವುದರಿಂದಲೇ, ಅದರಲ್ಲೂ ಒಮ್ಮೆಯೇ ಕೇಳುವುದರಿಂದಲೇ, ಬೇಕಾದ ಮತ್ತು ಬೇಕಾದ ಪ್ರಮಾಣದಲ್ಲಿ ಮಾಹಿತಿ ದೊರೆಯುತ್ತದೆಯೆಂಬ ಭರವಸೆಯಿಲ್ಲ. ಸಂಶೋಧಕನು ಪರೀಕ್ಷಕನು ಜನರನ್ನು ದೂರದಿಂದಲೊ ಅಥವಾ ಅವರೊಡನೆ ಬೆರೆತೊ, ಅವಲೋಕಿಸಿಯೊ ಅವರ ಮತ್ತು ಅವರ ಸುತ್ತುಮುತ್ತಣ ಜೀವನದ ಪರಿಯನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಾನೆ. ಆದ ಅನುಭವಗಳನ್ನು, ಇರುವ ಅಭಿಪ್ರಾಯವನ್ನು, ಮಾಡಿದ ಆಲೋಚನೆಗಳನ್ನು ಅಳವಡಿಸಿಕೊಂಡಿರುವ ಆಚರಣೆಗಳನ್ನು, ಸಮಸ್ಯೆಗಳನ್ನು ಮತ್ತು ಶಕ್ತಿಸಾಮರ್ಥ್ಯಗಳನ್ನು, ಕನಸು ಆಶಯಗಳನ್ನು, ಭವಿಷ್ಯದಲ್ಲಿ ಅನುಸರಿಸುವ ಕ್ರಮಗಳನ್ನು, ಕೈಗೊಳ್ಳುವ ಉಪಕ್ರಮಗಳನ್ನು, ಎದುರಿಸುವ ಆಹ್ವಾನಗಳನ್ನು, ಕುಟುಂಬದ ಒಳ-ಹೊರಗೆ ಹೊಂದಿರುವ ಸಂಬಂಧಗಳನ್ನು, ಆರ್ಥಿಕ-ರಾಜಕೀಯ-ಧಾರ್ಮಿಕ-ಸಾಂಸ್ಕೃತಿಕ ವಿಷಯಗಳಲ್ಲಿ ತಮ್ಮ ಸ್ಥಾನ—ಪಾತ್ರಗಳ ಪರಿಚಯವನ್ನು ಜನರಿಂದ ಸಂಗ್ರಹಿಸಲಾಗುವುದು.

ಸಂಗ್ರಹದ ಷಡ್ಯಂತ್ರಗಳು

ಜನರು ಸಾಮಾನ್ಯವಾಗಿ ಇದ್ದುದನ್ನು ಇದ್ದ ಹಾಗೆ ಹೇಳುವುದುಂಟು. ಆದರೂ ವಸ್ತುನಿಷ್ಠತೆಯ ಗೀಳು ಹಚ್ಚಿಕೊಂಡ ಸಂಶೋಧಕನು ಜನರ ಬಗ್ಗೆ ಅನುಮಾನವನ್ನು ಹೊಂದಿರುತ್ತಾನೆ. ಮರೆವೆಯಿಂದಲೊ, ಅಜ್ಞಾನದಿಂದಲೊ, ಸಂಕೋಚ-ಭಯ

ಗಳಿಂದಲೊ, ಮನದಾಳದಲ್ಲಿನ ಅಡೆ-ತಡೆಗಗಳಿಂದಲೊ, ನಂಬಿಕೊಂಡ ಮೌಲ್ಯಗಳ ಒತ್ತಡದಿಂದಲೊ ಜನರು ಯಥಾವತ್ತಾಗಿ ಮಾಹಿತಿಯನ್ನು ನೀಡದೆ ಹೋಗುವ ಸಾಧ್ಯತೆಯನ್ನು ಸಂಶೋಧಕನು ಅನುಮಾನಿಸುತ್ತಾನೆ. ಅದಕ್ಕಾಗಿಯೇ ಮಾಹಿತಿ ದಾರರನ್ನು, ಯಾರು ಅಧ್ಯಯನದ ಗುರಿಯಲ್ಲವೊ ಅಂಥವರನ್ನೂ, ಮೇಲಿಂದ ಮೇಲೆ, ಮರೆಮಾಚಿ, ಇದ್ದಕ್ಕಿದ್ದ ಹಾಗೆ ವಿಚಾರಿಸಿ ವಿಷಯ ಸಂಗ್ರಹಿಸುತ್ತಾನೆ. ಮನ ಶ್ಶಾಸ್ತ್ರೀಯ ಉಪಕರಣಗಳನ್ನು ಉಪಯೋಗಿಸಿಯೂ ಮಾಹಿತಿ ಸಂಗ್ರಹಿಸುವುದುಂಟು. ಅಸ್ವಾಭಾವಿಕ ಪರಿಸ್ಥಿತಿಯನ್ನು, ಪರೀಕ್ಷಾರ್ಥವಾಗಿ ಸೃಷ್ಟಿಮಾಡಿ ಜನರನ್ನು ನಿಕಷಕ್ಕೆ ಗುರಿ ಮಾಡುವುದುಂಟು. ಜಡವಸ್ತುಗಳನ್ನು, ಸಸ್ಯಪ್ರಾಣಿಗಳನ್ನು ಪರೀಕ್ಷಿಸಿ ವಿಷಯ ಸಂಗ್ರಹಿಸುವುದು ಸಾಪೇಕ್ಷವಾಗಿ ಸುಲಭ. ಆದರೆ, ಚಂಚಲಮನದ, ಸಂಚಲನಾತ್ಮಕ ಸ್ವಭಾವದ ಮಾನವನನ್ನು ಅರ್ಥಮಾಡಿಕೊಳ್ಳುವುದು ಅಷ್ಟು ಸುಲಭವಲ್ಲ. ಆದುದ ರಿಂದಲೇ ಕೃತಕವಾಗಿ (ಸಹಜವೊ, ಎಂಬಂತೆ ತೋರುವ) ನಿಯಂತ್ರಿತ ಪರಿಸ್ಥಿತಿಯನ್ನು ಸೃಷ್ಟಿಸಿ, ಜನರನ್ನು ಪರೀಕ್ಷಿಸಿ, ಮಾಹಿತಿ ಸಂಗ್ರಹಿಸಲಾಗುತ್ತದೆ.

ಕುರ್ಚಿಚಿಂತಕರು ಜನರಿಂದ ದೂರ ಉಳಿದರೆ, ಸಮಾಜ ವಿಜ್ಞಾನಗಳ ಕಾರ್ಯಕರ್ತರು ಜನರ ನಡುವೆಯೇ ಇದ್ದು, ತಮ್ಮ ಊಹೆಗಳನ್ನು, ಗ್ರಹಿಕೆಗಳನ್ನು, ಪ್ರಮೇಯಗಳನ್ನು ಮುಂದಿರಿಸಿಕೊಂಡು ಷಡ್ಯಂತ್ರಗಳ ಪ್ರಯೋಗದ ಮೂಲಕ ಜನ ರಿಂದ ವಿಷಯ ಸಂಗ್ರಹಿಸುತ್ತಾರೆ. ಸೈದ್ಧಾಂತಿಕ ಚೌಕಟ್ಟನ್ನು ನಿರ್ಮಿಸಲು ಅಥವಾ ಪ್ರಮೇಯದ ಚೌಕಟ್ಟನ್ನು ಪರೀಕ್ಷಿಸಲು, ಅಥವಾ ಪರಿವರ್ತನೆಯ ಮತ್ತು ಅಭ್ಯುದಯದ ಉಪಕ್ರಮಗಳನ್ನು ಕೈಗೊಳ್ಳಲು ಸೂಕ್ತವಾದ, ಅಂದರೆ, ವಸ್ತುನಿಷ್ಠವಾದ ವಿಷಯವು ಬೇಕಾಗುತ್ತದೆ. ಅದಕ್ಕಾಗಿಯೇ ಇಂಥ ಹುಡುಕಾಟ, ತಡಕಾಟ.

ಕೊಡು-ಕೊಳ್ಳುವ ವ್ಯವಹಾರ

ಮನುಷ್ಯರಿಂದ ವಿಷಯ ಸಂಗ್ರಹಿಸಿದ ಮಾನವ ಶಾಸ್ತ್ರಜ್ಞರು, ಮಾನವಕುಲ ಶಾಸ್ತ್ರಜ್ಞರು, ಇತರ ಸಮಾಜವಿಜ್ಞಾನಿಗಳು ಆ ಜನರಿಗೆ ಕೃತಜ್ಞತೆಯ ದ್ಯೋತಕ ವಾಗಿಯೊ, ಒಂದು ತೆರನ ಪರಿಹಾರ ಅಥವಾ ಧಾರಣೆಯಾಗಿಯೊ, ಹಣವನ್ನೊ, ವಸ್ತುವನ್ನೊ, ಕೊಡುವುದುಂಟು. ಜನರ ಸಮಯವನ್ನು ವಿಜ್ಞಾನಿಗಳು ಬಳಸಿಕೊಳ್ಳು ವುದರಿಂದ ಆ ಸಮಯಕ್ಕೆ ಸೂಕ್ತವಾದ ಪರಿಹಾರ ನೀಡದಿದ್ದರೆ ಹೇಗೆ? ವ್ಯಾವಹಾರಿಕ ಜಗತ್ತಿನಲ್ಲಿ ಕೊಡುಕೊಳ್ಳುವಿಕೆಯು ಸಹಜವಾದ ನಡವಳಿಕೆಯಾಗುತ್ತದೆ. ಮಾಹಿತಿಗೆ ಸಮಾನವೆಂದು ಬಗೆಯುವ ಹಣ-ವಸ್ತುಗಳು ವಿನಿಯೋಗದ ಪ್ರಕ್ರಿಯೆಯ ಭಾಗವಾಗಿ ಬಿಡುತ್ತವೆ.

ಮಾಹಿತಿ ಸಂಗ್ರಹ ಮಾಡುವವರು ಮಾಹಿತಿದಾರರಿಗೆ ಪರಿಹಾರವಾಗಿ ಏನಾದರೂ ಕೊಡುವುದು ನೈತಿಕ ಪ್ರಶ್ನೆಯನ್ನು ಕೆದಕಬಹುದು. ಸಂಶೋಧನೆಯೆಂಬುದು

ಸಾಮಾನ್ಯ ಬದುಕಿನ ವ್ಯವಹಾರವೆ ? ಮಾಹಿತಿಗೆ, ಮಾಹಿತಿದಾರನ ಸಮಯಕ್ಕೆ, ಕೊನೆಗೆ ಮಾಹಿತಿದಾರನ ವ್ಯಕ್ತಿತ್ವಕ್ಕೆ ಈ ಮುಖವಾಗಿ ಬೆಲೆ ಕಟ್ಟಿದಂತಾಗುವುದಿಲ್ಲವೆ ? ಏನೂ ಕೊಡದೆ ಹಾಗೆಯೇ ಹೋಗುವುದು ಇನ್ನೂ ಅನೈತಿಕವಲ್ಲವೆ ? ಏನಾದರೂ ಪಡೆಯುವ ಆಮಿಷಕ್ಕೆ ಒಳಗಾದವರು ಮಾಹಿತಿಯನ್ನು ನೀಡಿ ತಮ್ಮ 'ಋಣ'ವನ್ನು ತೀರಿಸಿಕೊಳ್ಳುತ್ತಾರೆ ; ಇಲ್ಲವೆ, ಆಸೆಬುರುಕವಾಗಿ ಇಲ್ಲದುದನ್ನೆಲ್ಲಾ ಕತೆಕಟ್ಟಿ ಹೇಳುತ್ತಾ ಹೋಗುತ್ತಾರೆ. ಇದರಿಂದ ವೈಜ್ಞಾನಿಕ ಶೋಧಕ್ಕೆ ಧಕ್ಕೆಯಾಗುತ್ತದೆ. ಇಲ್ಲವೆ, ಆಸೆಬುರುಕವಾಗಿ ಇಲ್ಲದುದನ್ನೆಲ್ಲಾ ಕತೆಕಟ್ಟಿ ಹೇಳುತ್ತಾ ಹೋಗುತ್ತಾರೆ. ಇದರಿಂದ ವೈಜ್ಞಾನಿಕ ಶೋಧಕ್ಕೆ ಧಕ್ಕೆಯಾಗುತ್ತದೆ ; ಮತ್ತು ಜನರು 'ಮೋಸ ಮಾಡಲು' ಅವಕಾಶವನ್ನು ಕಲ್ಪಿಸಿದಂತಾಗುತ್ತದೆ. ಹೀಗಾಗಿ ಅನೈತಿಕ ವಾತಾವರಣವು ಸೃಷ್ಟಿಯಾಗುವ ಸಾಧ್ಯತೆ ಇರುತ್ತದೆ.

ಇಂದಿನ ಭಾರತೀಯ ಸಂದರ್ಭದಲ್ಲಿ ಮಾಹಿತಿ ಸಂಗ್ರಹಕಾರನ ಸ್ಥಾನಮಾನದ ಅಳತೆಯೂ ಆಗುವುದುಂಟು. ಮಾಹಿತಿದಾರ ಅಥವಾ ಮಾಹಿತಿದಾರನನ್ನು ಪರಿಚಯಿಸುವವನು ಅಥವಾ ದಾಖಲೆಗಳನ್ನು ಒದಗಿಸುವವನು ಸ್ಥಳೀಯ ಶೋಧಕ ನನ್ನು, ಅವನು ಎಷ್ಟೇ ಪ್ರತಿಭಾವಂತನಾಗಿದ್ದರೂ, ನಿರ್ಲಕ್ಷ್ಯದಿಂದ ನಡೆಸಿಕೊಳ್ಳುವು ದುಂಟು, ಸೂಕ್ತವಾದ ಮಾಹಿತಿಯನ್ನು ಒದಗಿಸದೇ ಹೋಗುವುದುಂಟು, ಇದಕ್ಕೆ ತದ್–ವಿರುದ್ಧವಾಗಿ ಪರದೇಶೀಯನು ಅಥವಾ ಸಂಶೋಧಕಿ ಬಂದರೆ ಮಾಹಿತಿಯನ್ನು ಹೆಚ್ಚು ಶೀಘ್ರವಾಗಿ, ಹೆಚ್ಚು ಪ್ರಮಾಣಬದ್ಧವಾಗಿ ನೀಡುವ ಸಾಧ್ಯತೆ ಇದೆ. ಇಂಥ ನಡವಳಿಕೆಯೂ ಅನೈತಿಕವಾದದ್ದೆಂದೇ ಗಣಿಸಬೇಕಾಗುತ್ತದೆ.

ಮಾಹಿತಿದಾರನು ಅಥವಾ ಅವನನ್ನು ಒದಗಿಸುವವನು ಸಂಶೋಧಕನ ಬಗ್ಗೆ ಅನೇಕ ಸಂಶಯಗಳನ್ನು ಹೊಂದಿರುತ್ತಾನೆ. ತನ್ನ ಮಾಹಿತಿಯಿಂದ ಇವನಿಗೆ ಅಪಾರ ವಾದ ಲಾಭವಿದ್ದೆ ಎಂಬ ಗ್ರಹಿಕೆ ಆತನದ್ದು. ಆದುದರಿಂದಲೇ ಅವನಿಂದ ಎಷ್ಟು ಸಾಧ್ಯವೊ ಅಷ್ಟನ್ನು ಕಿತ್ತುಕೊಳ್ಳುವುದರ ಬಗೆಗೇ ಅವನು ಆಲೋಚಿಸುವ ಸಾಧ್ಯತೆ ಇದೆ. ಹೀಗಾಗಿ ಇಲ್ಲಿ ಕೂಡಾ ಹಲವಾರು ನೈತಿಕ ಪ್ರಶ್ನೆಗಳು ಉದ್ಭವಿಸುತ್ತವೆ.

ಸಂಶೋಧನೆಯ ಪ್ರಕ್ರಿಯೆಯಲ್ಲಿ ಅದರಲ್ಲೂ ಮಾಹಿತಿ ಸಂಗ್ರಹಿಸುವ ವಲಯದಲ್ಲಿ, ಜನರು ಪಾರಸ್ಪರಿಕವಾಗಿ ಹೇಗೆ ನಡೆದುಕೊಳ್ಳುತ್ತಾರೆ. ಹೇಗೆ ಅಪನಂಬುಗೆಯಿಂದ, ಕೊಡುಕೊಳ್ಳುವ ನೆಲೆಯಿಂದ ವರ್ತಿಸುತ್ತಾರೆ, ಎಂಬುದು ವಿದಿತವಾಗುತ್ತದೆ.

ಹಂಚಿಕೊಳ್ಳಬೇಕಾದ ಹೊಣೆ

ಸಂಶೋಧನೆಯು ದಿನದಿಂದ ದಿನಕ್ಕೆ ಸಂಕೀರ್ಣವಾಗುತ್ತಿದೆ, ಹೆಚ್ಚು ಹೆಚ್ಚಾಗಿ ತಾಂತ್ರಿಕವಾಗುತ್ತಿದೆ. ಮಾಹಿತಿ ಸಂಗ್ರಹಕಾರ ಅಥವಾ ಸಂಶೋಧಕನು ಮಾಹಿತಿ

ದಾರನನ್ನು ಒಂದು ಆಕರವೆಂದು ಬಗೆಯುವುದೂ, ಮಾಹಿತಿದಾರನು ಸಂಶೋಧಕನನ್ನು ಶೋಧಕನೆಂದು ತಿಳಿಯುವುದೂ, ಅವರಿಬ್ಬರೊಳಗೆ ಇರುವ ಸೇತುಗಟ್ಟಲಸಾಧ್ಯವಾದ ಕಂದರವೇ ಕಾರಣವೆಂದು ತೋರುತ್ತದೆ. ಅವರಿಬ್ಬರೊಳಗೆ ಅನುನಯ ಸಂಬಂಧವು ಏರ್ಪಡದೇ ಹೋಗುವುದರಿಂದ, ವೈಜ್ಞಾನಿಕ ಸತ್ವಗಳು ಜನರ ಸ್ವತ್ತುಗಳಾಗಿರುತ್ತವೆಂದು ಒಪ್ಪಿಕೊಳ್ಳದೇ ಹೋಗುವುದರಿಂದ, ಇಬ್ಬರೂ ಒಗ್ಗೂಡಿ, ಪಾಲ್ಗೊಂಡ ಪ್ರಕ್ರಿಯೆಯ ಭಾಗವಾಗಿ, ಸಂಶೋಧನಾ ಪ್ರಕ್ರಿಯೆಯಲ್ಲಿ ಕ್ರಿಯಾಸಕ್ತರಾಗದೇ ಹೋಗುವುದರಿಂದ ಇಂಥ ಅಪನಂಬುಗೆಗಳೂ, ಶೋಷಣೆಯೂ, ಅಮಾನವೀಯ ನಡವಳಿಕೆಗಳೂ ಉದ್ಭವಿಸುವುದುಂಟು. ಅಂದರೆ, ಸಮಾಜ ವಿಜ್ಞಾನಗಳಲ್ಲಿನ ಶೋಧಕಾರ್ಯವು ಹೊಣೆಯನ್ನು ಹಂಚಿಕೊಂಡ ಸಾಮಾಜಿಕ ಕ್ರಿಯೆಯಾಗದೇ ಹೋದರೆ ಅನೇಕ ಅಪರಿಹಾರ್ಯ ನೈತಿಕ ಪ್ರಶ್ನೆಗಳ ಗಂಟುಗಳೇ ಸೃಷ್ಟಿಯಾಗಬಹುದು.

ಸಂಶೋಧನೆಯಿಂದ ಜ್ಞಾನದ ನಿಧಿಯು ಹೆಚ್ಚುವುದರಿಂದ ಮನುಷ್ಯನ ಜೀವನವೇ ಸಂಪದ್ಭರಿತವಾಗುತ್ತದೆ. ತೋರಿಕೆಗೆ ಕೇವಲ ಕೆಲವರಿಗೇ ಉಪಯೋಗವಾಗುತ್ತದೆಯೆಂದು ಕಂಡರೂ ಆಳದಾಳದಲ್ಲಿ ಇಡೀ ಮಾನವ ಸಮಾಜದ ಒಳಿತನ್ನು ಈ ಜ್ಞಾನ ನಿಧಿಯ ಒಡಲಲ್ಲಿ ಕಾಣಬಹುದು. ಆದರೆ ಜನರು ಸಕ್ರಿಯೆಯಿಂದ ಪಾಲ್ಗೊಂಡು ಬೆಳೆಸಿದ ನಿಧಿಯಾದರೆ ಮಾತ್ರವೇ ಒಳಿತು ಹುದುಗಿರುತ್ತದೆ, ಉದ್ಭವವಾದ ಪ್ರಶ್ನೆಗಳಿಗೆ ಪರಿಹಾರ ದೊರೆಯುತ್ತದೆ.

ವಿಶ್ಲೇಷಣೆ—ವ್ಯಾಖ್ಯಾನ

ಸಂಶೋಧನೆಯು, ಆದರಲ್ಲೂ ಸಮಾಜ ವಿಜ್ಞಾನದಲ್ಲಿನ ಸಂಶೋಧನೆಯು, ಅಪೇಕ್ಷಿತ ವಿಶೇಷ, ವಿಷಯ, ಅಂಶ, ಸಮಸ್ಯೆ ಇದನ್ನು ಗುರುತಿಸುವುದರಿಂದ ಆರಂಭವಾಗಿ ಅದರ ನಿಖರವಾದ ಸ್ವರೂಪ, ವೈಲಕ್ಷಣ್ಯ, ಚರ್ಯೆ ಇದನ್ನು ಕಂಡುಹಿಡಿದು ಇದರ ವಿವರವಾದ ವರದಿಯನ್ನು ಸಿದ್ಧಗೊಳಿಸುವುದರಲ್ಲಿ ಕೊನೆಗೊಳ್ಳುತ್ತದೆ. ಆರಂಭದಿಂದ ಕೊನೆಯವರೆಗೆ ಕನಿಷ್ಠ ಏಳು ಮಜಲುಗಳನ್ನು ಸಂಶೋಧನೆಯು ಕ್ರಮಿಸುತ್ತದೆ. ಸಂಶೋಧನೆಯಲ್ಲಿನ ಅತ್ಯಂತ ಪ್ರಮುಖವಾದ ಆರನೆಯ ಮಜಲು ವಿಶ್ಲೇಷಣೆ ಮತ್ತು ವ್ಯಾಖ್ಯಾನ ಪ್ರಕ್ರಿಯೆ. ಈ ಪ್ರಕ್ರಿಯೆಯಿಂದಲೇ ವಸ್ತುವಿನ ಯಥಾಸ್ಥಿತಿಯ ಸ್ವರೂಪದ ಜ್ಞಾನವನ್ನು ಪಡೆಯಲು ಸಾಧ್ಯವಾಗುತ್ತದೆ. ಸಂಶೋಧನೆಯ ಇಡೀ ಪ್ರಕ್ರಿಯೆಯನ್ನು ವೈಜ್ಞಾನಿಕ ಮಾರ್ಗದೃಷ್ಟಿಯಿಂದ ನಡೆಸಬೇಕು. ಅಂದರೆ, ವಿಶ್ಲೇಷಣೆ-ವ್ಯಾಖ್ಯಾನವು ವೈಜ್ಞಾನಿಕವಾಗಿ ಮತ್ತು ಸೂತ್ರಬದ್ಧವಾಗಿ ಆಗಬೇಕಾಗುತ್ತದೆ.

ವೈಜ್ಞಾನಿಕ ಅವಳಿ ಮಾರ್ಗದೃಷ್ಟಿಗಳು

ವೈಜ್ಞಾನಿಕ ಮಾರ್ಗದೃಷ್ಟಿಯನ್ನು ಕನಿಷ್ಠ ಎರಡು ಭಾಗಗಳನ್ನಾಗಿ ನಾವು

ಗುರುತಿಸಬಹುದು. ಈ ಭಾಗಗಳನ್ನು ಸಾಪೇಕ್ಷವಾದ ಸ್ವತಂತ್ರ ಮಾರ್ಗದೃಷ್ಟಿಗಳಿಂದ ವಿಂಗಡಿಸಬಹುದು. ಮೊದಲನೆಯದು ಸಮಗ್ರ ಮಾರ್ಗದೃಷ್ಟಿ (Comprehensive Approach) ಮತ್ತು ಎರಡನೆಯದು ಅಖಂಡ ಮಾರ್ಗ ದೃಷ್ಟಿ (Integrated Approach). ಇವು ಅವಿನಾಭಾವದಿಂದಿರುವುದನ್ನು ನಾವು ಗಮನಿಸಬಹುದು. ಈ ಎರಡೂ ಮಾರ್ಗದೃಷ್ಟಿಗಳು ವೈಜ್ಞಾನಿಕವಾಗಿಯೇ ಇರಬೇಕೆಂದು ಒತ್ತಿ ಹೇಳುವ ಅಗತ್ಯವಿಲ್ಲ. ಅಂದರೆ, ವಸ್ತುನಿಷ್ಠತೆ, ಅಕಳಂಕ ವಿಶುದ್ಧ ದೃಷ್ಟಿ, ಪೂರ್ವಗ್ರಹ ಪೀಡಿತವಲ್ಲದ ಮತ್ತು ಹೊಸ ವಿಷಯ ಅಂಶಗಳಿಗೆ ಸದಾ ಎಚ್ಚರಿಕೆಯ ಸ್ವಾಗತ ನೀಡಲಿಕ್ಕಾಗಿರುವ ತೆರೆದ ಮನಸ್ಸು, ನಿರ್ದಿಷ್ಟ, ಮತ್ತು ನಿರ್ದುಷ್ಟ ಮನಸ್ಸು. ಬಂದುದೆಲ್ಲವನ್ನೂ ಸದಾ ಪ್ರಶ್ನಿಸುವ, ಮತ್ತು ಅದನ್ನು ನಿಕಷಕ್ಕೆ ಒಡ್ಡುವ ಆತುರ, ಅನವಶ್ಯಕವಾದುದನ್ನು ನಿರ್ವ್ಯಾಜದಿಂದ ತ್ಯಜಿಸುವ ನಿರಂಜನತ್ವ, ನಿರ್ಲಿಪ್ತತೆ, ಇತ್ಯಾದಿಗಳೆಲ್ಲಾ ವೈಜ್ಞಾನಿಕ ದೃಷ್ಟಿಯ ವಿಶಿಷ್ಟಾಂಶಗಳು. ಇಂಥ ದೃಷ್ಟಿಯೇ ಈ ಎರಡೂ ಮಾರ್ಗದೃಷ್ಟಿಗಳಿಗೆ ಚೈತನ್ಯವಾಗಿರುತ್ತದೆ.

ಸಮಗ್ರ ಮಾರ್ಗದೃಷ್ಟಿಯಿಂದ ಪರಿಶೀಲಿಸಬೇಕೆಂದರೆ, ಎಲ್ಲ ಅಂಶಗಳನ್ನೂ, ಎಲ್ಲ ಭಾಗಗಳನ್ನೂ, ಎಲ್ಲ ಮೂಲೆಗಳನ್ನೂ ಒಟ್ಟಾಗಿ ನೋಡಬೇಕಾಗುತ್ತದೆ ಎಂದು ಅರ್ಥ. ಯಾವುದನ್ನಾದರೂ ಕಡೆಗಣಿಸಿದರೆ ಅಷ್ಟರಮಟ್ಟಿಗೆ ಅದು ಅಸಮಗ್ರವಾಗುತ್ತದೆ, ವಸ್ತುವಿನ ಸರಿಯಾದ ಪರಿಚಯಕ್ಕೆ ಭಂಗವಾಗುತ್ತದೆ. ಇದಕ್ಕೆ ಕಾರಣವೆಂದರೆ, ವಸ್ತುವಿನ ಭಾಗಗಳಿಗಿರುವ ಅಖಂಡತ್ವ. ಅಂದರೆ, ಅಖಂಡ ಮಾರ್ಗದೃಷ್ಟಿಯಿಂದ ವಸ್ತುವನ್ನು ಅಭ್ಯಸಿಸುವ ಅಗತ್ಯವಿದೆ. ಯಾಕೆಂದರೆ, ಎಲ್ಲ ಭಾಗ-ವಿಭಾಗಗಳು ಕ್ರಿಯಾತ್ಮಕವಾದ ಸಂಬಂಧಗಳನ್ನು ಆಂತರಿಕವಾಗಿ ಹೊಂದಿರುತ್ತವೆ. ಯಾವುದೇ ಒಂದನ್ನು ಹೊರತುಪಡಿಸಿದರೆ ಇನ್ನೊಂದು ಅರ್ಥವೇ ಆಗುವುದಿಲ್ಲ ಅಥವಾ ಅಪಾರ್ಥವಾಗುತ್ತದೆ. ಒಂದು ಇನ್ನೊಂದಕ್ಕೆ ಕಾರಣವಾಗಿರಬಹುದು, ಇಲ್ಲವೆ ಪರಿಣಾಮವಾಗಿರಬಹುದು. ಕಾರಣ-ಪರಿಣಾಮಗಳು ಸಾಪೇಕ್ಷಾಂಶಗಳೆಂದು, ಅವು ಕೇವಲ ಅಥವಾ ನಿರುಪಾಧಿಕಗಳಲ್ಲವೆಂದು ನಾವು ತಿಳಿಯಬೇಕು. ಅಂದರೆ, ಅಖಂಡ ಮಾರ್ಗದೃಷ್ಟಿಯು ಸಮಗ್ರ ಮಾರ್ಗದೃಷ್ಟಿಗೆ ಹಾದಿ ಮಾಡಿಕೊಡುತ್ತದೆ. ಖಂಡ ಅಥವಾ ಅಸಮಗ್ರ ಮಾರ್ಗದೃಷ್ಟಿಯಿಂದ ವಸ್ತುಗಳು ವಿರೂಪಗೊಂಡು ಗೋಚರಿಸುತ್ತವೆ. ಇದರಿಂದ ದುಷ್ಟ-ಪರಿಣಾಮ ಉಂಟಾಗುತ್ತದೆ, ಎಂದು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ.

ಈ ಮಾರ್ಗದೃಷ್ಟಿಗಳು ಕೆಲವು ಗ್ರಹಿಕೆಗಳನ್ನು ಆಧಾರಗೊಂಡು ರೂಪಿತವಾಗುತ್ತವೆ. ಜಗತ್ತಿನ ಯಾವ ಸಂಗತಿಯೂ ಮೂಲತಃ ಸರ್ವತಂತ್ರ ಸ್ವತಂತ್ರವಲ್ಲ. ಜಗತ್ತನ್ನು ನಾಲ್ಕು ಪ್ರಮುಖ ಪ್ರಕಾರಗಳನ್ನಾಗಿ ವಿಂಗಡಿಸಿ, ಗುರುತಿಸಬಹುದು. ಜಡವಸ್ತುನಿಕರ, ಸಸ್ಯಸಂಪತ್ತು, ಪ್ರಾಣಿಪಕ್ಷಿಜಾತಿ ಮತ್ತು ಮನುಕುಲ. ಇವು

ಒಂದರಿಂದ ಇನ್ನೊಂದು ಭಿನ್ನವಾಗಿ ತೋರುತ್ತವೆ. ಜಡವಸ್ತುಗಳಾದ ಕಲ್ಲು-ಮಣ್ಣುಗಳು, ನೀರು-ಬೆಳಕುಗಳು, ಗಾಳಿ-ಆಕಾಶಗಳು ನಿರ್ಜೀವ ವಸ್ತುಗಳೆಂದು ತಿಳಿಯಲಾಗುತ್ತದೆ. ಮಣ್ಣಿನ ಮೇಲೆ, ನೀರಿನ ಮೇಲೆ, ಕೆಲವೊಮ್ಮೆ ಗಾಳಿಯಲ್ಲಿಯೇ ಹುಟ್ಟಿ, ಬೆಳೆದು ಅಳಿದು ಹೋಗುವ ಗಿಡ-ಮರ-ಬಳ್ಳಿಗಳು ಜೀವ ಪಡೆದಿವೆ; ಇವುಗಳಿಗೆ ಚಲನ ಶಕ್ತಿಯುಂಟೆಂದು ಬಗೆಯಲಾಗುತ್ತದೆ. ಮೂರನೆಯ ಪ್ರಕಾರದಲ್ಲಿ ಪ್ರಾಣಿ-ಪಕ್ಷಿಗಳು, ಕ್ರಿಮಿ-ಕೀಟಗಳು ಸೇರುತ್ತವೆ. ಇವುಗಳು ನೆಲದ ಮೇಲೆ, ನೀರಿನಲ್ಲಿ, ಆಕಾಶದಲ್ಲಿ (ಅವುಗಳ ಶರೀರ ರಚನೆಯ ಅನ್ವಯ) ಹುಟ್ಟುತ್ತವೆ, ಚಲಿಸುತ್ತವೆ, ಜೀವಿಸುತ್ತವೆ, ಅಳಿದು ಹೋಗುತ್ತವೆ. ಇವುಗಳಿಗೆ ಜಡ-ಶರೀರ, ಅದರೊಳಗೆ ಪ್ರಾಣ, ಜೊತೆಗೆ ಪ್ರಜ್ಞೆ ಇರುತ್ತವೆ. ಪ್ರಾಣವಿರುವುದರಿಂದ ಹುಟ್ಟು ಸಾವುಗಳ ಪ್ರಕ್ರಿಯೆಗೆ ಸಸ್ಯಗಳಂತೆ ಇವೂ ಒಳಗಾಗುತ್ತವೆ. ಇವುಗಳಿಗೆ ವಿಶಿಷ್ಟವಾದ ಪ್ರಜ್ಞೆ ಇರುವುದರಿಂದ ಪರಿಸರದಲ್ಲಿನ ಆಗು-ಹೋಗುಗಳಿಗೆ ಸ್ಪಂದಿಸುತ್ತವೆ. ಈ ಸ್ಪಂದನವು ಸಹಜ ಪ್ರವೃತ್ತಿಯ ಕಾರಣದಿಂದಾದದ್ದು. ನಾಲ್ಕನೆಯ ಪ್ರಕಾರಕ್ಕೆ ಮನುಜಕುಲ ಸೇರುತ್ತದೆ. ಜಡದೇಹದಲ್ಲಿ ಪ್ರಾಣ, ಮತ್ತು ಪ್ರಜ್ಞೆ ಇರುವುದರ ಜೊತೆಗೆ ಸ್ವಪ್ರಜ್ಞೆ, ವಿವೇಕ, ಸಾರಾಸಾರ ವಿಚಾರವಂತಿಕೆ ಇರುತ್ತವೆ. ಈ ವೈಶಿಷ್ಟ್ಯವೇ ಅನ್ಯ ಮೂರು ಪ್ರಕಾರಗಳಿಂದ ಮನುಷ್ಯನನ್ನು ಭಿನ್ನವಾಗಿ ಪರಿಗಣಿಸಲು ಸಾಧ್ಯವಾಗಿದೆ. ಅನ್ಯ ಪ್ರಕಾರಗಳನ್ನು ಮಾತ್ರವಲ್ಲ ತನ್ನನ್ನೂ ಅಭ್ಯಸಿಸುವ ಶಕ್ತಿಯನ್ನು ಮನುಷ್ಯ ಪಡೆದಿದ್ದಾನೆ. ತನ್ನ ಹೊರಗನ್ನೂ ಒಳಗನ್ನೂ ಅರಿತುಕೊಳ್ಳುವ, ಅನ್ಯ ಪ್ರಕಾರಗಳ ಹೊರ-ಒಳಗನ್ನು ತಿಳಿದುಕೊಳ್ಳುವ, ಈ ನಾಲ್ಕೂ ಪ್ರಕಾರಗಳಿಗೆ ಇರುವ ಬಾಹ್ಯಾಂತರಿಕ ಸಂಬಂಧಗಳ ಸ್ವರೂಪವನ್ನು ಗುರುತಿಸುವ ಸಾಮರ್ಥ್ಯವನ್ನು ಅವನು ಪಡೆದುಕೊಂಡಿದ್ದಾನೆ. ಭೂತವನ್ನು ಮತ್ತು ವರ್ತಮಾನವನ್ನು ಅರ್ಥಮಾಡಿಕೊಳ್ಳುವ, ಭವಿಷ್ಯವನ್ನು, ಅಂದಾಜು ಮಾಡುವ, ಭವಿಷ್ಯಕ್ಕೆ ಇಚ್ಛಿತ ರೂಪ-ದಿಕ್ಕನ್ನು ನಿರ್ಧರಿಸುವ ಶಕ್ತಿಯನ್ನು ಅವನು ಹೊಂದಿದ್ದಾನೆ. ಇದುವರೆಗೆ ಹೇಳಿದ ಈ ಎಲ್ಲಾ ವಿವರಗಳು ಮನುಷ್ಯನು ವೀಕ್ಷಿಸಿ, ಚಿಂತಿಸಿ, ಪರಿಶೀಲಿಸಿ, ವಿಶ್ಲೇಷಿಸಿ, ಕ್ರೋಡೀಕರಿಸಿ ಕಂಡುಕೊಂಡುದುದರ ಪರಿಣಾಮ. ಈ ಸಂಗತಿಗಳು ಮನುಷ್ಯನ ಅನುಭವಕ್ಕೆ ಬರುವುದರಿಂದ ತಿಳಿದುಕೊಂಡವುಗಳೆಂಬುದು ನಿಜವಾದರೂ, ಅವನ ವೈಜ್ಞಾನಿಕ ಮನೋದೃಷ್ಟಿಯಿಂದಲೇ ಇವೆಲ್ಲಾ ವಿವರಗಳ ಅರಿವಾಗಿರುವುದು. ಈ ಅರಿವಿನಿಂದ ಜಗತ್ತಿನ ಸ್ಥಿತಿಗತಿಗಳು ಪಾರಸ್ಪರಿಕವಾಗಿ ಸಂಬಂಧವನ್ನು ಹೊಂದಿವೆ. ಒಂದನ್ನು ಬಿಟ್ಟು ಇನ್ನೊಂದು ಸರ್ವತಂತ್ರ ಸ್ವತಂತ್ರವಾಗಿ ಅಸ್ತಿತ್ವದಲ್ಲಿ ಇರಲಿಕ್ಕೆ ಸಾಧ್ಯವಿಲ್ಲ. ಇವುಗಳ ನಿಜರೂಪದ ಜ್ಞಾನವನ್ನು ಪಡೆಯಬೇಕಾದರೆ ಸಮಗ್ರ ಮತ್ತು ಅಖಂಡ ಮಾರ್ಗದೃಷ್ಟಿಗಳು ಅತ್ಯಗತ್ಯ, ಎಂದು ದೃಢಪಟ್ಟಿದೆ. ಅಂದರೆ, ಜಗತ್ತಿನ ಯಾವ ಸಂಗತಿಯಾದರೂ ಸರಿಯಾಗಿ ಅರ್ಥವಾಗಬೇಕಾದರೆ ಈ ಅವಳಿ ಮಾರ್ಗದೃಷ್ಟಿಯು ತಳಹದಿಯಾಗಿರಬೇಕಾಗುತ್ತದೆ. ಆದುದರಿಂದಲೇ ಸಂಶೋಧನೆಗೆ ಇವು ಬೇಕೇ ಬೇಕು.

ಶುದ್ಧ ಮತ್ತು ಆನ್ವಯಿಕ ಸಂಶೋಧನೆ

ವೈಜ್ಞಾನಿಕ ಮಾರ್ಗದೃಷ್ಟಿಗಳನ್ನು ಪರಿಶೀಲಿಸಿದ ಇದೇ ಸಂದರ್ಭದಲ್ಲಿ ನಾವು ಎರಡು ಪ್ರಮುಖ ಸಂಶೋಧನಾ ಪ್ರಕಾರಗಳನ್ನು ಪರಿಚಯಿಸಿಕೊಳ್ಳುವ ಅಗತ್ಯವಿದೆ. ಅವು ಶುದ್ಧ ಸಂಶೋಧನೆ (Pure Research) ಮತ್ತು ಅನ್ವಯಿಕ ಸಂಶೋಧನೆ (Applied Research) ಸಮಗ್ರ ಮತ್ತು ಅಖಂಡ ಮಾರ್ಗದೃಷ್ಟಿಗಳಂತೆ ಇವು ಕೂಡಾ ಒಂದಕ್ಕೊಂದು ಕ್ರಿಯಾತ್ಮಕ ಸಂಬಂಧವನ್ನು ಹೊಂದಿವೆ. ಇವು ನಿಗಮನ ತರ್ಕ (Deductive Logic) ಮತ್ತು ಅನುಗಮನ ಅನುಮಿತಿ ತರ್ಕ (Inductive Logic) ಇವುಗಳ ನೆರವನ್ನು ಪಡಿದಿರುತ್ತವೆ ಎಂಬುದನ್ನೂ ನಾವು ಮರೆಯುವಂತಿಲ್ಲ.

ಜಗತ್ತಿನ ಸ್ವರೂಪ ಮತ್ತು ಅದರಲ್ಲಿನ ಆಗುಹೋಗುಗಳ ಯಥಾಸ್ಥಿತಿಯನ್ನು ಅರಿತುಕೊಳ್ಳುವ ವಿಶಿಷ್ಟ ಶಕ್ತಿಯನ್ನು ಮನುಷ್ಯ ಪಡೆದಿದ್ದಾನೆಂದು ಈಗಾಗಲೇ ಕಾಣಿಸಲಾಗಿದೆ. ವಿಶ್ವದ ನಾಲ್ಕೂ ಪ್ರಕಾರಗಳು ಒಂದರೊಳಗೊಂದು ಕಾರಣ-ಪರಿಣಾಮುಗಳ ಪ್ರಕ್ರಿಯೆಯ ಪ್ರಕಾರ ಸೇರಿಕೊಂಡಿರುತ್ತವೆ. ಶುದ್ಧ ಮನಸ್ಸಿನಿಂದ ಪರಿಗಣಿಸುವುದಾದರೆ, ಮಾನವನ ಭಾವನೆ ಮತ್ತು ವಿಪರೀತ ಕಲ್ಪನೆಗಳನ್ನು ದೂರಸರಿಸಿ ಪರೀಕ್ಷಿಸುವುದಾದರೆ ಈ ನಾಲ್ಕು ಪ್ರಕಾರಗಳಲ್ಲಿ ಜಡವಸ್ತು ನಿಕರ ಮಾತ್ರವೇ ಇತರ ಪ್ರಕಾರಗಳ ನೆರವಿಲ್ಲದೆ ಅಸ್ತಿತ್ವದಲ್ಲಿ ಇರಲಿಕ್ಕೆ ಸಾಧ್ಯ. ತಾನು ಎಷ್ಟೇ ಬಲ್ಲಿದನೆಂದು ಬಗೆದಿದ್ದರೂ ಮಾನವನು ಇತರ ಮೂರು ಪ್ರಕಾರಗಳ ನೆರವಿಲ್ಲದಿದ್ದರೆ ಅಸ್ತಿತ್ವದಲ್ಲಿ ಇರಲಿಕ್ಕೆ ಸಾಧ್ಯವೇ ಇಲ್ಲ. ಈ ಎರಡು ವಿಪರೀತ ಕೊನೆಗಳ ನಡುವೆ ಸಸ್ಯ ಮತ್ತು ಪ್ರಾಣಿ ಪ್ರಕಾರಗಳು ಅವಲಂಬನ ಪರಿಮಾಣದ ಶ್ರೇಣಿಯೊಂದಿಗೆ ಉಯ್ಯಾಲೆಯಾಡುತ್ತ ಹೊಂದಿಕೊಂಡಿವೆ.

ಈ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಮನುಷ್ಯನು ನಿರ್ವ್ಯಾಜದಿಂದ ವಸ್ತುಗಳ ಅಧ್ಯಯನವನ್ನು ನಡೆಸಬೇಕಾಗುತ್ತದೆ. ಮಾನವನಿಗಿರುವ ಅದಮ್ಯ ಕುತೂಹಲ, ರಹಸ್ಯವನ್ನು ಭೇದಿಸುವ ಆತುರ, ವಿಶ್ವದ ರಚನೆಯನ್ನು ತಿಳಿದುಕೊಳ್ಳುವ ಹಂಬಲ, ಯಾವ ಯಾವ ನಿಯಮಗಳಿಗೆ ಮತ್ತು ಸೂತ್ರಗಳಿಗೆ ಅನುಗುಣವಾಗಿ ವಿಶ್ವದ ರಚನೆ ಮತ್ತು ಪರಿವರ್ತನೆ ಇರುತ್ತವೆಯೆಂಬುದನ್ನು ವೀಕ್ಷಿಸುವ ಮನೋಭಿಲಾಷೆಯು ಸಂಶೋಧನೆಗೆ ಅವನನ್ನು ತೊಡಗಿಸುತ್ತವೆ. ತನ್ನ ಕುತೂಹಲವನ್ನು ಮಾತ್ರವೇ ತಣಿಸುವ, ಸೈದ್ಧಾಂತಿಕ ಚೌಕಟ್ಟನ್ನು ರೂಪಿಸುವ ಸಂಶೋಧನೆಯು ಶುದ್ಧ ಸಂಶೋಧನೆ, ಎನ್ನಿಸಿಕೊಂಡರೆ ಆ ಸಂಶೋಧನೆಯಿಂದ ಉಣ್ಣುವ ಪರಿಣಾಮಗಳನ್ನು ಮಾನವ ಜೀವನಕ್ಕೆ ಉಪಯೋಗಿಸಿಕೊಳ್ಳುವ ಉದ್ದೇಶದಿಂದ ಕೈಗೊಳ್ಳುವ ಸಂಶೋಧನೆಯು ಅನ್ವಯಿಕ ಸಂಶೋಧನೆ ಎನ್ನಿಸಿಕೊಳ್ಳುತ್ತದೆ.

ಈ ಎರಡು ಪ್ರಕಾರಗಳು ಪಾರಸ್ಪರಿಕ ಸಂಬಂಧ ಹೊಂದಿವೆಯೆಂಬುದನ್ನು ಸಂಶೋಧಕರು ಅರಿತುಕೊಳ್ಳಬೇಕು. ಪ್ರಾಥಮಿಕ ಮತ್ತು ಮಾಧ್ಯಮಿಕ ಆಕರಗಳಿಂದ ಪಡೆಯುವ ದತ್ತಾಂಶಗಳ ಮೂಲಕ ಸೈದ್ಧಾಂತಿಕ ಚೌಕಟ್ಟನ್ನು ಕಟ್ಟಬಹುದು ಮತ್ತು ಮಾನವೋಪಯೋಗಿ ಕಾರ್ಯಗಳಿಗೆ ಶೋಧಗಳನ್ನು ಬಳಸಿಕೊಳ್ಳಬಹುದು. ಕ್ಷೇತ್ರಕಾರ್ಯವನ್ನು ಕೈಗೊಂಡು ವಸ್ತುಸ್ಥಿತಿಯನ್ನು ಕಂಡುಕೊಂಡು ಅನುಗಮನ ಅನುಮತಿಯ ತರ್ಕದಿಂದ ವಸ್ತುಗಳನ್ನು ಅಸ್ತಿತಿಯಲ್ಲಿ ಇರಿಸಿಕೊಂಡಿರುವ ಕಾರಣ ಸೂತ್ರಗಳನ್ನು ಕಟ್ಟಬಹುದು. ಈಗಾಗಲೇ ಸ್ಥಾಪಿತವಾಗಿರುವ ಸೈದ್ಧಾಂತಿಕ ಚೌಕಟ್ಟನ್ನು ಆಧಾರವಾಗಿರಿಸಿಕೊಂಡು ಕೆಲವು ಅನುಮಾನಗಳನ್ನು ನಿಗಮನ ತರ್ಕದಿಂದ ರೂಪಿಸಿಕೊಳ್ಳಬಹುದು.

ಕುತೂಹಲದಿಂದ ನೋಡಿಕೊಂಡ, ಅನುಭವದಿಂದ ತಿಳಿದುಕೊಂಡು ಪರಿವೀಕ್ಷಿಸಿ ಅರಿತುಕೊಂಡ ಹಲವಾರು ಮಾನವ ಸಂಬಂಧದ ವಿಷಯಗಳು ಪರಿಶೋಧನೆಯ ಕಕ್ಷೆಗೆ ಒಳಗಾಗುತ್ತವೆ. ವ್ಯಕ್ತಿ, ಗುಂಪು, ಕುಟುಂಬ, ಬಳಗ, ಸಮುದಾಯ, ಪ್ರದೇಶ, ಸಂಸ್ಕೃತಿ, ಮೌಲ್ಯಗಳು, ಕಲೆ, ಸಾಹಿತ್ಯ, ಆರ್ಥಿಕ—ರಾಜಕೀಯ–ಧಾರ್ಮಿಕ–ಐತಿಹಾಸಿಕ–ಶೈಕ್ಷಣಿಕ ವಿಶಿಷ್ಟಾಂಶಗಳು, ಜಾನಪದ, ಭಾಷೆ, ಮನೋದೃಷ್ಟಿಗಳು, ಪೂರ್ವಗ್ರಹಗಳು, ಆಲೋಚನೆಗಳು, ಅಭಿಪ್ರಾಯಗಳು, ಸಾಮಾಜಿಕ ಪ್ರಕ್ರಿಯೆಗಳು, ಒಲವು–ನಿಲುವುಗಳು, ಆಂದೋಲನಗಳು, ಇತ್ಯಾದಿ ಮಾನವ ಇಂದ್ರಿಯಾನುಭವದ ಸಂಗತಿಗಳೆಲ್ಲವೂ ಸಂಶೋಧನೆಯ ವಿಷಯಗಳೇ ಆಗಿವೆ. ಸಂಶೋಧಕನ ಆಶಯ ಮತ್ತು ಅನುಕೂಲಗಳಿಗೆ ಅನುಗುಣವಾಗಿ ಸಂಶೋಧನೆಯು ಶುದ್ಧವಾದುದಾಗಿರಬಹುದು ಅಥವಾ ಅನ್ವಯಿಕವಾಗಿರಬಹುದು.

ಯಾವ ಪ್ರಕಾರದ ಸಂಶೋಧನೆಯೇ ಆಗಿರಲಿ, ಅದು ವೈಜ್ಞಾನಿಕವಾಗಿರಬೇಕು, ವೈಧಾನಿಕವಾಗಿರಬೇಕು, ತಾರ್ಕಿಕವಾಗಿರಬೇಕು, ಒಪ್ಪಿದ ನಿಯಮಗಳಿಗನುಗುಣವಾಗಿ ನಡೆಯಬೇಕು. ಹಾಗಾದರೇನೇ ನಂಬುಗೆಗೆ ಅರ್ಹವಾದ ವಸ್ತುಗಳನ್ನು ಪಡೆಯಲು ಸಾಧ್ಯವಾಗುತ್ತದೆ.

ವಿಶ್ಲೇಷಣೆ–ವ್ಯಾಖ್ಯಾನದ ಪ್ರಾಮುಖ್ಯತೆ

ಸಂಶೋಧನೆಯ ಪ್ರಕ್ರಿಯೆಯ ಮಜಲುಗಳಲ್ಲಿ ವಿಶ್ಲೇಷಣೆ ಮತ್ತು ವ್ಯಾಖ್ಯಾನಗಳದ್ದು ಅತ್ಯಂತ ಮುಖ್ಯವಾದದ್ದು. ಈ ಪ್ರಕ್ರಿಯೆಯಿಂದಲೇ ವಸ್ತುವಿನ ಯಥಾಸ್ಥಿತಿಯ ಸ್ಪಷ್ಟ ಚಿತ್ರವು ನಮಗೆ ದೊರೆಯುತ್ತದೆ.

ಸಂಶೋಧನೆಯ ಪರಮ ಗುರಿ ಅಥವಾ ಗುರಿಗಳನ್ನು ಮೊತ್ತ ಮೊದಲಿಗೇ ನಿರ್ಧರಿಸಿ, ಆ ಗುರಿಗಳನ್ನು ಸಾಧಿಸಲು ಅಗತ್ಯವಾದ ಕ್ರಮಗಳನ್ನು ಅನುಸರಿಸಿ, ಸಂಶೋಧನೆಯನ್ನು ಪೂರೈಸಲಾಗುವುದು. ಅಪೇಕ್ಷಿಸಿದ ಗುರಿಗಳನ್ನು ತಲುಪದೇ

ಹೋಗುವ ಸಾಧ್ಯತೆಗಳಿದ್ದರೂ, ಸಂಶೋಧನೆಯ ಪ್ರಕ್ರಿಯೆಯು ನಿಯಮಬದ್ಧ ಅಥವಾ ಕ್ರಮಬದ್ಧವಾಗಿದ್ದರೆ ಸಾಕು ಸಂಶೋಧಕನು ಕೃತಕೃತ್ಯನಾಗುತ್ತಾನೆ. ಏಕೆಂದರೆ ಸಂಶೋಧನೆಯಲ್ಲಿ ಅನಿರೀಕ್ಷಿತ ಅಂಶಗಳು ಕಂಡುಬಂದು ಪೂರ್ವಸಿದ್ಧಾಂತವನ್ನು ತಲೆಕೆಳಗು ಮಾಡುವ ಸಾಧ್ಯತೆಯೂ ಉಂಟು. ಪೂರ್ವಸಿದ್ಧಾಂತವು ಯಾವಾಗಲೂ ಸಾಧಿತವಾಗುತ್ತದೆಯೆಂದು ಭರವಸೆಯನ್ನು ತಳೆಯುವಂತಿಲ್ಲ. ತೆರೆದ ಮನಸ್ಸಿನಿಂದ ಕೈಗೊಂಡ ಸಂಶೋಧನೆಯು ಕಂಡುಹಿಡಿಯುವ ಸಂಗತಿಗಳು ಸಂಶೋಧಕನಿಗೆ ಮಾನ್ಯವಾದವುಗಳೇ ಆಗಿರುತ್ತವೆ, ಆಗಿರಬೇಕು. ಪೂರ್ವಗ್ರಹ ಪೀಡಿತ ಮನಸ್ಸು ಮಾತ್ರ ಸಂಗತಿಗಳನ್ನು ತಿರುಚಿ ಅರ್ಥೈಸಲು ತೊಡಗುತ್ತದೆ. ಇದು ಅವೈಜ್ಞಾನಿಕ ಮತ್ತು ಸಂಶೋಧನಾ ಧರ್ಮಕ್ಕೆ ಹೊಲ್ಲ.

ಇದರ ಅರ್ಥವೇನೆಂದರೆ, ಕಂಡುಕೊಂಡ ಸಂಗತಿಗಳನ್ನು ವಿಶ್ಲೇಷಿಸಿ, ಅವುಗಳ ವ್ಯಾಖ್ಯಾನವನ್ನು ನಡೆಸುವಾಗ ಎಚ್ಚರಿಕೆಯು, ನಿರ್ಮಲವಾದ ಮತ್ತು ತೆರೆದ ಮನಸ್ಸಿರುವುದು ಅತ್ಯಂತ ಅಗತ್ಯ. ಹಾಗಲ್ಲದಿದ್ದರೆ ವಸ್ತುಗಳ ಯಥಾಸ್ಥಿತಿಯ ಪರಿಚಯದ ಬದಲು ವಸ್ತುಗಳ ವಿಕೃತ ನೆಳಲುಗಳ ಪರಿಚಯವಾಗುತ್ತದೆ. ಅಂದರೆ, ಸಂಶೋಧನೆಯ ಗುರಿಯು ವಿಫಲವಾಯಿತೆಂದೇ ಅರ್ಥ.

ಕೆಲವು ಅಗತ್ಯ ಕ್ರಮಗಳು

ವಿಶ್ಲೇಷಣೆಯ ಅಂಗವಾಗಿ ಸಂಗ್ರಹಿಸಿದ ಮಾಹಿತಿಯನ್ನು ಸಂದುಗೊಂದುಗಳಿಲ್ಲದಂತೆ ಆಮೂಲಾಗ್ರವಾಗಿ ಮತ್ತೆ ಮತ್ತೆ ಪರಿಶೀಲಿಸಬೇಕು. ಮಾಹಿತಿಯು ಹಲವಾರು ಅಂಶಗಳ ಸಂಗ್ರಹವಾಗಿರುವುದರಿಂದ ಸಂಶೋಧನೆಯ ಪರಮ ಗುರಿಗಳಿಗೆ ನೇರವಾಗಿ ಸಂಬಂಧಿಸಿದ ಅಥವಾ ಪರೋಕ್ಷವಾಗಿಯಾದರೂ ಮಹತ್ವವೆನ್ನಿಸದ ಅಂಶಗಳನ್ನು ಜಾಲಾಡಿ ಜರಡಿ ಹಿಡಿದು ಅವನ್ನು ತ್ಯಜಿಸಬೇಕು. ಹೀಗೆ ಮಾಡಿದಾಗಲೂ ಮುಂದೆ ಇದೇ ಸಂಶೋಧನೆಗಾಗಿಯಾಗಲಿ, ಇತರ ಸಂಶೋಧನೆಗಾಗಿಯಾಗಲಿ ಆ ಅಂಶಗಳು ಬೇಕಾಗಬಹುದೆಂಬುದನ್ನು ಗಮನಿಸಿ ಅದನ್ನು ಬೇರೊಂದು ಕಡೆ ರಕ್ಷಿಸಿಡಬೇಕು. ಹೀಗೆ ಮಾಡದಿದ್ದರೆ ಅನಂತರ ಹಳಹಳಿಸಬೇಕಾಗಬಹುದು

ಈ ತೆರನ ಜರಡಿ ಹಿಡಿದ ನಂತರ ದೊರೆಯುವ ಅವಶ್ಯಕ ಮಾಹಿತಿ-ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಪರೀಕ್ಷಿಸಿ ಅವುಗಳ ವೈಯಕ್ತಿಕ ವಿಶಿಷ್ಟ ಗುಣಚರ್ಯೆಗಳಿಗೆ ಅನುಗುಣವಾಗಿ ಅವುಗಳನ್ನು ಗುಂಪಾಗಿಸಿ, ವಿಂಗಡಿಸಿ, ವರ್ಗೀಕರಿಸಬೇಕು. ಯಾವುದಾದರೂ ಒಂದು ಗುಣವಿಶೇಷದಿಂದಲೇ ಕೆಲವು ಅಂಶಗಳು ಒಂದು ಗುಂಪಿಗೆ ಸೇರಿಕೊಳ್ಳುವ ಸಾಧ್ಯತೆ ಇರುವುದರಿಂದ ಈ ಕ್ರಮವು ಅಗತ್ಯವಾಗುತ್ತದೆ. ಇದರ ಜೊತೆಗೆ ಆಯ್ದುಕೊಂಡು ಒಮ್ಮೆ ಒಂದು ಗುಣಾಂಶದ ಆಧಾರದ ಮೇಲೆ ವರ್ಗೀಕರಿಸಿದ ಸಂಗತಿಗಳನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ, ಭಿನ್ನ ಭಿನ್ನ ಗುಣಾಂಶಗಳ ಆಧಾರದ

ಮೇಲೆ ಮರುವಿಂಗಡಣೆ ಅಥವಾ ವರ್ಗೀಕರಣ ಮಾಡಬೇಕು. ಇದರಿಂದ ಒಂದೊಂದು ಸಂಗತಿಯನ್ನು ವಿವಿಧ ರೀತಿಯಲ್ಲಿ ಅರ್ಥೈಸಲು ಸಾಧ್ಯವಾಗುತ್ತದೆ. ಇಂಥ ವರ್ಗೀಕರಣದಿಂದ ಎಲ್ಲ ನಿಟ್ಟಿನಿಂದ ವೀಕ್ಷಿಸಿ, ಇನ್ನೇನೂ ಉಳಿದಿಲ್ಲವೆಂಬ ತೃಪ್ತಿ ಆಗುತ್ತದೆ.

ವರ್ಗೀಕರಣಗೊಂಡ ಸಂಗತಿಗಳನ್ನು ಅಥವಾ ಸಂಗತ್ಯಂಶಗಳನ್ನು ಪರಿಮಾಣಗೊಳಿಸಲು ಸಾಧ್ಯ, ಸಾಧ್ಯವಾಗಿಸಬೇಕು. ಇದರಿಂದ ಅಮೂರ್ತವು ಮೂರ್ತತ್ವ ಪಡೆಯುತ್ತದೆ. ಇದು ಅಮೂರ್ತತ್ವವನ್ನು ಮೂರ್ತತ್ವಗೊಳಿಸುವಂಥ ಪ್ರಕ್ರಿಯೆಯಾಗಿರುತ್ತದೆ. ಹೀಗೆಂದರೆ, ಗುಣಾಂಶವನ್ನು ಪರಿಮಾಣಾಂಶವನ್ನಾಗಿ ಪರಿವರ್ತಿಸುವುದೆಂದು ಅರ್ಥ. ಗುಣಾಂಶ ಭೂಯಿಷ್ಠ (Qualitative) ವಿಶ್ಲೇಷಣೆಯು ಪರಿಮಾಣಾಂಶ ಭೂಯಿಷ್ಠ ವಿಶ್ಲೇಷಣೆಯಿಂದ (Quantitative Analysis) ವಸ್ತು ಸಂಗತಿಗಳ ಸ್ವರೂಪದರ್ಶನವು ಹೆಚ್ಚು ಸ್ಫುಟವಾಗುತ್ತದೆ. ಆದುದರಿಂದಲೇ ವರ್ಗೀಕರಣಗೊಂಡ ಸಂಗತಿಗಳನ್ನು ಸರಳ, ನೇರ (Simple) ಕೋಷ್ಟಕೀಕರಣ ಮತ್ತು ಮಿಶ್ರ (Cross) ಕೋಷ್ಟಕೀಕರಣಗಳಾಗಿ ಪರಿವರ್ತಿಸಬೇಕು. ಕೋಷ್ಟಕೀಕರಣವು ಸಂಗತ್ಯಂಶಗಳು ಹೇಗೆ ಆವೃತ್ತಿ ಸಂಖ್ಯಾ ಪ್ರಮಾಣದಲ್ಲಿ ಘಟಿಸುತ್ತವೆಯೆಂಬುದನ್ನು ಪರಿಶೀಲಿಸಿದಾಗ ಅವುಗಳ ತೀವ್ರ (High) ಮತ್ತು ಮಂದ (Low) ಪರಿಮಾಣಕಂಪನದ (Frequency) ಅರಿವು ನಮಗಾಗುತ್ತದೆ. ಇದರಿಂದ ವ್ಯಕ್ತಿನಿಷ್ಠತೆಯು ಕ್ರಮೇಣ ಹಿಂದಾಗಿ ವಸ್ತುನಿಷ್ಠತೆಯು ಬಲಿಯುತ್ತಾ ಹೋಗುತ್ತದೆ. ಇದು ವಸ್ತುವಿಶ್ಲೇಷಣೆಯ ನಿಕಷವೂ ಆಗಿರುತ್ತದೆ.

ಪರಿಮಾಣೀಕರಣದ ಮೂಲಕ ಕೋಷ್ಟಕೀಕರಣ ಮಾಡುವುದೆಂದರೆ ಸಂಖ್ಯಾಶಾಸ್ತ್ರೀಯ ಸೂತ್ರಗಳನ್ನು ಅನುಸರಿಸಿ ವಸ್ತುಗಳನ್ನು ವಿಶ್ಲೇಷಣೆಗೆ ಒಳಪಡಿಸುವುದೆಂದು ಅರ್ಥವಾಗುತ್ತದೆ. ಈ ಸಂದರ್ಭದಲ್ಲಿಯೇ ವಸ್ತುಗಳನ್ನು ಹಂಚುವ ಅಥವಾ ವಿತರಣೆ ಮಾಡುವ (Distribution), ಶೇಕಡಾನ್ವಯವಾಗಿ ಗುರುತಿಸುವ, ಸರಾಸರಿಗಳನ್ನು (Averages) ಕಂಡುಹಿಡಿಯುವ, ಅಂಶಗಳು ಹೇಗೆ ಚದುರೋಟಕ್ಕೆ ಒಳಗಾಗಿವೆ (Dispersion), ಎಂಬುದನ್ನು ಮಾಪನ ಮಾಡುವ (Measures of Dispersion), ಚಲನಾಂಶಗಳು (Variables) ಹೇಗೆ ಪಾರಸ್ಪರಿಕವಾಗಿ ಸಂಬಂಧೀಕರಣಕ್ಕೆ (Correlation) ಒಳಗಾಗಿವೆ, ಅವುಗಳ ಸಹಕಾರಕ ಸಂಬಂಧೀಕರಣದ (Co-efficient Correlation) ಸ್ಥಿತಿ ಏನು, ಇತ್ಯಾದಿಗಳನ್ನು ನಾವು ಗುರುತಿಸಬೇಕಾಗುತ್ತದೆ. ಪ್ರತಿಯೊಂದು ಸಂಗತಿಗೂ ಹಲವಾರು ವಿಶೇಷಕಗಳು (Attributes) ಇರುತ್ತವೆ ಅಥವಾ ಅವುಗಳನ್ನು ಆಧ್ಯಾರೋಪಿಸಲಾಗುವುದು.

ದತ್ತಾಂಶ ಅಥವಾ ಪಡೆದ ವಸ್ತ್ವಂಶಗಳನ್ನು ಈ ರೀತಿಯ ಸಂಸ್ಕರಣಕ್ಕೆ ಒಳಗು ಮಾಡಿದಾಗ ಅವುಗಳೊಳಗಿನ ಸತ್ವವು ಸ್ಫುಟಗೊಳ್ಳುತ್ತಾ ಹೋಗುತ್ತದೆ. ಈ ತೆರನ ಸಂಸ್ಕರಣವು ವಿಶ್ಲೇಷಣೆಯ ಭಾಗವಾಗಿರುವುದರಿಂದ ವಿಶ್ಲೇಷಣೆಗೆ ಒಂದು ತೆರನ ಗುರುತ್ವ ಬರುತ್ತದೆ, ಅಧಿಕೃತತೆ ಬರುತ್ತದೆ, ನಂಬಲರ್ಹವಾಗುತ್ತದೆ, ಸ್ಥಿರಗೊಂಡು ಖಚಿತತೆ ಸಿದ್ಧವಾಗುತ್ತದೆ.

ವಸ್ತ್ವಂಶಗಳನ್ನು ಅಥವಾ ಚಲನಾಂಶಗಳನ್ನು ಆಳವಾಗಿ ಅರ್ಥಮಾಡಿಕೊಂಡು ಅವುಗಳ ನಡುವೆ ಇರುವ ಸಂಬಂಧಗಳ ಪರಿಯನ್ನು ಗುರುತಿಸುವ ಪ್ರಕ್ರಿಯೆಯೇ ಸಂಶೋಧನೆಯಲ್ಲಿನ ವ್ಯಾಖ್ಯಾನದ ಮಜಲು. ಇದುವರೆಗೂ ಸಂಖ್ಯಾಶಾಸ್ತ್ರೀಯ ಸೂತ್ರಗಳಲ್ಲಿ ಕೆಲವನ್ನು ದೃಷ್ಟಿಯಲ್ಲಿ ಇರಿಸಿಕೊಂಡು ವಿವರಿಸಿದ ಚಲನಾಂಶಗಳು, ಆವೃತ್ತಿ ಸಂಖ್ಯಾಕಂಪನ, ಆವೃತ್ತಿ ಪರಿಮಾಣ ವಿತರಣೆ, ಚದುರೋಟದ ಮಾಪನ, ಸರಾಸರಿ, ಶೇಕಡಾಂಶ, ಸಂಬಂಧೀಕರಣ, ಸಹಾಕಾರಕ ಸಂಬಂಧೀಕರಣ, ವಿಶೇಷಕ, ಸರಳ ಮತ್ತು ಮಿಶ್ರ ಕೋಷ್ಟಕೀಕರಣ, ಇತ್ಯಾದಿಗಳನ್ನು ನಾವು ವಸ್ತು ವ್ಯಾಖ್ಯಾನ ವನ್ನು ಮಾಡುವಾಗಲೂ ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ.

ಏನನ್ನು ವಿಶ್ಲೇಷಿಸುವುದು, ಹೇಗೆ ವಿಶ್ಲೇಷಿಸುವುದು ಹಾಗೂ ಏನನ್ನು ವ್ಯಾಖ್ಯಾನಿಸುವುದು ಹೇಗೆ ವ್ಯಾಖ್ಯಾನಿಸುವುದು ? ಈ ಪ್ರಶ್ನೆಗಳು ಸಂಶೋಧಕರನ್ನು ಸದಾ ಕಾಡುತ್ತಿರುತ್ತವೆ. ಈ ಅವಳಿ ಪ್ರಕ್ರಿಯೆಗಳು ಸಂಶೋಧನೆಯ ಒಂದು ಮಹತ್ವದ ಮಜಲು, ಎಂದು ಪರಿಗಣಿತವಾಗಿದ್ದರೂ ಇವು ಸಂಶೋಧನೆಯ ಆಲೋಚನೆಯ ಮೊಳಕೆಯ ಸುಳಿದಂದಿನಿಂದ ಸಂಶೋಧನಾ ವರದಿಯನ್ನು ಸಿದ್ಧಗೊಳಿಸುವ ವರೆಗೂ ಸಂಶೋಧನಾ ಪ್ರಕ್ರಿಯೆಯ ಹಾಸು–ಹೊಕ್ಕುಗಳಾಗಿರುತ್ತವೆ. ಸಂಶೋಧನೆಯ ಅಂಗಗಳಾದ ಶೋಧನಾ ರೂಪುರೇಷೆ, ಪರಿಕಲ್ಪನೆಗಳು, ಪೂರ್ವಸಿದ್ಧಾಂತಗಳು ಸಂಶೋಧನೆಯ ಉಪಕರಣಗಳು, ವಿಧಾನ–ತಂತ್ರಗಳು, ನೈಪುಣ್ಯಗಳು, ಮಾಪನ ಗಳು, ಸೂತ್ರಗಳು ಮೌಲ್ಯಗಳು, ಸಂಶೋಧನಾ ಜಗತ್ತು, ಸಂಬಂಧಿಸಿದ ಶಿಸ್ತಿನ ಆಶಯಗಳು, ಶಿಸ್ತುಗಳನ್ನು ಪ್ರತಿನಿಧಿಸುವ ಪರಿಣತರ ದೃಷ್ಟಿಕೋನಗಳು, ಸಂಶೋಧನೆಗೆ ಒಳಗಾಗಿರುವ ವಸ್ತುವಿನ ಬಗೆಗೆ ಈಗಾಗಲೇ ಸಂಗ್ರಹಿತವಾದ ಐತಿಹಾಸಿಕ ಅಂಶಗಳು, ಇತ್ಯಾದಿಗಳೆಲ್ಲವೂ ವಿಶ್ಲೇಷಣೆಗೆ ಮತ್ತು ವ್ಯಾಖ್ಯಾನಕ್ಕೆ ಅನಿವಾರ್ಯ ಸಹಕಾರಿಗಳು. ಇವೆಲ್ಲವೂ ಒಟ್ಟಾಗಿ ವಿಶ್ಲೇಷಣೆ–ವ್ಯಾಖ್ಯಾನಗಳಿಗೆ ಪುಷ್ಟಿಯನ್ನು ನೀಡುತ್ತವೆ.

ಸರಳವಾದ ಮಾತುಗಳಲ್ಲಿ ಹೇಳುವುದಾದರೆ, ವಿಶ್ಲೇಷಣೆಯು ಎಳೆಗಳನ್ನು ಬಿಡಿಸುವ ಕಾರ್ಯ ; ವ್ಯಾಖ್ಯಾನವು ನೇಯುವ ಕಾರ್ಯ. ವಸ್ತುವನ್ನು ಎಷ್ಟು ಸಾಧ್ಯವೋ ಅಷ್ಟು ತುಂಡುಗಳನ್ನಾಗಿ, ಬಿಡಿಬಿಡಿ ಭಾಗಗಳನ್ನಾಗಿ ವಿಭಾಗಿಸಬೇಕು.

ಪ್ರತಿಯೊಂದು ತುಂಡಿನ ವಿಶಿಷ್ಟ ಗುಣಗಳನ್ನು ಅಥವಾ ವಿಶೇಷಗಳನ್ನು ಗುರುತಿಸ ಬೇಕು. ಆ ವಿಶೇಷಕಗಳನ್ನು ಹಿಂಜಿ ಹಿಂಜಿ ಅವುಗಳ ಎಳೆ ಎಳೆಗಳನ್ನು ಬಿಡಿಬಿಡಿಸಿ ಬಹು ಸೂಕ್ಷ್ಮವಾಗಿ ಅಳೆದು ಪರೀಕ್ಷಿಸಬೇಕು. ಈ ಎಲ್ಲ ಕ್ರಮಗಳು ವಿಶ್ಲೇಷಣೆಯ ಅಂಗಾಂಶಗಳು. ಈ ಬಿಡಿಬಿಡಿಯ ತುಂಡುಗಳ ವಿಶೇಷಕಗಳ ಗುಣಾವಲೋಕನವನ್ನು ವ್ಯಾಖ್ಯಾನಕಾರ ಆರಂಭಿಸುತ್ತಾನೆ. ಒಂದೊಂದು ಅಣುವಿನಲ್ಲಿರುವ ಗುಣವನ್ನು ಅವಲೋಕಿಸುತ್ತಾ ಯಾವುದೋ ಒಂದು ಗುಣವು ಅನೇಕ ಅಣುಗಳಲ್ಲಿ ಅಥವಾ ತುಂಡುಗಳಲ್ಲಿ ಸಾಮಾನ್ಯವಾದುದಾಗಿ ಕಾಣಿಸುತ್ತದೆ. ಆ ಸಾಮಾನ್ಯಾಂಶವನ್ನೇ ಹಿಡಿದು ವಿಶ್ಲೇಷಣಕಾರನು ತುಂಡರಿಸಿ, ಬಿಡಿಬಿಡಿಯಾಗಿ ದೂರದೂರದಲ್ಲಿರಿಸಿದ ತುಂಡುಗಳಲ್ಲಿನ ಸಾಮಾನ್ಯ ಗುಣವನ್ನು ಗುರುತಿಸುತ್ತಾ ಹೋಗುತ್ತಾನೆ. ಇಂಥ ಶ್ರಮ ಸಾಹಸದ ಪ್ರಯಾಣದಿಂದ ತುಂಡುಗಳಲ್ಲಿನ ಹೊಂದಿಕೊಳ್ಳುವ ಸಾಮಾನ್ಯ ಗುಣಗಳ ಎಳೆಯ ಸೆಳಕುಗಳನ್ನು ಗುರುತಿಸುತ್ತಾನೆ. ಆ ಸೆಳಕಿನೆಳೆಗಳಲ್ಲಿ ಇರುವ ಸಾಮಾನ್ಯ ಗುಣಗಳನ್ನು ಗುರುತಿಸಿ, ಆ ಎಲ್ಲ ಎಳೆಗಳನ್ನು ತಳಕೆ ಹಾಕುತ್ತಾನೆ, ಜೇಡರವನು ಮಾಡಿದ ಹಾಗೆ. ಸಂಶೋಧಕನು ಆ ಮೊದಲೇ ಗುರುತಿಸಿ, ಶೋಧನೆಗೆ ಒಳಗುಮಾಡಿದ ಚಲನಾಂಶಗಳ ನಡುವೆ ಇರುವ ಸಂಬಂಧಗಳನ್ನು ಕಾರಣ-ಪರಿಮಾಣ ಗಳ ದೃಷ್ಟಿಯಿಂದಲೂ ಪರಿಕಲ್ಪಿಸುತ್ತಾನೆ.

ಕಾರಣ-ಪರಿಣಾಮಗಳನ್ನು ವಿಶಿಷ್ಟವಾಗಿ ಗಮನಿಸುವ ಅಗತ್ಯವಿದೆ. ಸಮಾಜ ವಿಜ್ಞಾನದಲ್ಲಂತೂ ಇಂಥದೇ ಕಾರಣವು ಇಂಥದೇ ಪರಿಣಾಮಕ್ಕೆ ಎಡೆಮಾಡಿಕೊಡುತ್ತದೆಯೆಂದು ಖಡಾಖಂಡಿತವಾಗಿ ಹೇಳಲಾಗುವುದಿಲ್ಲ. ಒಂದು ಪರಿಣಾಮಕ್ಕೆ ಒಂದೇ ಒಂದು ಕಾರಣವಿರುತ್ತದೆಯೆಂದು ಹೇಳಲಾಗದು. ಯಾಕೆಂದರೆ ಒಂದು ಪರಿಣಾಮಕ್ಕೆ ಅನೇಕ ಕಾರಣಗಳಿರುತ್ತವೆ. ಅದೂ ಅಲ್ಲದೆ ಯಾವುದೇ ಒಂದು ಕಾರಣವು ಗುಣ-ಗಾತ್ರದಲ್ಲಿ ಏರಿಳಿವನ್ನು ಹೊಂದಿದ್ದರೆ ಅಷ್ಟರಮಟ್ಟಿಗೆ ಆ ಪರಿಣಾಮದಲ್ಲಿ ಏರಿಳಿವು ಆಗುವ ಸಾಧ್ಯತೆ ಇದೆ.

ಹೀಗೆಯೇ ಒಂದು ಕಾರಣವು ಒಂದೇ ಪರಿಣಾಮವನ್ನು ಉಂಟುಮಾಡುತ್ತದೆಯೆಂಬುದಿಲ್ಲ. ಅಂದರೆ, ಒಂದು ಕಾರಣವು ಅನೇಕ ಪರಿಣಾಮ ಗಳಿಗೆ ಎಡೆಮಾಡುತ್ತದೆ. ಮೊತ್ತದಲ್ಲಿ ಇಂಥದೇ ಪರಿಣಾಮಕ್ಕೆ ಇಂಥದೇ ಆದ ಏಕ ಪರಿಣಾಮವನ್ನು ಉಂಟುಮಾಡುವುದಿಲ್ಲ. ಅನೇಕ ಕಾರಣಗಳ ಪುಂಜ ಅನೇಕ ಪರಿಮಾಣ ಪುಂಜಕ್ಕೆ ಎಡೆಮಾಡಿಕೊಡುತ್ತದೆ. ಕಾರಣ ಪುಂಜದಲ್ಲಿನ ಯಾವುದಾದರೂ ಒಂದೋ ಎರಡೋ ಅಂಶಗಳು ತಮ್ಮ ಗುಣ-ಗಾತ್ರಗಳಿಗೆ ಅನುಗುಣವಾಗಿ ಮತ್ತು ಸಂದರ್ಭಕ್ಕೆ ತಕ್ಕ ಹಾಗೆ ಪರಿಮಾಣ ಪುಂಜದಲ್ಲಿ ಏರಿಳಿತವನ್ನು ಉಂಟುಮಾಡುವ ಸಾಧ್ಯತೆ ಇರುತ್ತದೆ.

ಇವರ ಜೊತೆಗೆ ಸಮಾಜವಿಜ್ಞಾನದ ಪ್ರಸಂಗದಲ್ಲಂತೂ ಕಾರಣ-ಪರಿಣಾಮ ಜೋಡಿಯು ಇನ್ನೊಂದು ಆಯಾಮವನ್ನು ಹೊಂದಿರುತ್ತದೆ. ಕಾರಣವು ಯಾವಾಗಲೂ ಎಲ್ಲ ಪ್ರಸಂಗದಲ್ಲೂ, ಎಲ್ಲ ಸ್ಥಳದಲ್ಲೂ ಕಾರಣವಾಗಿಯೇ ಕ್ರಿಯಾತ್ಮಕವಾಗಿರುವುದಿಲ್ಲ. ಹಾಗೆಯೇ ಪರಿಣಾಮವೂ ಪರಿಣಾಮವಾಗಿಯೇ ಇರುವುದಿಲ್ಲ. ಕಾರಣವು ಪರಿಣಾಮವಾಗಿಯೂ, ಪರಿಣಾಮವು ಕಾರಣವಾಗಿಯೂ ಸಂದರ್ಭಕ್ಕನುಗುಣವಾಗಿ ಪರಿವರ್ತನೆಗೊಂಡು ಕ್ರಿಯಾತ್ಮಕ ವಾಗಿರುತ್ತದೆ. ಒಂದು ಕಾರಣವು ಸಾಪೇಕ್ಷವಾಗಿ ಕಾರಣವಾಗಿಯೂ, ಪರಿಣಾಮವಾಗಿಯೂ, ಪರಿಣಾಮವು ಸಾಪೇಕ್ಷವಾಗಿ ಪರಿಣಾಮವಾಗಿಯೂ, ಕಾರಣವಾಗಿಯೂ ಏಕಕಾಲದಲ್ಲಿಯೇ ಕ್ರಿಯಾತ್ಮಕವಾಗಿರುತ್ತದೆ. ಪರಿಣಾಮವು ಇನ್ನೊಂದು ಪರಿಣಾಮದ ಪರಿಣಾಮವಾಗಿರುತ್ತದೆ. ಈ ಸಂದರ್ಭದಲ್ಲಿ ಎರಡನೆಯ ಪರಿಣಾಮವು ಕಾರಣವಾಗಿ ಕ್ರಿಯಾತ್ಮಕವಾಗಿರುತ್ತದೆ. ಹೀಗೆಯೇ ಕಾರಣವು ಬೇರೆ ಕಾರಣದ ಪರಿಣಾಮವಾಗಿರುತ್ತದೆ. ಹೀಗಾಗಿ ಕಾರಣ ಪರಿಣಾಮಗಳು ಬೇರೆ ಬೇರೆ ಕಾರಣ-ಪರಿಣಾಮಗಳಿಗೆ ಸಾಪೇಕ್ಷ ಸ್ಥಿತಿಸ್ಥಾಪಕತೆಯನ್ನು ಹೊಂದಿರುತ್ತವೆ. ಇದರಿಂದಾಗಿ ಭಿನ್ನ ಭಿನ್ನ ಚಲನಾಂಶಗಳ ವಿಶೇಷಕಗಳು ಪಾರಸ್ಪರಿಕವಾಗಿ ಹೊಂದಿರುವ ಸಂಬಂಧಗಳಲ್ಲಿ ಸಾಂದರ್ಭಿಕತೆಗಳಿಗೆ ಅನುಗುಣವಾಗಿ ಕಾರಣ-ಪರಿಣಾಮಗಳ ಪಾತ್ರಪಲ್ಲಟದ ಪ್ರಕ್ರಿಯೆಗೆ ಒಳಗಾಗುತ್ತವೆ.

ಸಂಶೋಧಕನು ತಾನು ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಣೆಗೆ ಒಳಗು ಮಾಡಿ ಅದರಲ್ಲಿನ ಚಲನಾಂಶಗಳೊಳಗಿನ ಸಹಕಾರ ಸಂಬಂಧೀಕರಣದ ಪ್ರಕ್ರಿಯೆಯನ್ನು ವ್ಯಾಖ್ಯಾನಿಸುತ್ತಾನೆ. ವಸ್ತುಗಳ ನಡುವಿನ ಸಂಬಂಧಗಳು, ಅವುಗಳೊಳಗೆ ನಡೆಯುವ ಬದಲಾವಣೆಗಳು ಯಥಾವತ್ತಾಗಿ ಗ್ರಾಹ್ಯವಾಗುವಂತೆ ವಾಖ್ಯಾನಕಾರನು ವಿವರಿಸಬೇಕು.

ವ್ಯಾಖ್ಯಾನವೆಂದರೆ ವಸ್ತುಗಳ ವಿವರಣೆಯೆಂದೇ ಅರ್ಥ. ಅನೂಹ್ಯ ಸಂಗತಿಗಳು ಮಾತ್ರವಲ್ಲ, ಊಹ್ಯ ಸಂಗತಿಗಳೂ, ಅನುಭವಿಕ ಸತ್ಯಗಳೂ ಅಂದುಕೊಂಡಷ್ಟು ಸರಳವಾದವುಗಳಲ್ಲ. ಅವು ಸಂಕೀರ್ಣವಾಗಿರುತ್ತವೆ. ಸಂಕೀರ್ಣವಾದ ಬಲೆಯಲ್ಲಿ ನೆಯ್ದು ಕೊಂಡಿರುತ್ತವೆ ಅವುಗಳ ಸಂಕೀರ್ಣತೆಯನ್ನು ವಿವರಿಸುವಾಗ ಸಹಜವಾಗಿಯೇ ಭಾಷೆಯು ಸಂಕೀರ್ಣವಾಗಿರುತ್ತದೆ. ಆದರೆ ಸಂಕೀರ್ಣವಾದ ವಿವರಣೆಯಿಂದ ವಸ್ತುಗಳ ಯಥಾವತ್ತಾದ ಸ್ವರೂಪ ದರ್ಶನವಾಗದೆ ಕ್ಲಿಷ್ಟವಾಗಿ, ಓದಿದಂತೆಲ್ಲಾ ರಹಸ್ಯವಾಗುತ್ತಾ ಸಾಗಿದರೆ, ವಿಪರೀತಾರ್ಥ ಉಂಟಾದರೆ ಆಗ ವ್ಯಾಖ್ಯಾನಕ್ಕೆ ಅರ್ಥವೇ ಇರುವುದಿಲ್ಲ. ಸಂಕೀರ್ಣ ವಸ್ತುಸ್ಥಿತಿಯನ್ನು, ಸಂಕೀರ್ಣ ಅನುಭವವನ್ನು ವರ್ಣಿಸುವಾಗ ಭಾಷೆಯ ಇತಿಮಿತಿಗಳ, ಅದರ ಪ್ರೌಢಿಮೆಯು, ಶಬ್ದ ಸಂಪತ್ತಿಯು, ನಾನಾರ್ಥ ಸಾಧ್ಯತೆಯು ಅರಿವು ವ್ಯಾಖ್ಯಾನಕಾರನಿಗೆ ಇದ್ದೇ ಇರುತ್ತದೆ. ತನ್ನ ಅರಿವಿಗೆ ಬಂದ ವಿಷಯವನ್ನು ಹಾಗೆ ಹಾಗೆಯೇ ವಿವರಿಸುವ ಶಕ್ತಿಯು ವ್ಯಾಖ್ಯಾನಕಾರನಿಗೆ

ಇವ್ವರೂ ಅನಸಿಗಿರುವ ಭಾಷಾ ಪ್ರೌಢಿಮೆಯ ಅಳತೆ ಮತ್ತು ಅವನು ಉಪಯೋಗಿಸುವ ಭಾಷೆಯ ಇತಿಮಿತಿ–ಈ ಕಾರಣಗಳಿಂದ ಆತನ ಅಪೇಕ್ಷೆಯು ಪೂರ್ಣ ನೆರವೇರದೆ ಹೋಗಬಹುದು.

ಸಂಶೋಧನೆಯ ವರದಿಯು ಸಂಶೋಧನೆಯ ಸಾರ್ಥಕ ಫಲ. ಆರಂಭದಿಂದ ಕೊನೆಯ ವರೆಗೆ, ವರದಿಯೊಳಗೆ ಸಂವಿಧಾನಗೊಂಡ ಭಾಗಗಳಲ್ಲಿ ವಸ್ತುವಿನ ವಿವರಗಳು, ರೇಖಾಚಿತ್ರಗಳು, ಕೋಷ್ಟಕಗಳು, ಭಾವಚಿತ್ರಗಳು, ದಾಖಲೆಗಳು ವಿಸ್ತೃತಗೊಂಡು ಪಡಿಯಚ್ಚಿಡುತ್ತವೆ. ಈ ಎಲ್ಲವೂ ಒಂದಲ್ಲಾ ಒಂದು ರೀತಿಯ ವಸ್ತು ವಿಶ್ಲೇಷಣೆ ಮತ್ತು ವ್ಯಾಖ್ಯಾನಗಳೇ ಆಗಿವೆ. ವಸ್ತುವಿನ ಸ್ವರೂಪವನ್ನು ಅದಷ್ಟೂ ಸ್ಪಷ್ಟವಾಗಿ, ಸರಳವಾಗಿ, ನೇರವಾಗಿ ಓದುಗನಿಗೆ ಮತ್ತು ಶೋಧಗಳನ್ನು ಅನುಷ್ಠಾನಗೊಳಿಸಲಿಕ್ಕೆ ಸಿದ್ಧನಾದವನಿಗೆ ಅರ್ಥವಾಗುವಂತೆ ಬರೆಹ ಇರಬೇಕಾಗುತ್ತದೆ. ಹೀಗೆಂದರೆ ಬರೆಹವು ರೂಕ್ಷ ಜಡವಾಗಿದ್ದರೂ ಸಂದೀತು, ಎಂದು ಅರ್ಥಮಾಡಿಕೊಳ್ಳಕೂಡದು. ವಿವರಣೆಯು ಆಕರ್ಷಕವಾಗಿರಬೇಕು. ಕುತೂಹಲವನ್ನು ಕೆರಳಿಸಿ ತಣಿಸುವಂತಿರಬೇಕು. ಅನ್ಯರಿಗೆ ತಿಳಿಸುವನಿತು ಪರಿಣಾಮಕರವಾಗಿರಬೇಕು. ಅನ್ಯ ವರದಿಗಳಿಂದ ಭಿನ್ನವಾಗಿ ಕಾಣುವಂತೆ ಈ ಬರೆಹವು ಕೆಲವು ವೈಶಿಷ್ಟ್ಯಗಳಿಂದ ಕೂಡಿರಬೇಕು. ಜ್ಞಾನಸಿಧಿಗೆ ಕಾಣಿಕೆ ನೀಡುವ ಸಾಮರ್ಥ್ಯವನ್ನು ಪಡೆದಿರಬೇಕು. ವಿಶ್ಲೇಷಣೆ ಮತ್ತು ವ್ಯಾಖ್ಯಾನಗಳು ಇವೆಲ್ಲವನ್ನೂ ಸಾಧಿಸುವಂತಿರಬೇಕು.

ಸಂಶೋಧನ ವರದಿಯ ಭಾಷೆ

ಸಂಶೋಧನೆಯಲ್ಲಿ ತೊಡಗಿ, ಸಂಶೋಧನೆಯ ಮೂಲಕ ಸತ್ಯಾಂಶಗಳನ್ನು ಕಂಡುಕೊಂಡ ಸಂಶೋಧಕನು ತನ್ನ ಶೋಧಗಳನ್ನು ದಾಖಲಿಸಿ, ಅವನ್ನು ವರದಿಯ ರೂಪದಲ್ಲಿ ಸಿದ್ಧಗೊಳಿಸುತ್ತಾನೆ. ಸತ್ಯಾಂಶಗಳನ್ನು ಕಂಡುಕೊಳ್ಳಲು ವಿವಿಧ ವಿಧಾನಗಳನ್ನು ಅನುಸರಿಸಿದ ಸಂಶೋಧಕನು ತಾನು ಸಂಗ್ರಹಿಸಿದ ಮಾಹಿತಿಯನ್ನು ಸಂಸ್ಕರಿಸಿ, ವಿಶ್ಲೇಷಿಸಿ, ವ್ಯಾಖ್ಯಾನಿಸುತ್ತಾನೆ. ತನ್ನ ವ್ಯಾಖ್ಯಾನವನ್ನೇ ವರದಿಯಲ್ಲಿ ದಾಖಲಿಸುತ್ತಾನೆ.

ಸಂಶೋಧನ ವರದಿಯ ಭಾಷೆಯು ಮುಖ್ಯವಾಗಿ ವೈಜ್ಞಾನಿಕವಾದ, ಶಾಸ್ತ್ರೀಯವಾದ ಭಾಷೆ. ಭಾಷೆಯು ಹೇಗಿರಬೇಕು, ಎಂಬುದನ್ನು ವರದಿಗಾರನೇ ನಿರ್ಧರಿಸಬೇಕಾಗುತ್ತದೆ. ಆದರೂ ಆತನು ಕೆಲವು ನಿಯಮಗಳನ್ನು ಬಹು ಎಚ್ಚರಿಕೆಯಿಂದ ಪಾಲಿಸಬೇಕಾಗುತ್ತದೆ. ಇಲ್ಲಿ ನಾವು ಕೆಲವು ಮುಖ್ಯ ನಿಯಮಗಳನ್ನು ಗಮನಿಸುವುದು ಅಗತ್ಯ.

1. ಭಾಷೆಯಲ್ಲಿ ಬಳಸುವ ಶಬ್ದಗಳು ನಿಖರವಾದ ಅರ್ಥವನ್ನು ಹೊಂದಿರಬೇಕು. ಅವುಗಳಿಗೆ ದ್ವಂದ್ವಾರ್ಥ ಇರದಂತೆ, ಅವುಗಳಿಂದ ಗೊಂದಲ ಉಂಟಾಗದಂತೆ ನೋಡಿಕೊಳ್ಳುವ ಅಗತ್ಯವಿದೆ.

2. ಅನಗತ್ಯವಾಗಿ ಶಬ್ದಗಳ ಬಳಕೆಯಾಗದಂತೆ, ಅಂದರೆ ಕೇವಲ ಅಲಂಕಾರಕ್ಕಾಗಿ, ಪ್ರದರ್ಶನಕ್ಕಾಗಿ, ಶಬ್ದವ್ಯರ್ಥ ಆಗದಂತೆ ಎಚ್ಚರಿಕೆ ವಹಿಸಬೇಕು.

3. ತಾಂತ್ರಿಕ ಅಥವಾ ಪಾರಿಭಾಷಿಕ ಶಬ್ದಗಳನ್ನು ಅವುಗಳ ಅರ್ಥಸತ್ವಕ್ಕೆ ಅಪಚಾರವಾಗದ ಹಾಗೆ ಉಪಯೋಗಿಸಬೇಕು.

4. ವೈಜ್ಞಾನಿಕ ವರದಿಗಳಲ್ಲಿ ಅನ್ಯಭಾಷಿಕ ಶಬ್ದಗಳ ಬಳಕೆಯು ಅಗತ್ಯವಾದರೂ ಅವು ವರದಿಯ ಭಾಷೆಗೆ ಹೊಂದಿಕೊಂಡಿರಬೇಕು.

5. ವಾಕ್ಯಗಳು ಆದಷ್ಟೂ ಸರಳವಾಗಿ, ಆದರೂ ಸಮಗ್ರವಾಗಿ ವಿಷಯವನ್ನು ಅಭಿವ್ಯಕ್ತಗೊಳಿಸುವಂತಿರಬೇಕು.

6. ಭಾಷೆಯು ವೈಜ್ಞಾನಿಕವಾದರೂ ರೂಕ್ಷವಾಗಿರದೆ ಆಕರ್ಷಕವಾಗಿ, ರಸವತ್ತಾಗಿ, ಓದುಗನಲ್ಲಿ ಆತುರ, ಆಸಕ್ತಿಯನ್ನು ಹುಟ್ಟಿಸುವಂತಿರಬೇಕು.

7. ಭಾಷೆಯು ಅಡಕವಾಗಿ, ಮೊನಚಾಗಿ, ಪರಿಣಾಮಕರವಾಗಿ ವಿಷಯವನ್ನು ಅಭಿವ್ಯಕ್ತಿಪಡಿಸುವಂತಿರಬೇಕು.

8. ವರದಿಯ ಭಾಷೆಯು ವಿಷಯದ ಒಳನೋಟಗಳನ್ನು ಬಹು ಸ್ಫುಟವಾಗಿ ಪ್ರಕಟಿಸುವಂತೆ, ಎತ್ತಿ ತೋರಿಸುವಂತೆ ಸಮರ್ಥವಾಗಿ ಬಳಸಲ್ಪಡಬೇಕು.

9. ವರದಿಯನ್ನು ಓದಿದಾಗ ಬಳಸಿದ ಭಾಷೆಯು ಸಂಸ್ಕಾರಗೊಂಡಿದೆ, ಶಬ್ದ ಶಬ್ದದ ಬಳಕೆಯಲ್ಲೂ ಅತ್ಯಂತ ಎಚ್ಚರವನ್ನು ವರದಿಗಾರನು ವಹಿಸಿದ್ದಾನೆ, ಎಂಬ ಸಮಾಧಾನವು ಓದುಗನಿಗೆ ಬರುವಂತಿರಬೇಕು.

10. ವರದಿಯ ಭಾಷೆಯು ಆ ನುಡಿಯ ಸಾಮರ್ಥ್ಯವನ್ನು ಸಮರ್ಥಿಸುವ, ಅದರ ಸಂಪತ್ತನ್ನು ಹೆಚ್ಚಿಸುವ ಗುರಿಯನ್ನೂ ಹೊಂದಿರಬೇಕು.

ಸಾಹಿತ್ಯ ಸಂಶೋಧನೆ : ವಿಧಿ ವಿಧಾನಗಳು

ಡಾ|| ಶ್ರೀನಿವಾಸ ಹಾವನೂರು

ಸಂಶೋಧನೆ ವಿಧಾನ ಹೇಗಿದೆ ಎಂದು ಕೇಳಿದ್ದೀರಿ. ಬೇರೆ ಬೇರೆ ಡಿಸಿಪ್ಲಿನ್‌ನವರಿಗೆ ಇನ್ನೊಂದು ಡಿಸಿಪ್ಲಿನ್ ಬಗ್ಗೆ ಸಾಮಾನ್ಯವಾಗಿ ಲಕ್ಷ್ಯ ಇರುವುದಿಲ್ಲ. ಇದರ ಆಗತ್ಯವಾಗಿಲ್ಲ ಎನ್ನುವ ಭಾವನೆ ಇರುತ್ತದೆ. ಇದು ತಪ್ಪು, ಸಂಶೋಧನೆ ಯಾವುದೇ ಕ್ಷೇತ್ರದಲ್ಲಿ ಮಾಡುತ್ತಿದ್ದರೂ ಈ ರೀತಿ ತಿಳಿಯಬಾರದು.

ಇತರ ಸಂಶೋಧನಾ ಕ್ಷೇತ್ರಗಳಿಗೆ ಅನ್ವಯಿಸಿದ ಮೂಲಭೂತ ಮಾತುಗಳು ಸಾಹಿತ್ಯ ಕ್ಷೇತ್ರಕ್ಕೂ ಅನ್ವಯಿಸುತ್ತವೆ.

ಏನು ಎಂದರೆ 1) ಒಂದನೆಯದು—ಸಂಶೋಧನೆಯಲ್ಲಿ ಯಾವಾಗಲೂ ಇರಬೇಕಾದದ್ದು ಕುತೂಹಲ ಪ್ರವೃತ್ತಿ, ಜಿಜ್ಞಾಸೆ, ಇದು ಏಕೆ, ಏನು, ಇದು ಹೀಗೆ ಏಕೆ ಆಯ್ತು ಎಂಬ ಕುತೂಹಲ ಇರಬೇಕು. ಈ ಕುತೂಹಲ ಪ್ರವೃತ್ತಿ ನಮಗಿಂತ ಮಕ್ಕಳಲ್ಲಿ ಅತ್ಯಂತ ಸಹಜವಾಗಿರುತ್ತದೆ. ಈ ಕುತೂಹಲ ದೃಷ್ಟಿ ಇದ್ದಷ್ಟು ಸಂಶೋಧನೆಗೆ ಅದು ನೆರವಾಗುತ್ತದೆ. ಸಾಮಾನ್ಯವಾಗಿ ಇಂಗ್ಲೀಷ್‌ನಲ್ಲಿ ಐದು ಪ್ರಶ್ನೆಗಳು ಇರುತ್ತವೆ. What ? How ? Why ? When ? Where ? ಇವುಗಳಲ್ಲಿ When, Where 'ಯಾವಾಗ' ಮತ್ತು 'ಎಲ್ಲಿ' ಎನ್ನುವುದು ಅಷ್ಟು ಮುಖ್ಯವಲ್ಲ. ಇದು ಏನು ? ಇದು ಏಕೆ ? ಇದು ಹೇಗೆ ? ಇವು ಮೂರು ಪ್ರಶ್ನೆಗಳು ಜೀವಂತವಾಗಿ ನಮ್ಮಲ್ಲಿ ಹಗಲು ರಾತ್ರಿ, ಈ ಪ್ರಜ್ಞೆ ಇರಬೇಕು.

ಸಾಹಿತ್ಯಕ್ಕೆ ಅನ್ವಯಿಸಿ ಹೇಳುವಾಗ ನಮ್ಮಲ್ಲಿ 'ದಕ್ಷಿಣೋತ್ತರಮಾರ್ಗ,' ಎನ್ನುತ್ತೇವೆ. ಇದಕ್ಕೆ ಹಳೆಯ ಕವಿಗಳು ವಿವರಣೆ ಕೊಟ್ಟಿಲ್ಲ. ಅದರ ಬಗ್ಗೆ ಸ್ವಲ್ಪವೇ ಹೇಳುತ್ತಾರೆ. ಇದು ಏನು ಅನ್ನುವ ಕುತೂಹಲ ನಮ್ಮಲ್ಲಿ ಮೂಡಬೇಕು. ಕನ್ನಡ ಕಾವ್ಯದಲ್ಲಿ ದ್ವಿತೀಯ ಪ್ರಾಸ ಅವಶ್ಯಕವಾಗಿ ಇರಲೇಬೇಕು. ಇತರ ಯಾವುದೇ ಭಾಷೆಯಲ್ಲಿ ಸಾಹಿತ್ಯದಲ್ಲಿ ಇಲ್ಲದ ದ್ವಿತೀಯ ಪ್ರಾಸ ಕನ್ನಡಕ್ಕೆ ಕಡ್ಡಾಯವಾಗಿ ಏಕೆ ಬೇಕು ? ಮೊತ್ತ ಮೊದಲ ಕವಿ ನೃಪತುಂಗನೇ ಹೇಳಿದ್ದಾನೆ—

ದ್ವಿತೀಯ ಪ್ರಾಸ ಬೇಕು ಎಂದು. ಮುಂದೆ—ಕಂದ ಪದ್ಯದಲ್ಲಿ ಜಗಣ ಇಂಥಲ್ಲಿ ಬರ ಬಾರದು, ಇಂಥಲ್ಲಿ ಬರಬೇಕು —ಇತ್ಯಾದಿ ಮಾತು ಬರ್ತದೆ. ನಮಗೆ ಪಾಠ ಹೇಳು ವಾಗ ಆರನೇ ಸ್ಥಾನದಲ್ಲಿ ಜಗಣ ಬರುತ್ತದೆ ಎಂದು ಹೇಳಿಕೊಂಡು ಹೋಗುತ್ತೇವೆ. ಏಕೆ ಬರುತ್ತದೆ ಎಂದು ವಿದ್ಯಾರ್ಥಿಗಳು ಕೇಳಿದರೆ ನಮ್ಮಲ್ಲಿ ಉತ್ತರ ಇರುವುದಿಲ್ಲ.

ಯಕ್ಷಗಾನ ಎಂಬ ಹೆಸರು ಮೂಲತಃ ಒಂದು ಜಾನಪದ ರಂಗಭೂಮಿ ; ನಿಜ. ಆದರೆ ಯಕ್ಷಗಾನ ಎಂಬ ಸಂಸ್ಕೃತ ಹೆಸರು ಏಕೆ ಬಂತು ? ಹೇಗೆ ಬಂತು ? ಎಂದು ವಿಚಾರ ಮಾಡಬೇಕು.

ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಇಂಥ ವಿಚಾರಗಳು ಸದಾ ಇರಬೇಕು. ನೂರಾರು ಇಂತಹ ಪ್ರಶ್ನೆಗಳು ಇರಬೇಕು. ಇವಕ್ಕೆ ಮೂರ್ತ ಸ್ವರೂಪ ಇರಬಹುದು, ಇಲ್ಲದಿರಬಹುದು. ಕೆಲವು ಕ್ಷಣಿಕವಾಗಿ ನೀರ ಮೇಲಣ ಗುಳ್ಳೆಯಂತೆ ಬಂದು ಹೋಗ ಬಹುದು. ಅದು ಕ್ಷಣಿಕವಾಗಿರದೆ ಮೂರ್ತ ಸ್ವರೂಪವಾಗಿರಬೇಕಾದರೆ ನಮ್ಮಲ್ಲಿ ಕೆಲವೇ ಪ್ರಶ್ನೆಗಳು ಉಳಿದಾಗ ಇದರ ಬಗ್ಗೆ ವಿಚಾರ ಮಾಡೋಣ, ತಿಳಿದುಕೊಳ್ಳಲು ಪ್ರಯತ್ನ ಮಾಡೋಣ, ಅಭ್ಯಾಸ ಮಾಡೋಣ ಎಂಬ ಕುತೂಹಲ ಇರಬೇಕು. ಒಂದಕ್ಕಿಂತ ಹೆಚ್ಚು ಇದ್ದಷ್ಟೂ ಚಲೋದು. ಸಂಶೋಧನೆ ಮುಂದುವರಿದಾಗ ಆ ವಿಷಯಗಳಲ್ಲಿ ಕೊನೆಗೆ ಒಂದಾದರೂ ಉಳಿಯುತ್ತದೆ. ಮಹಾರಾಷ್ಟ್ರದಲ್ಲಿ ಗೋಕು ಲಾಷ್ಟಮಿಯಲ್ಲಿ ಮೇಲೆ ದುಡ್ಡು ಹಾಕಿದ ಒಂದು ಗಡಿಗೆ ಕಟ್ಟಿರುತ್ತಾರೆ. ಬಹಳ ಎತ್ತರ ಇರುತ್ತದೆ. ಕೆಳಗೆ ೨೦ ಮಂದಿ ಇರುತ್ತಾರೆ. ಆವರ ಮೇಲೆ ೮–೧೦ ಮಂದಿ ; ಆವರ ಮೇಲೆ ೪ ಮಂದಿ ; ಆವರ ಮೇಲೆ ಕೊನೆಗೆ ಒಬ್ಬ ನಿಂತು ಆ ಗಡಿಗೆಯನ್ನು ಒಡೆಯುತ್ತಾನೆ. ಹಾಗೆ ಸಂಶೋಧನೆಯಲ್ಲಿ ವಿವಿಧ ವಿಷಯಗಳು ತಲೆಯಲ್ಲಿ ಇದ್ದಾಗ ಕೊನೆಗೆ ಒಂದು ವಿಷಯ ಗಟ್ಟಿಯಾಗಿ ಉಳಿಯುತ್ತದೆ.

ಇನ್ನು ಇವಕ್ಕೊಂದು ಉದಾಹರಣೆ ಕೊಡಬೇಕು. ನೃಪತುಂಗ ಹೇಳಿದ ಮಾತು—"ನಿಜದಿಂ ಕನ್ನಡ ನಾಡವರ್ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್" ಎಂದು. ಸಾಮಾನ್ಯವಾಗಿ ಇದನ್ನು ನಾವೂ ಅರ್ಥವಿಸುವುದು ಹೀಗೆ. "ಹಿಂದಿನ ಕವಿಗಳು ಸಹಜವಾದ ಕವಿತ್ವಕ್ಕೆ ಮಹತ್ವ ಕೊಡುತ್ತಿದ್ದರು. ಇದುವೇ ಇವತ್ತಿನ ನಮ್ಮ ಜಾನಪದದಲ್ಲಿ ಎದ್ದು ಕಾಣುವ ಅಂಶ" ಎಂದು ಹೇಳುತ್ತೇವೆ. ಮಂತ್ರಿಗಳು ಸಹ ತಮ್ಮ ಭಾಷಣಗಳಲ್ಲಿ ಇದನ್ನು ಉದಾಹರಿಸುತ್ತಾರೆ. ಕನ್ನಡ ಸಾಹಿತ್ಯ ಯಾವ ರೀತಿ ಇತ್ತು ಎಂದು ವರ್ಣನೆ ಮಾಡುತ್ತಾರೆ. ಆದರೆ ನಿಜ ವಾಗಿ ನೋಡಿದರೆ ನೃಪತುಂಗನ ಮನಸ್ಸಿನಲ್ಲಿ ಈ ಭಾವನೆ ಇರಲಿಲ್ಲ. 'ಕಾವ್ಯ

ಪ್ರಯೋಗ ಪರಿಣತ ಮತಿಗಳ್'–ಎಂದು ಏಕೆ ಹೇಳಿದೆ ? 'ಕಾವ್ಯ ರಚನಾ ಪರಿಣತ ಮತಿಗಳ್' ಎಂದಿದ್ದರೆ ಸಾಕಿತ್ತಲ್ಲ ! ಕಾವ್ಯ ರಚನೆಯಲ್ಲಿ ಪರಿಣತರಿದ್ದರು—ಕಾವ್ಯ ಓದದಿದ್ದರೂ–ಎಂದಾಗುತ್ತದೆ. ಆದರೆ 'ಪ್ರಯೋಗ' ಎಂದರೆ ಏನು ಅರ್ಥ ? ನನ್ನ ಸ್ವಂತ ಅನುಭವ ಹೇಳುತ್ತೇನೆ. ಎಷ್ಟೋ ವರ್ಷಗಳಿಂದ ಇದು ನನ್ನ ತಲೆಯಲ್ಲಿ ಕೊರೆಯುತ್ತಿತ್ತು-'ಪ್ರಯೋಗ' ಎಂದರೆ ಏನು–ಎಂದು. ಗೌರೀಶಕಾಯ್ಕಿಣಿ, ಸಿ.ಪಿ.ಕೆ., ಮುಂತಾದವರು ಈ ಬಗ್ಗೆ ಬರೆದಿದ್ದಾರೆ. ಸಮರ್ಪಕವೆನಿಸಿರಲಿಲ್ಲ. ಅಕಸ್ಮಾತ್ ನಮ್ಮ ಹಳ್ಳಿಯಲ್ಲಿ ಒಂದು ಸಣ್ಣಸುಳಿವು (clue) ಸಿಕ್ತು. ಒಬ್ಬ ವಿದ್ವಾಂಸ ಜ್ಯೋತಿಷಿಗಳ ಮನೆಯಲ್ಲಿ ಕುಳಿತಿದ್ದಾಗ–ಅವರ ಮನೆಗೆ ಯಾರೋ ಬಂದು–ಅವರ ಮಗನ ಬಗ್ಗೆ ಹೇಳಿದರು 'ಆತ ವೈದಿಕ ವಿದ್ಯೆ ಕಲಿತಿದ್ದಾನೆ; ಪೌರೋಹಿತ್ಯವನ್ನೂ ಕಲಿತಿದ್ದಾನೆ' ಎಂದರು. ಆ ಜ್ಯೋತಿಷಿಗಳು ಕೇಳಿದರು—'ಪ್ರಯೋಗ ಎಷ್ಟಾಗಿದೆ' ಎಂದರೆ ಕಲಿತ ಪೌರೋಹಿತ್ಯದ ಅನುಷ್ಠಾನ ! ಯಾವಾಗಲೋ ತಲೇಲಿ ಈ ನೃಪತುಂಗನ 'ಪ್ರಯೋಗ' ಎಂಬ ಪ್ರಶ್ನೆ ಇದ್ದದ್ದು–ಈ ಜ್ಯೋತಿಷಿಗಳು ಹೇಳಿದಾಗ ಅರ್ಥವಾಯ್ತು. ನೃಪತುಂಗನ ಪ್ರಕಾರ ಪ್ರಯೋಗ ಎಂದರೆ 'ಅನುಷ್ಠಾನ', 'ಪಠನ' ಮಾಡುವದು ಎಂದು ಅರ್ಥ. ಕಾವ್ಯವನ್ನು ಅರ್ಥವತ್ತಾಗಿ ವಾಚಿಸುವ ; ಅದನ್ನು ಕೇಳುವ ಪರಂಪರೆಯೇ ನಮ್ಮಲ್ಲಿ ಇತ್ತು. ಅದಕ್ಕಾಗಿ ನೃಪತುಂಗ 'ಪ್ರಯೋಗ' ಎಂದಿದ್ದಾನೆ. ಇದನ್ನು ಹೇಳಿದ ಕಾರಣ ಏನೆಂದರೆ–ಕುತೂಹಲ ನಮ್ಮ ಮನಸ್ಸಿನಲ್ಲಿ ಇರಬೇಕು. ಅದು ಯಾವ ಹೊತ್ತಿನಲ್ಲಿ ಯಾವಾಗ ಯಾವ ರೀತಿಯಲ್ಲಿ ಹೊರ ಬರುತ್ತದೆ ಎಂದ ಹೇಳಲುಬಾರದು.

2) ಎರಡನೆಯದಾಗಿ—ವೈಚಾರಿಕವಾಗಿ ನಾವು ಬೆಳೆಯಬೇಕೆನ್ನುವ ಸಹಜ ಭಾವನೆ—ಪ್ರಜ್ಞೆ ಇರಬೇಕು. ವೈಚಾರಿಕ ಪ್ರಜ್ಞೆಯ ಉಪಯೋಗ ; ಎಂದರೆ ಚಿಂತನ, ಮಂಥನ ಮಾಡುವುದು ಎಂದರ್ಥ. ಯಾವುದೇ ಒಂದು ವಿಷಯದ ಬಗ್ಗೆ ಚಿಂತಿಸಿದಷ್ಟು ಹೊಸ ಅರ್ಥ ಸಿಗಬಹುದು. ವಿಷಯವನ್ನು ಓದುವಾಗ ಪಂಡಿತರಿರುತ್ತಾರೆ. ಅವರ ಬುದ್ಧಿಶಕ್ತಿ ಹರಿತವಾಗಿರಬಹುದು. ಆದರೆ ಅವರ ಓದು ವೈಚಾರಿಕವಾಗಿರುವುದಿಲ್ಲ. ಚಿಂತನ, ಮಂಥನದಿಂದ ವೈಚಾರಿಕ ಮನೋಭಾವ ಸಾಹಿತ್ಯ ಸಂಶೋಧಕರಲ್ಲಿ ವರ್ಧಿಸುತ್ತದೆ.

ವೈಚಾರಿಕತೆಯ ಫಲವೇನು ಎಂದರೆ—ಹೊಸದನ್ನು ಕಂಡು ಹಿಡಿಯುವುದು. We must find out something new. ಕಂಡು ಹಿಡಿಯುವುದು ಎಂದರೆ ಯಾವುದೋ ವಸ್ತುವನ್ನು ಹುಡುಕುವುದು. ಹುಡುಕುತ್ತೇವೆ. ಮನೆಯಲ್ಲಿ ಕರೆಂಟ್ ಹೋದಾಗ ಬ್ಯಾಟರಿ ಎಲ್ಲಿದೆ ಎಂದು ಹುಡುಕುತ್ತೇವೆ. ಎಂದರೆ ಈಗಾಗಲೇ ಇದ್ದುದನ್ನು ಹುಡುಕುತ್ತೇವೆ. ಇದಕ್ಕೆ ವಿರುದ್ಧವಾದದ್ದು ಎಂದರೆ 'ಕಂಡು ಹಿಡಿಯು

ವುದು.' ಇದಕ್ಕೆ ಉದಾಹರಣೆ ಎಂದರೆ ದ್ವಾರಕಾ ನಗರವನ್ನು ಬಹಳ ಕಷ್ಟ ಪಟ್ಟು ಹುಡುಕಿ ತೆಗೆದದ್ದು ಬಹಳ ದೊಡ್ಡ ಶೋಧನೆ, ಆದರೆ ಶೋಧನೆ ಸಂಶೋಧನೆ ಎಂದೆನಿಸಿಕೊಳ್ಳಲಿಕ್ಕಿಲ್ಲ. ಹುಡುಕುವುದು ಬೇರೆ ; ಗೊತ್ತಿಲ್ಲದ್ದನ್ನು ಕಂಡು ಹಿಡಿಯು ವುದು ಬೇರೆ.

ಈ ಗೊತ್ತಿಲ್ಲದ್ದು ಎನ್ನುವುದರಲ್ಲಿ ಹಲವಾರು ರೀತಿ ಇರುತ್ತವೆ.

—ವಿಷಯದ ಬಗ್ಗೆ ಏನೂ ಗೊತ್ತಿಲ್ಲದಿರುವುದು.

—ಆದರ ಬಗ್ಗೆ ಮಸುಕು ಮಸುಕಾಗಿ ತಿಳಿದಿರುವುದು.

—ಸ್ವಲ್ಪ ಮಾತ್ರ ಗೊತ್ತಿರುತ್ತದೆ-ಮುಂದಿನದು ಗೊತ್ತಿರುವುದಿಲ್ಲ.

—ವಿಷಯದ ಬಗ್ಗೆ ತಪ್ಪು ತಪ್ಪಾಗಿ ಗೊತ್ತಿರುತ್ತದೆ. ನಿಜ ಸಂಗತಿ ಗೊತ್ತಿರು ವುದಿಲ್ಲ. ಇವುಗಳಿಗೆ ಸಾಹಿತ್ಯದಲ್ಲಿ ಉದಾಹರಣೆಗಳನ್ನು ಕೊಡಬಹುದು.

1) ಏನೂ ಗೊತ್ತಿಲ್ಲದಿರುವುದು ; ಸಾಹಿತ್ಯದ ಇತಿಹಾಸಕಾರರು ಹೇಳಿದರು-ಹದಿನೆಂಟನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯ ಏನೂ ಇರಲಿಲ್ಲ. ಅದು ಕತ್ತಲೆಯ ಕಾಲ, ಎಂದು ಸ್ವತಃ ಶ್ರೀರಂಗರೆ ಹೇಳಿದ್ದಾರೆ "18th Century Kannada literature simply did not exist". ಅವರಿಗೆ ಏನೂ ಕಲ್ಪನೆ ಇರಲಿಲ್ಲ. ಹುಡುಕಿದರೆ 18ನೇ ಶತಮಾನದಲ್ಲಿ ಕನಿಷ್ಟ ಎಂದರೆ-200-250 ಕವಿಗಳು ಸಿಗುತ್ತಾರೆ-ಎಲ್ಲರೂ ದೊಡ್ಡ ಕವಿಗಳಾಗಿರಲಿಕ್ಕಿಲ್ಲ. ಆದರೆ ಸಾಹಿತ್ಯ ಇತ್ತು. ಪಂಪ ರನ್ನರ ಮಟ್ಟದಲ್ಲಿಲ್ಲದಿದ್ದರೂ ಸಾಹಿತ್ಯಕಾರರು ಇದ್ದರು.

2) ಮತ್ತೆ ಕೆಲವು ಸಲ ಬಹಳ ಮಸುಮಸುಕಾಗಿ ಗೊತ್ತಿರುತ್ತದೆ ; ಹತ್ತೊಂಬತ್ತನೆ ಶತಮಾನದ ಸಾಹಿತ್ಯ ಇದೆ. ಆದರೆ ಮಸುಮಸಕಾಗಿ, ಸರಿ ಕಲ್ಪನೆ ಇಲ್ಲ.

3) ಸ್ವಲ್ಪ ಮಾತ್ರ ಗೊತ್ತಿರುತ್ತದೆ : ರನ್ನನು ತನ್ನ ಗದಾಯುದ್ಧವನ್ನು ಬರೆಯುವಾಗ ಪಂಪನ 'ಪಂಪ ಭಾರತದ' 13-14ನೇ ಆಶ್ವಾಸ ತೆಗೆದುಕೊಂಡಿದ್ದಾನೆ-ಎಂದು ನಮಗೆ ಗೊತ್ತು. ಮತ್ತೆ ಬೇರೆ ಏನೂ ತೆಗೆದುಕೊಂಡಿಲ್ಲವೆ? ನಮಗೆ ಗೊತ್ತಿಲ್ಲ. ಎರಡೂ ಗ್ರಂಥಗಳನ್ನು ಹಿಡಿದು ನೋಡಿದರೆ ಬೇರೆ ಏನೇನು ತೆಗೆದುಕೊಂಡಿದ್ದಾನೆ ಎಂಬುದು ತಿಳಿಯುತ್ತದೆ.

4) ಎಷ್ಟೋ ಸಲ ತಪ್ಪು ತಪ್ಪಾಗಿ ವಿಷಯ ತಿಳಿದಿರುತ್ತೇವೆ : ಸಂಶೋಧನೆ ಮುಗಿದ ಮೇಲೆ ಗೊತ್ತಾಗುತ್ತದೆ-ಇದು ಹಾಗಲ್ಲ, ಹೀಗಲ್ಲ ಎಂದು. ಸಾಹಿತ್ಯಕ್ಕೆ

ಸಂಬಂಧ ಪಡದ ಒಂದು ಉದಾಹರಣೆ ಹೇಳುತ್ತೇನೆ. ಒಂದು ಕಾಲಕ್ಕೆ 'ಸೂರ್ಯನು ಭೂಮಿ ಸುತ್ತ ತಿರುಗುತ್ತಾನೆ'–ಎಂದು ಒಪ್ಪಿದ್ದನ್ನು–ಇದು ತಪ್ಪು ಎಂದು ಕೋಪರ್ನಿಕಸ್ ತೋರಿಸಿಕೊಟ್ಟ. ಅಲ್ಲಿಯುವರೆಗೆ ಅದೇ ತಪ್ಪು ಕಲ್ಪನೆಯಲ್ಲೇ ಇದ್ದೆವು. ಸಾಹಿತ್ಯದಲ್ಲೂ ಎಷ್ಟೋ ಸಲ ತಪ್ಪು ನಿರ್ಣಯಕ್ಕೆ ಬರುತ್ತೇವೆ. ಹೆಚ್ಚಿನ ಅಭ್ಯಾಸ ಆದಾಗ ಅದು ತಪ್ಪೆಂದು ಗೊತ್ತಾಗುತ್ತದೆ.

3) ಸಾಹಿತ್ಯ ಸಂಶೋಧನೆಯ ಮತ್ತೊಂದು ಮೂಲಭೂತ ಕಂಡುಕೊಳ್ಳುವುದು : ಇದನ್ನು ಉದಾಹರಣೆಯ ಮೂಲಕ ತಿಳಿಯಪಡಿಸಬಹುದು. ಬುದ್ಧ ತಪಸ್ಸು ಮಾಡಿದ–ಬೋಧಿ ವೃಕ್ಷದ ಕೆಳಗೆ ಕುಳಿತು ಜೀವನದ ಮರ್ಮ ಕಂಡುಕೊಂಡ. ಗಾಂಧೀಜಿ ತಮ್ಮ ಆತ್ಮ ಚರಿತ್ರೆಯಲ್ಲಿ ಅಥವಾ ಸತ್ಯಶೋಧದಲ್ಲಿ–ಸತ್ಯವನ್ನು ಕಂಡುಕೊಂಡರು. ಇಲ್ಲಿ ತಿಳಿಯ ಬೇಕಾದ ಮಾತೆಂದರೆ, ಅದನ್ನು ತಮ್ಮ ಮಟ್ಟಿಗೆ ಕಂಡುಕೊಂಡಿದ್ದಾರೆ ! ಸಾಹಿತ್ಯ ಸಂಶೋಧನೆಯಲ್ಲಿ ಹೀಗೆ ಆಗುವುದಿಲ್ಲ. ಸಂಶೋಧನೆಯಲ್ಲಿ ಹೊಸದನ್ನು ಕಂಡು ಹಿಡಿಯುವ ಮೂಲಭೂತ ಗುಣ ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಎಷ್ಟೋ ಸಲ ಕನ್ನಡ ಸಾಹಿತ್ಯದಲ್ಲಿ ಪಿಎಚ್.ಡಿ. ಮಾಡುವವರು ಒಂದು ವಿಷಯ ತೆಗೆದುಕೊಳ್ಳುತ್ತಾರೆ. ಆಗ ಅವರಿವರನ್ನು ಧಾರಾಳವಾಗಿ ಉದ್ಧರಿಸುತ್ತಾರೆ. ಕೊನೆಯಲ್ಲಿ ಸಮಾರೋಪ ಬರೆದರೆ ಪಿಎಚ್.ಡಿ. ಏನೂ ತ್ರಾಸ ಇಲ್ಲದೆ ಆಗುತ್ತದೆ. ಈ ಪ್ರವೃತಿಯಲ್ಲಿ ಹೊಸದನ್ನು ಕಂಡು ಹಿಡಿಯುವ ಪ್ರಮೇಯ ಎಲ್ಲಿದೆ ?

ಮಿತ್ರರೊಬ್ಬರು ಹೇಳುತ್ತಿದ್ದರು : ಸಾಹಿತ್ಯಕ ಬರಹದಲ್ಲಿ ಬೇರೆ ಒಬ್ಬ ಕವಿಯ ಕೃತಿಯಿಂದ ವಿಷಯ ತೆಗೆದುಕೊಂಡು ಬರೆಯುವುದು, ಆಗ ಅವನ ಹೆಸರು ಹೇಳದಿದ್ದರೆ–'ಕೃತಿಚೌರ್ಯ'–ಎನ್ನುತ್ತಾರೆ. 40–50 ಜನರಿಂದ ವಿಷಯಗಳನ್ನು ಎತ್ತಿಕೊಂಡು ಅವರ ಹೆಸರು ಹೇಳದೆ ಹೋದರೆ ಪಿಎಚ್.ಡಿ. ಎನ್ನಿಸಿಕೊಳ್ಳುತ್ತದೆ ಎಂದು. ಈಗ ಇಂತಹ ಪರಿಸ್ಥಿತಿ ಬಂದಿದೆ

ಹೊಸ ಅಂಶದ ಶೋಧದ ಬಗ್ಗೆ ಒಂದು famliar ಸಾದೃಶ್ಯವನ್ನು ಕೊಡುವೆ. ಆಕಳು ಹಾಲು ಕೊಡ್ತವೆ. ಅದು ಹುಳಿ ಆದ ಮೇಲೆ ಮೊಸರಾಗುತ್ತದೆ. ಈ ಮೊಸರನ್ನು ಕಡೆದಾಗ ಬೆಣ್ಣೆ ಬಂದಾಗ–ಹೊಸ ಶೋಧ ಆಯ್ತು, ಕಾಸಿದರೆ ತುಪ್ಪ ಬರುವುದು ಹೊಸ ಶೋಧವೇ, ಇದರ ಅರ್ಥ ಮೂಲತಃ ಹಾಲಿನಲ್ಲಿ ಒಂದು ಸಿದ್ಧಾಂತ ಎಂಬುದಿದೆ ಎಂದು ಯಾರು ಕಂಡು ಹಿಡಿದನೋ ಆತ 'ಸಂಶೋಧನಾ ಕೆಲಸ ಮಾಡಿದ್ದಾನೆ. ಆ ಮೇಲೆ ಅದರಲ್ಲಿ ತುಪ್ಪ ಬರುತ್ತದೆ ಎನ್ನುವುದು ಅನ್ವಯಿಕ ಸಂಶೋಧನವೆನಿಸಿಕೊಳ್ಳುತ್ತದೆ.

ಇನ್ನೊಂದು ಹೋಲಿಕೆ ಎಂದರೆ–ಶ್ರವಣ ಬೆಳಗೊಳದಲ್ಲಿ ಬಾಹುಬಲಿಮೂರ್ತಿ

ಯನ್ನು ಎಲ್ಲರೂ ನೋಡಿದ್ದೇವೆ. ಆ ಮುಖದಲ್ಲಿ ಶಾಂತಮುದ್ರೆ, ಗಾಂಭೀರ್ಯ, ಕಳೆ, ತೇಜಸ್ಸು ತುಂಬಿದೆ. ನಮಗನ್ನಿಸುವುದು–53 ಅಡಿ ಎತ್ತರದ ಕಲ್ಲನ್ನು ಹುಡುಕಿ ತಂದಿರುವುದೇ ಒಂದು ಶೋಧ ಎಂದು. ಆದರೆ ಆ ಮುಖದ ಮೇಲೆ ಇಂತಹ ಕಳೆ ತಂದಿರುವ ರೂವಾರಿ ಇದ್ದಾನಲ್ಲ; ಅವ ಸಾಕಷ್ಟು ಇದರ ಬಗ್ಗೆ ಆ ಮೂರ್ತಿಯನ್ನು ಕಲ್ಪಿಸಿಕೊಂಡಿರುತ್ತಾನೆ. ಜೈನ ಧರ್ಮದ ಪ್ರಕ್ರಿಯೆಗಳನ್ನು ತಿಳಿದಿರುತ್ತಾನೆ. ಬಾಹುಬಲಿಯ ವ್ಯಕ್ತಿತ್ವವನ್ನು ಓದಿ ಅರಗಿಸಿಕೊಂಡಿರುತ್ತಾನೆ. ಅನೇಕ ಪುಸ್ತಕಗಳನ್ನು ಓದಿರುತ್ತಾನೆ. ಇದು ಸಂಶೋಧಕನ ಕೆಲಸ, ಆ ರೂವಾರಿಯಲ್ಲಿ ಸಾಕಷ್ಟು ಶ್ರದ್ಧೆ ಇದ್ದಿದ್ದರಿಂದ ಆ ತೇಜಸ್ಸು ಕಲ್ಲಿನಲ್ಲಿ ಮೂಡಲು ಸಾಧ್ಯವಾಯಿತು.

ಸಂಶೋಧಕನಲ್ಲಿ ಶ್ರದ್ಧೆ ಬಹಳ ಮುಖ್ಯ. ಕೊಪರ್ನಿಕಸ್‌ನ ಬಗ್ಗೆ ಹೇಳಿದೆನಷ್ಟೇ. ಸೂರ್ಯ ಭೂಮಿ ಸುತ್ತ ತಿರುಗುತ್ತಾನೆ ಎಂದು ಅವನಿಗಿಂತ ಹಿಂದಿನ ಖಗೋಳ ಶಾಸ್ತ್ರಜ್ಞರು ಹೇಳಿದ್ದರು. ಆದರೆ ಇವನಿಗೆ ಅದು ಸರಿ ಕಾಣಲಿಲ್ಲ. ಏಕೆಂದರೆ ಅವನು ಸೂರ್ಯೋಪಾಸಕನಾಗಿದ್ದ ! 'ಸೂರ್ಯನಂತಹ ಮಹಾಶಕ್ತಿ ಭೂಮಿಸುತ್ತ ಸುತ್ತುತ್ತದೆಯೆ ?' ಎಂಬ ಸಂಶಯ ತಳೆದ. ಭೂಮಿಯು ಸೂರ್ಯನ ಸುತ್ತ ತಿರುಗಿದ್ದನ್ನು ಊಹಿಸಿಕೊಂಡ. ವೈಜ್ಞಾನಿಕವಾಗಿ ಬಿಡಿಸಿ ಬಿಡಿಸಿ ಯೋಚಿಸಿದಾಗ ಅವನಿಗೆ ಅದೇ ಸರಿ ಎಂಬ ನಿರ್ಣಯಕ್ಕೆ ಬರಲು ಸಾಧ್ಯವಾಯ್ತು. ಈ ನಿರ್ಣಯಕ್ಕೆ ಬರಬೇಕಾದರೆ ಅವನಲ್ಲಿ ಸೂರ್ಯಾಭಿಮಾನ–ಶ್ರದ್ಧೆ ಕೆಲಸ ಮಾಡಿತ್ತು.

ಇನ್ನು ಕೆಲವು ವಿಚಾರಗಳು ಎಂದರೆ ಗ್ರಂಥಾಲಯದಲ್ಲಿ ವಾಚನಾಕ್ಷೇತ್ರ, ಕಾರ್ಯ, ಹಾಗೂ ಕಂಪ್ಯೂಟರ್ ಬಳಕೆ ಇವೆಲ್ಲ ಸಾಮಾನ್ಯ ಅಂಶಗಳು. ಸಾಹಿತ್ಯ ಕ್ಷೇತ್ರಕ್ಕೂ ಅನ್ವಯಿಸುತ್ತವೆ.

ಸಾಹಿತ್ಯ ಸಂಶೋಧನೆಯ ಸ್ಪಷ್ಟ ಕಲ್ಪನೆ ಬರಬೇಕಾದರೆ ಬೇರೆ ಯಾವ ಕ್ಷೇತ್ರಗಳಿವೆ ಎನ್ನುವುದನ್ನು ಸ್ವಲ್ಪ ಗಮನಿಸಬೇಕು. ಅವುಗಳಲ್ಲಿ ಮೂರು ವಿಧ.

1) ವಿಜ್ಞಾನ ಸಂಶೋಧನೆ.

2) ಸಾಮಾಜಿಕ ಶಾಸ್ತ್ರ ಸಂಶೋಧನೆ.

3) ಮಾನವಿಕ ಶಾಸ್ತ್ರಗಳ ಸಂಶೋಧನೆ.

1) ವಿಜ್ಞಾನದಲ್ಲಿ ಗಣಿತ ಬಿಟ್ಟರೆ ಮೂಲಭೂತವಾಗಿ Matter & energy ಪದಾರ್ಥ ಮತ್ತು ಶಕ್ತಿ–ಇವುಗಳ ಸಹಚರ್ಯೆ ಹಾಗೂ ಜೀವವಿಜ್ಞಾನ–

ಇವು ಮುಖ್ಯ ವಿಷಯಗಳಾಗಿ ಬರುತ್ತವೆ. ಈ ಸಂಶೋಧನೆ ಸಂಪೂರ್ಣವಾಗಿ ವಸ್ತು ನಿಷ್ಠವಾದದ್ದು. ಪ್ರಯೋಗಶಾಲೆಯು ಅಗತ್ಯವೂ ಇರುತ್ತದೆ.

2) ಸಾಮಾಜಿಕ ಶಾಸ್ತ್ರಗಳು ಮನುಷ್ಯನ ಬಾಹ್ಯ ಬದುಕಿಗೆ ಸಂಬಂಧಿಸಿದುವು. ಇಲ್ಲಿಯದೂ ಸಾಮಾಜಿಕ ಬದುಕಿಗೆ ನಿಷ್ಠವಾದುದು ಇದರಲ್ಲಿ ವ್ಯಕ್ತಿಗತವಾದದ್ದು ಒಂದು ಭಾಗವಾದರೆ ಇನ್ನೊಂದು-ಕೌಟುಂಬಿಕ, ಮತ್ತೊಂದು ನಾಗರಿಕ ಜೀವನಕ್ಕೆ ಅನ್ವಯಿಸು ವಂತಹುದು. ವಸ್ತುನಿಷ್ಠತೆ ಇಲ್ಲೂ ಇರುತ್ತದೆ.

3) ಮಾನವಿಕ ಶಾಸ್ತ್ರಗಳಲ್ಲಿ ಬರುವ ವಿಷಯಗಳು: ಧರ್ಮ, ಕಲೆಗಳು ಮತ್ತು ಸಾಹಿತ್ಯ. ಮಾನವಿಕ ಎಂದರೆ ಮನುಷ್ಯನ ಆಂತರಂಗಿಕ ಪ್ರತ್ಯಯಗಳು, ಇಲ್ಲಿ ಹೆಚ್ಚಾಗಿ ಸ್ವನಿಷ್ಠವಾಗಿ ಇರುತ್ತದೆ.

ಸಾಹಿತ್ಯ ಸಂಶೋಧನೆ ಇತರ ಯಾವುದೇ ಶಾಸ್ತ್ರಗಳಿಗಿಂತ ಭಿನ್ನ. ಹೇಗೆ ಎಂದರೆ ಸಾಹಿತ್ಯ ಸಂಶೋಧನೆ 100% ಕೃತಿ ನಿಷ್ಠವಾದುದು; ಕೃತಿ ಮೂಲವಾದದ್ದು. ಉದಾ ಹರಣೆಗೆ ಹೇಳುವುದಾದರೆ ಮುದ್ದಣನು ಕನ್ನಡದಲ್ಲಿ ದೊಡ್ಡ ಕವಿ. ಅವನು ಹೇಗಿದ್ದ, ಅವನ ಹೆಂಡತಿ ಹೇಗಿದ್ದಳು, ಅವನ ಕೌಟುಂಬಿಕ ವಿಷಯಗಳು–ಇವೆಲ್ಲಾ ಆನುಷಂಗಿಕ ವಿಷಯಗಳು, ಅವನ ಬಗ್ಗೆಯೂ ತಿಳಿಯಬೇಕಾದರೆ ಅವನ 5 ಕೃತಿಗಳನ್ನು ಓದಿ ತಿಳಿಯಬೇಕಾಗುತ್ತದೆ. ಕೃತಿ ಮೂಲವಾದ್ದರಿಂದ ಸೃಜನಾತ್ಮಕವಾಗಿರುತ್ತದೆ. ಈ ಸೃಜನಾತ್ಮಕ ಪ್ರಕ್ರಿಯೆಯನ್ನು ಎರಡು ದೃಷ್ಟಿಯಿಂದ ನೋಡಬಹುದು.

1) ರಸಗ್ರಹಣ ಅಥವಾ ವಿಮರ್ಶನ ದೃಷ್ಟಿ

2) ಸಂಶೋಧನ ದೃಷ್ಟಿ

ಗಮನಿಸಬೇಕಾದ ಮಾತೆಂದರೆ ಒಂದು ಸಾಹಿತ್ಯ ಕೃತಿಯನ್ನು ಎರಡು ಮಗ್ಗುಲಿಂದ ನೋಡುವುದಕ್ಕೆ ಸಾಧ್ಯ. 'ಕವಿಚರಿತೆ' ಸಾಹಿತ್ಯ ಅಭ್ಯಾಸಿಗಳಿಗೆ ಪರಿಚಿತವಾದ ಕೃತಿ. ರಾ. ನರಸಿಂಹಾಚಾರ್ ಅವರು ಬರೆದದ್ದು. ಅನೇಕ ಕವಿಗಳ ಕಾಲ, ಕೃತಿಗಳ ಬಗೆಗೆ ಅವರು ತಿಳಿಸಿದ್ದಾರೆ. ಇದು ಸಂಶೋಧನಾ ಕೆಲಸ, ಮೂರು ಸಂಪುಟಗಳಿವೆ. ಮೊತ್ತ ಮೊದಲು ಈ ಕೆಲಸ ಮಾಡಿದ್ದರಿಂದ ಇದು ಸಂಶೋಧನಾ ಕೆಲಸವೇ. ಆಮೇಲೆ ಬಂದದ್ದು ಮುಗಳಿಯವರ 'ಕನ್ನಡ ಸಾಹಿತ್ಯ ಚರಿತ್ರೆ'. ಇದು ವಿಮರ್ಶೆಯ ಸದರಿನಲ್ಲಿ ಬರುತ್ತದೆ. ಅಲ್ಲಿ ಸಂಶೋಧನ ಅಂಶ ತುಲನಾತ್ಮಕವಾಗಿ ಕಡಿಮೆ. ಡಾ|| ಎಂ. ಚಿದಾನಂದಮೂರ್ತಿಯವರು "ವಿಮರ್ಶೆ, ಸಂಶೋಧನೆ ಒಂದಕ್ಕೊಂದು ಪೂರಕವಾಗಿರು ತ್ತದೆ. ಯಾವುದು ಬೇಕಿದ್ದರೂ ಮೊದಲು ಬರಬಹುದು"–ಎನ್ನುತ್ತಾರೆ. ಸರಿಯೇ ಇದು.

ಸಂಶೋಧನೆಯಿಂದ ವಿಮರ್ಶೆಗೆ ಹೋದದ್ದಕ್ಕೆ ಇನ್ನೊ ಒಂದು ಉದಾಹರಣೆ ಕೊಡಬಹುದು. ಮುದ್ದಣ ಯಾವ ಯಾವ ದೇವತೆಗಳನ್ನು ಎಷ್ಟೆಷ್ಟು ಬಾರಿ ಸ್ತುತಿಸಿದ್ದಾನೆ, ಎಷ್ಟು ಕಡೆಯಲ್ಲಿ ಸ್ತುತಿಸಿದ್ದಾನೆ ಎಂದು ನೋಡಿದರೆ-ಅಂದರೆ ಬೇರೆ ಬೇರೆ ದೇವತೆಗಳನ್ನು ರಾಮ, ಶಿವ ಇವರನ್ನು ಗಮನಿಸಿದರೆ ಶಿವನನ್ನು ಹೆಚ್ಚು ಬಾರಿ ತೆಗೆದುಕೊಂಡಿರುವುದು ತಿಳಿದು ಬರುತ್ತದೆ. 'ರಾಮಾಶ್ವಮೇಧ', 'ಅದ್ಭುತ ರಾಮಾಯಣ', 'ರಾಮಪಟ್ಟಾಭಿಷೇಕ'—ಹೀಗೆ 3 ರಾಮಾಯಣ ಗ್ರಂಥಗಳನ್ನು ಬರೆದನಾದ್ದರಿಂದ ಅವನು ಉಪಯೋಗಿಸಿದ 'ರಾಮ' ಶಬ್ದಗಳು ಹೆಚ್ಚಿರ ಬೇಕು ಎಂದೆನಿಸುವುದು ಸಹಜ. ಆದರೇನು 'ರಾಮ' ಶಬ್ದದ ಎರಡು ಪಟ್ಟು ಶಿವವಾಚಿ ಶಬ್ದಗಳನ್ನು ಬಳಸಿದ್ದಾನೆ! ಇದು ಒಂದು ಸಂಶೋಧನೆ. ಈ ಆಧಾರದ ಮೇಲೆ ಇವನು ಶಿವನನ್ನು ಇಷ್ಟೊಂದು ಸಲ ಏಕೆ ಸ್ತುತಿಸಿದ್ದಾನೆ, ಯಾವ ರೀತಿ ಶಿವನನ್ನು ತಂದಿದ್ದಾನೆ ಎಂದು ನೋಡಿದಾಗ-ಇವ ಅಪ್ಪಟ-ಶಿವಭಕ್ತ-ಎನ್ನುವುದು ತಿಳಿಯುತ್ತದೆ. ಎರಡನೆಯದಾಗಿ ಇವನು ಆರಾಧಿಸಿದ ಶಿವ ಮಂಗಲಕಾರಕ ಶಿವ, ಲಯಕಾರಿ ಶಿವ ಅಲ್ಲ-ಎನ್ನುವುದನ್ನು ನೋಡುತ್ತೇವೆ. ಇಲ್ಲಿ ಸಂಶೋಧನೆಗೆ ಪೂರಕವಾಗಿ ವಿಮರ್ಶೆ ನೆರವಾಗಿದೆ.

ಮೊದಲು ವಿಮರ್ಶೆ ಆ ಮೇಲೆ ಸಂಶೋಧನೆ ಆಗಬಹುದು. ಅದಕ್ಕೊಂದು ಉದಾಹರಣೆ ಹೇಳುತ್ತೇನೆ. ಕರ್ಣನ ಚಿತ್ರವನ್ನು ಸಾಮಾನ್ಯವಾಗಿ ಮೂರು ಜನ ಮಾಡಿದ್ದಾರೆ. ಮೂಲತಃ ವ್ಯಾಸರ ಅನಂತರ ಪಂಪ ಕುಮಾರವ್ಯಾಸರು. ಮೂರು ಜನರೂ ಯಾವ ಯಾವ ರೀತಿ ಕರ್ಣನನ್ನು ತಂದಿದ್ದಾರೆ ಎನ್ನುವುದಕ್ಕೆ ಅನೇಕ ವಿಮರ್ಶಾತ್ಮಕ ಲೇಖನಗಳು ಬಂದಿವೆ. ಶಂ.ಬಾ. ಜೋಶಿಯವರು ಮೂಲತಃ ಸಂಶೋಧಕರು. ಅವರೊಂದು ಪುಸ್ತಕ ಬರೆದರು-'ಕರ್ಣನ ಮೂರು ಚಿತ್ರಗಳು' ಎಂದು. ಅದರಲ್ಲಿ ವಿಮರ್ಶೆಯ ಅಂಶ ತೀರ ಗೌಣವಾಗಿದೆ. ಅವರು ಸಂಶೋಧನಾ ದೃಷ್ಟಿಯಿಂದ ಆ ಪುಸ್ತಕ ಬರೆದಿದ್ದಾರೆ. ಇದರಿಂದ ತಿಳಿಯುವುದೇನೆಂದರೆ-ಸಾಹಿತ್ಯ ಸಂಶೋಧನೆ, ಸಾಹಿತ್ಯ ವಿಮರ್ಶೆ ಸ್ಥೂಲವಾಗಿ ಬೇರೆ ಕಂಡರೂ ಒಂದಕ್ಕೊಂದು ಪೂರಕವಾಗಿರುತ್ತವೆ.

ಆದರೆ ಸಾಹಿತ್ಯ ವಿಮರ್ಶೆಗಳೆಲ್ಲವೂ ಸಂಶೋಧನೆ ಎನ್ನುವ ತಪ್ಪು ಕಲ್ಪನೆ ನಮ್ಮಲ್ಲಿ ಅನೇಕರಿಗಿದೆ. ವಿಮರ್ಶೆಯಲ್ಲಿ ಸಂಶೋಧನೆ ಇರುವುದಿಲ್ಲ ಎಂದಲ್ಲ, ಮುಗಳಿಯವರ 'ರನ್ನನ ಕೃತಿ ರತ್ನ'ದಲ್ಲಿ ಬೇಕಾದಷ್ಟು ವಿಮರ್ಶೆ ಇದ್ದರೂ ಹೊಸ ಹೊಸ ಮಾತುಗಳನ್ನು ಕಂಡು ಹಿಡಿದಿದ್ದಾರೆ. ಆದ್ದರಿಂದ ಈ ಕೃತಿಯು ಸಂಶೋಧನೆಯೇ.

ಇನ್ನೀಗ ಸಾಹಿತ್ಯ ವಿಮರ್ಶೆ. ಸಾಹಿತ್ಯ ಸಂಶೋಧನೆ ಯಾವುವು ಎಂಬುದನ್ನು ಇನ್ನಷ್ಟು ಸ್ಪಷ್ಟವಾಗಿ ತಿಳಿದುಕೊಳ್ಳೋಣ. ಅನೇಕ ಹಳಗನ್ನಡ ಕೃತಿಗಳನ್ನು

ಸಂಪಾದಿಸಿ ವಿಸ್ತಾರವಾದ ಪೀಠಿಕೆ ಬರೆದಿರುತ್ತಾರೆ. 40–50 ಪುಟಗಳಷ್ಟು. ಟಿ. ಎಸ್. ವೆಂಕಣ್ಣಯ್ಯನವರು, ಡಿ. ಎಲ್. ನರಸಿಂಹಾಚಾರ್ಯರು ಮೊದಲಾದವರು ಪೀಠಿಕೆಯಲ್ಲಿ ಕವಿಯ ಕಾಲ ವಿಚಾರ, ಭಾಷೆ, ಮತವಿಚಾರ, ಕಥಾ ವಸ್ತುವಿನ ಆಕರ, ಪಾಠಾಂತರ ನಿರ್ಣಯ, ಸಮಕಾಲೀನ ಚಿತ್ರಣ, ಇತರ ಕೃತಿಗಳಿಗೆ ಹೋಲಿಸಿ ಹೇಳಿರುವುದು–ಇವೆಲ್ಲವೂ ಸಾಧಾರಣವಾಗಿ ಸಂಶೋಧನೆಯ ಸದರಿನಲ್ಲಿ ಬರುವಂಥದ್ದು. ಇನ್ನು ವಿಮರ್ಶೆ ಅಥವಾ ರಸಗ್ರಹಣದಲ್ಲಿ–ಕೃತಿಯಲ್ಲಿ ಬರುವ ಸುಂದರ ವರ್ಣನೆ, ಪಾತ್ರಸೃಷ್ಟಿ, ಅವನ ಶೈಲಿ, ನಿರೂಪಣಾ ಕ್ರಮ. ಇವೆಲ್ಲವೂ ಸಾಹಿತ್ಯ ವಿಮರ್ಶೆಯ ಸದರಿನಲ್ಲಿ ಬರುವಂತಾದ್ದು.

ಪಂಪ ಹೇಳಿದ್ದಾನೆ–'ನೆನೆವುದೆನ್ನ ಮನಂ ಬನವಾಸಿ ದೇಶಮಂ' ಯಾವುದಾದ ರೊಂದು ಸುಂದರ ವಸ್ತುವನ್ನು ನೋಡಿದಾಗ ಅದರದ್ದೇ ನೆನಪುಳಿಯುವುದು ಸಹಜ. ಬನವಾಸಿಯನ್ನು ಇನ್ನಷ್ಟು ವಿಸ್ತಾರವಾಗಿ ಹೇಳಿದ್ದಾನೆ. ಅದನ್ನು ನಾವು ಮೆಚ್ಚ ಬಹುದು. ರಸಗ್ರಹಣ ಮಾಡಬಹುದು. ಆದರೆ ಸಂಶೋಧನಾ ದೃಷ್ಟಿ ಹೇಗೆ ಬದಲಾಗು ತ್ತದೆ ಎನ್ನುವುದನ್ನು ನಾವು ನೋಡಬೇಕು. ಪಂಪ ಬನವಾಸಿ ಒಂದನ್ನೇ ಏಕೆ ಹೇಳಿದ, ಅಷ್ಟೇ ಪರಿಚಿತವಾದ ಪುಲಿಗೆರೆ ಎಂದೇಕೆ ಹೇಳಲಿಲ್ಲ ? ಪ್ರಾಯಶಃ ಬನವಾಸಿ ಯಲ್ಲಿ ಪಂಪನ ಯಾವುದಾದರೂ ಪ್ರೇಯಸಿ ಇದ್ದಿರಬೇಕು, ಅಥವಾ ಹೆಂಡತಿಯೇ ಅಲ್ಲಿಂದ ಬಂದಿರಬೇಕು, ಅಥವಾ ಬಾಲ್ಯದ ದಿನಗಳನ್ನು ಕಳೆದಿದ್ದಾನೋ ಅಥವಾ ಅವನ ತಾಯಿಯ ತವರು ಇರಬಹುದು. ಏನೋ–ಹೀಗೆ ವಿಚಾರ ಮಾಡಿ ಹುಡುಕುತ್ತಾ ಹೋದರೆ ಅದಕ್ಕೆ ಪೂರಕವಾಗಿ ಏನಾದರು ಅಂಶ ಸಿಕ್ಕಿದ್ದೇ ಆದರೆ ಅದು ಸಂಶೋಧನೆಯ ಸದರಿನಲ್ಲಿ ಬರುತ್ತದೆ.

ರನ್ನ ಹೇಳ್ತಾನೆ–ದುರ್ಯೋಧನನ ವಿಚಾರವಾಗಿ "ನೀರೊಳಗಿರ್ದುಂ ಬೆಮರ್ದಂ ಉರಗ ಪತಾಕಂ"–ಎಂದು, ಎಂತಹ ಸುಂದರ ಕಲ್ಪನೆ ! ಇದನ್ನೆ ಬೆಳೆಸಿ 'ನಿಜದನಿ' ಎಂಬುದರಲ್ಲಿ ಜಿ. ಹೆಚ್. ನಾಯಕರು ದೊಡ್ಡ ಪ್ರಬಂಧ ಬರೆದಿದ್ದಾರೆ–40–50 ಪುಟ ಗಳಷ್ಟು. ಇದನ್ನು ಯಾವ ಯಾವ ರೀತಿಯಲ್ಲಿ ಅರ್ಥ ಹಚ್ಚಬಹುದು ಎಂದು–ನೋಡಿ ದಲ್ಲಿ ಅದು ವಿಮರ್ಶೆಯ ಸದರಿನಲ್ಲಿ ಬರುತ್ತದೆ.

'ಕೃತಿ ಮೂಲ' ಎಂದು ಹೇಳಿದೆನಷ್ಟೇ. ಆದರೆ ಇತರ ಸಂಶೋಧನಾ ಕ್ಷೇತ್ರ ಗಳಿಗೆ ಅನ್ವಯಿಸಿ ಹೇಳಿದಾಗ ಗಮನದಲ್ಲಿಟ್ಟು ಹೇಳುವುದಾದರೆ ಸಾಹಿತ್ಯದ ಸಂಶೋಧನೆ ಯಲ್ಲಿ ಕೃತಿ-ಅದು ಯಾವುದೇ ಕಾಲದ್ದಿದ್ದರೂ, ಯಾವುದೇ ದೇಶ, ಮತ, ಪಂಥಕ್ಕೆ ಸೇರಿ ದ್ದರೂ ನಮಗೆ ಸಂಶೋಧನೆಗೆ ಯೋಗ್ಯವಾಗುತ್ತದೆ. ಆದರೆ ವಿಜ್ಞಾನದ ವಿಷಯದಲ್ಲಿ

ಹೀಗೆ ಆಗುವುದಿಲ್ಲ. ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿ ಈಗ ಕಂಡು ಹಿಡಿದಿದ್ದು ಇನ್ನು ನಾಲ್ಕೈದು ವರ್ಷಗಳಲ್ಲಿಯೇ ಹಳತಾಗಿ ಬಿಡುತ್ತದೆ. ಕಂಪ್ಯೂಟರ್ ವಿಷಯದಲ್ಲಂತೂ ಎಷ್ಟು ವೇಗವಾದ ಬೆಳವಣಿಗೆಯೆಂದರೆ ಅದು ಅರ್ಥವೇ ಆಗುವುದಿಲ್ಲ. ಇಂತಹ ಪರಿಸ್ಥಿತಿ ಸಾಹಿತ್ಯ ಸಂಶೋಧನೆಯಲ್ಲಿ ಇರುವುದಿಲ್ಲ. ಪಂಪನ ಮಹಾಭಾರತ ಹತ್ತನೆ ಶತಮಾನದ್ದಾದರೂ ಇವತ್ತಿಗೂ ಬೇಕಾಗುತ್ತದೆ. ಅದರ ಮೌಲಿಕತೆ ಇದ್ದೇ ಇರುತ್ತದೆ. ಒಂದು ಉತ್ತಮ ಸಾಹಿತ್ಯ ಕೃತಿ–ಯಾವುದೇ ದೇಶದ್ದಾಗಲಿ, ಪ್ರದೇಶದ್ದಾಗಲಿ ಗಮನಾರ್ಹವಾಗೆ ಇರ್ತದೆ. ದಕ್ಷಿಣ ಆಫ್ರಿಕಾದ ಕಪ್ಪು ಜನರ ಕಾವ್ಯದ ಬಗ್ಗೆ ಬೇಕಾದಷ್ಟು ಮಾತಾಡುತ್ತೇವೆ. ಮತ ಪಂಥಗಳು ಸಹಿತ ಯಾವ ಕಾಲಕ್ಕೂ ಒಳ್ಳೆಯ ಸಾಹಿತ್ಯ ಕೃತಿಗೆ ಅಡ್ಡ ಬರುವುದಿಲ್ಲ. ಕನಕದಾಸರನ್ನು ಉತ್ತಮ ಮಟ್ಟದಲ್ಲಿ–ಪುರಂದರದಾಸರ ಮಟ್ಟದಲ್ಲಿಯೇ ಗಣಿಸುತ್ತೇವೆ, ಗೌರವಿಸುತ್ತೇವೆ. ಅವರು ಯಾವ ಜಾತಿ ಎಂದು ನೋಡಲಿಲ್ಲ. ಇತ್ತೀಚೆಗೆ ರಾಮದಾಸರು ಎನ್ನುವ ಹರಿದಾಸರು ಆಗಿ ಹೋದರು. ಅವರ ಸಂಗ್ರಹವನ್ನು ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿದ್ದಾರೆ. ರಾಮದಾಸರೆಂದರೆ ಬ್ರಾಹ್ಮಣರ ಪೈಕಿ ಎಂದು ತಿಳಿಯಬೇಡಿರಿ. ಆದರೆ ಅವರು ಮುಸಲ್ಮಾನರು–ಬಡೇಸಾಬ್ ಎಂದು ಹೆಸರು. ಇನ್ನೊಬ್ಬರು ಹುಸೇನಾಸಾಬ್ ಎಂದು. ಅವರು ಎಷ್ಟು ಚೆನ್ನಾಗಿ ದಾಸರ ಪದವನ್ನು ತಿಳಿಸಿ ಹೇಳಿ ಹಾಡುತ್ತಾರೆ! ಹೀಗೆ, ಜಾತಿ, ಮತ, ಪಂಥ ಇವಾವವೂ ಸಾಹಿತ್ಯಕ್ಕೆ ಖಂಡಿತ ಅಡ್ಡ ಬರುವುದಿಲ್ಲ.

ಸಾಹಿತ್ಯ ಸಂಶೋಧನೆಯ ಇನ್ನು ಕೆಲವು ಲಕ್ಷಣಗಳಿವೆ. ಯಾವುದು ಅಲಕ್ಷಿತವಾಗಿರುತ್ತದೊ ಅದು ಪ್ರಯೋಜನವಿಲ್ಲ ಎಂದುಕೊಂಡಿರುವುದು ಬೆಳಕಿಗೆ ಬರಬಹುದು. ಪ್ರಯೋಜನವಿಲ್ಲ ಎಂದುಕೊಂಡಿದ್ದನ್ನು ಸಂಶೋಧನೆಗೆ ಎತ್ತಿಕೊಳ್ಳಬಹುದು.

ಇನ್ನೊಂದು ವಿಷಯ. ಸಾಹಿತ್ಯದ ಸಂಶೋಧನೆ ಸಾಕಷ್ಟು ವ್ಯಾಪಕವಾಗಿರುತ್ತದೆ ಏಕಮುಖವಾದದ್ದಲ್ಲ. ವಿಜ್ಞಾನದಲ್ಲಿ ಒಂದೇ ವಿಷಯ ಅದರಲ್ಲಿ ಎಷ್ಟು ಆಳವಾಗಿ ಹೋಗಲು ಸಾಧ್ಯವೋ ಅಷ್ಟು ಹೋಗಿ, ಕಂಡು ಹಿಡಿದ ಹೊಸ ಮಾತು ಹೇಳುತ್ತಾರೆ. ಸಾಹಿತ್ಯದಲ್ಲಿ ಹಾಗಲ್ಲ. ಯಾವುದು 'ಅಂತರ್‌ಶಿಸ್ತೀಯ' ಎನ್ನುತ್ತೇವೆಯೋ ಆ ಸಾಹಚರ್ಯ ಸಾಹಿತ್ಯಕ್ಕೆ ಅನ್ವಯಿಸುತ್ತದೆ. ಸಾಹಿತ್ಯ ಸಂಶೋಧನೆ ಮಾಡುವವರಿಗೆ ಮನೋವಿಜ್ಞಾನ ಬೇಕಾಗುತ್ತದೆ, ಇತಿಹಾಸ, ಕಲೆ, ಧರ್ಮ ಸಾಮಾಜಿಕ ನಡವಳಿಕೆ ಇವೂ ಬೇಕು. ಬೇರೆ ಯಾವುದೇ ಸಂಶೋಧನೆಗಿಂತ ಸಾಹಿತ್ಯ ಸಂಶೋಧನೆಗೆ ಇತರ ಕ್ಷೇತ್ರಗಳ ಸಾಹಚರ್ಯ ಬೇಕು. ಏಕೆಂದರೆ ಸಾಹಿತ್ಯ ಸಂಶೋಧನೆಯಲ್ಲಿ–ಸಾಹಿತ್ಯ ಸಮಗ್ರ ಜನಜೀವನವನ್ನು ಪ್ರತಿಬಿಂಬಿಸಿರುತ್ತದೆ. ಈಗ ಕುಮಾರವ್ಯಾಸ ಭಾರತವನ್ನು ತೆಗೆದುಕೊಂಡರೆ ಅದರಲ್ಲಿ ಕೃಷ್ಣನ ಕತೆ, ಯುದ್ಧ ಸನ್ನಿವೇಶ ಉತ್ತರ ಕುಮಾರನ

ಹಾಸ್ಯದ ಸನ್ನಿವೇಶ ಹೀಗೆ ಅನೇಕ ಸನ್ನಿವೇಶಗಳು ಬರುತ್ತವೆ. ಆದರೆ ಅಲ್ಲಿ ಇನ್ನೂ ಅನೇಕ ದೃಷ್ಟಿಕೋನಗಳಿವೆ. ಇವನ ಕಾವ್ಯದಲ್ಲಿ ಭಾಗವತ ಪಂಥ ಯಾವುದು ಎಂದು ಕಂಡು ಹಿಡಿಯಬಹುದು. ಅವನ ಕಾಲದ ಸಾಮಾಜಿಕ ಜೀವನ ಹೇಗಿತ್ತು ಎಂದು ತಿಳಿಯಬಹುದು, ರಾಜಕೀಯ ಛಾಯೆ ಆದರಲ್ಲಿ ಇದೆ ಅನ್ನಿಸಬಹುದು. ಮರಾಠಿ ನುಡಿಗಳನ್ನು ಸಾಕಷ್ಟು ಕಾಣಬಹುದು, ಮತ್ತು ಆ ಭಾಗದಲ್ಲಿ ಮರಾಠಿ ಅಂಶ ಎಷ್ಟಿತ್ತು ಎಂದು ಕಾಣಬಹುದು.

೧೯೩೦ರ ದಶಕದಲ್ಲಿ ಗಾಂಧೀಜಿ ಹರಿಜನ ಸಮಸ್ಯೆಯ ಬಗ್ಗೆ ಚಳುವಳಿ ನಡೆಸಿದ್ದು, ನಮ್ಮ ಸಾಹಿತಿಗಳ ಮೇಲೆ ಸಾಕಷ್ಟು ಪರಿಣಾಮ. ಮಾಡಿತು. ಆ ಕುರಿತು ನಾಲ್ಕೈದು ಜನ ಸಾಹಿತಿಗಳು ಹರಿಜನರ ಸಮಸ್ಯೆ ಎತ್ತಿಕೊಂಡು ಕೃತಿ ಬರೆದಿದ್ದಾರೆ. ಶ್ರೀರಂಗರ–'ಹರಿಜನ್ವಾರ' ; ಮಾಸ್ತಿಯವರ–'ಕಾಕನಕೋಟೆ' ; ಕುವೆಂಪು ಅವರ–'ಶೂದ್ರ ತಪಸ್ವಿ', ಗೋರೂರರ–'ಹೇಮಾವತಿ'–ಮುಂತಾದವು. ಗಾಂಧೀಜಿ ಹೇಳಿದ–ಅಹಿಂಸೆ, ಹರಿಜನೋದ್ಧಾರ, ಹರಿಜನ ಸಮಸ್ಯೆ–ಇವೆಲ್ಲಾ ನಮ್ಮ ಸಾಹಿತಿಗಳ ಮೇಲೆ ಎಷ್ಟರ ಮಟ್ಟಿಗೆ ಪ್ರಭಾವ ಬೀರಿದೆ ಎನ್ನುವುದನ್ನು ಗಮನಿಸಿದರೆ–ಇದು ಅಂತರ ಶಿಸ್ತಿನ ವಿಷಯವಾದಂತೆಯೇ ಆಯ್ತು.

ಸಾಹಿತ್ಯ ಸಂಶೋಧನೆ ಬಹಳ ವೈವಿಧ್ಯಮಯವಾಗಿರುತ್ತದೆ. ಒಬ್ಬರು ಕನ್ನಡ ಸಾಹಿತ್ಯದಲ್ಲಿ ಪಿಹೆಚ್.ಡಿ. ಮಾಡಿದ್ದಾರೆ. 'ಕನ್ನಡ ಸಾಹಿತ್ಯದಲ್ಲಿ ಸೀತೆಯ ಪಾತ್ರ'–ಎನ್ನುವ ಒಂದು ಸಂಶೋಧನಾ ಪ್ರಬಂಧದಲ್ಲಿ–ಸೀತೆ ವಾಲ್ಮೀಕಿಯಿಂದ ಕುವೆಂಪುವರೆಗೆ ಅವರ ಕಾವ್ಯಗಳಲ್ಲಿ ಹೇಗೆ ಕಾಣಿಸಿಕೊಂಡಿದ್ದಾಳೆ, ಆ ವಿಷಯ ಹೇಗೆ ಬೆಳೆದು ಬಂದಿದೆ ಎಂಬುದನ್ನು ವೈವಿಧ್ಯಮಯವಾಗಿ ತಿಳಿಸಿದ್ದಾರೆ. ಆದರಿಂದ ಸಾಹಿತ್ಯ ಸಂಶೋಧನೆಯಲ್ಲಿ ಎಷ್ಟು ದೃಷ್ಟಿಕೋನಗಳಿರುತ್ತವೆ ಎಂದು ತಿಳಿಯುತ್ತದೆ.

ಇನ್ನು ಯಾವ ಯಾವ ದೃಷ್ಟಿಕೋನದಿಂದ ಸಾಹಿತ್ಯ ಸಂಶೋಧನೆಯನ್ನು ನಡೆಸಬಹುದೆಂದು ನೋಡುವಾ.

ಅ) ಚಾರಿತ್ರಿಕ ದೃಷ್ಟಿ : 'ಕನಕದಾಸರು ಕಂಡ ವಿಜಯನಗರ' ಬೆಟಗೇರಿ ಕೃಷ್ಣಶರ್ಮರು ಬರೆದಿರುವುದು. ಇದು ನಿಜವಾದ ಸಂಶೋಧನೆ.

ಆ) ತೌಲನಿಕ ದೃಷ್ಟಿ : ಎಂದರೆ ಎರಡು ಕೃತಿಗಳ ಹೋಲಿಕೆ ಅಥವಾ ಬೇರೆ ಬೇರೆ ಭಾಷೆಗಳಲ್ಲಿ ಬಂದದ್ದನ್ನು ಹೋಲಿಸಿ ನೋಡಬಹುದು.

ಇ) ಪುನರ್ ಮೌಲ್ಯಮಾಪನ : ಹಿಂದೆ ಯಾವ ಸಂಶೋಧನೆ ಆಗಿರುತ್ತದೋ ಅದರ ಮುಂದುವರಿಕೆ ಇದಾಗುತ್ತದೆ.

ಈ) ಸಂಖ್ಯಾನ್ವಯ ದೃಷ್ಟಿ : 'ಹರಿಹರನ ರಗಳೆಗಳ ಸಂಖ್ಯಾ ನಿರ್ಣಯ' ಡಾ|| ಹಿರೇಮಲ್ಲೂರ್ ಈಶ್ವರನ್ ಬರೆದದ್ದು ಇದಕ್ಕೊಂದು ನಿದರ್ಶನವಾಗಬಲ್ಲದು.

ಉ) ಶಬ್ದ ಮೂಲದ ಶೋಧ : ಮೊದಲ ಬಾರಿಗೆ ರಚಿತವಾಗುವ ಶಬ್ದ ಕೋಶ ಈ ಸದರಿನಲ್ಲಿ ಬರಬಹುದು.

6) ಸಾಹಿತ್ಯ ಸಂಶೋಧನೆ ಮಾಡುವವರು ಹಳಗನ್ನಡ, ಹೊಸಗನ್ನಡ, ಕಾವ್ಯಶಾಸ್ತ್ರ, ಜಾನಪದ ಸಾಂಸ್ಕೃತಿಕವಲಯ ಇವುಗಳನ್ನು ತಿಳಿದಿರಬೇಕು. ಮೂಲಭೂತ ಆಕರಗಳನ್ನು ಗಮನಿಸಿರಬೇಕು. ಪೌರಾಣಿಕ ಗ್ರಂಥಗಳು ಕಾವ್ಯಗಳನ್ನು ಓದಿರಬೇಕು. ಪಂಪ ಭಾರತ, ಕುಮಾರವ್ಯಾಸ ಭಾರತ, ರಾಜಶೇಖರ ವಿಳಾಸ-ಈ ಮೂರನ್ನೂ ಮನನ ಮಾಡಿದ್ದರೆ, ಅವರು ನಿಜವಾಗಿ ಹಳಗನ್ನಡ ಸಾಹಿತ್ಯವನ್ನು ವಿಶೇಷವಾಗಿ ಅಭ್ಯಾಸ ಮಾಡಿದಂತೆ ಎಂದು ತಿಳಿಯಬಹುದು. ಧಾರ್ಮಿಕ ಗ್ರಂಥಗಳನ್ನು ಓದಿರಬೇಕು, ಜೈನಧರ್ಮ ಗ್ರಂಥದಲ್ಲಿ ಬರುವ ಜೈನ ಪಾರಿಭಾಷಿಕ ಭಾಷೆ ತಿಳಿದಿರಬೇಕು. ನಮ್ಮ ಸಾಹಿತ್ಯದಲ್ಲಿ ಪ್ರತಿಫಲಿತಗೊಂಡ ವೀರಶೈವ ಧರ್ಮ ವಿಚಾರಗಳು ಅರ್ಥವಾಗಬೇಕಾದರೆ-ವೀರಶೈವ ಪಾರಿಭಾಷಿಕಭಾಷೆ ತಿಳಿದಿರಬೇಕು. ದ್ರಾವಿಡ ಭಾಷಾ ಸಾಹಿತ್ಯವೂ ಗೊತ್ತಿರಬೇಕು. ಮೂಲಭಾಗವತವನ್ನು ಚೆನ್ನಾಗಿ ಅಭ್ಯಾಸ ಮಾಡದಿದ್ದರೆ ದಾಸ ಸಾಹಿತ್ಯದ ಮರ್ಮಗಳನ್ನು ತಿಳಿಯಲು ಆಗುವುದಿಲ್ಲ. ೬೩ ಪುರಾತನರ ಬಗ್ಗೆ ತಿಳಿಯದಿದ್ದರೆ ಹರಿಹರನ ರಗಳೆಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ದಾರ್ಶನಿಕ ಸಾಹಿತ್ಯ ಬೇಕಾಗುತ್ತದೆ. ಇತರ ಮಾನವಿಕ ವಿಷಯಗಳು ತಿಳಿದಿರಬೇಕು. ಸಮಾಜಶಾಸ್ತ್ರ, ಮನೋವಿಜ್ಞಾನಕ್ಕೆ ಸಂಬಂಧಪಟ್ಟ ವಿಷಯಗಳು-ಇವು ಹೊಸಗನ್ನಡ ಸಾಹಿತ್ಯ ಅಭ್ಯಾಸ ಮಾಡುವಾಗ ತಿಳಿದಿರಬೇಕಾಗುತ್ತದೆ.

7) ಸಂಶೋಧನಾ ವಿಷಯಗಳನ್ನು ಆರಿಸಿಕೊಳ್ಳುವಾಗ ಆ ವಿಷಯದ ಬಗ್ಗೆ ಹಲವಾರು ತಿಂಗಳು ವಿಚಾರ ಮಾಡಿರಬೇಕು. ಅದರ ಆಕರಗಳೇನು ? ಅದರ ವ್ಯಾಪಕತೆ ಎಷ್ಟಿದೆ ಎಂದು ತಿಳಿದಿರಬೇಕು. ಸಂಶೋಧನೆಗೆ ಅಭ್ಯಾಸ ಮಾಡುತ್ತಾ ಮಾಡುತ್ತಾ ಎಷ್ಟೋ ಸಣ್ಣ ಸಣ್ಣ ವಿಷಯಗಳು ಗೊತ್ತಾಗುತ್ತಾ ಹೋಗುತ್ತವೆ. ನನ್ನದೇ ಒಂದು ಅನುಭವ ಹೇಳುತ್ತೇನೆ. ಹೊಸಗನ್ನಡದ ಅರುಣೋದಯ ೧೯ನೆ. ಶತಮಾನದ್ದು. ಆಗಿನ ಕೆಲವು ಕವಿತೆಗಳನ್ನು ಓದುವಾಗ-ಎಷ್ಟು ಚೆನ್ನಾಗಿ ಮಾತ್ರ ಲೆಕ್ಕಾ ಇಟ್ಟುಕೊಂಡು ಕವಿತೆ ರಚಿಸಿದ್ದಾರೆ. ಸ್ವಲ್ಪ ಈ ಬಗ್ಗೆ ಹುಡುಕಿದರೆ ೩-೪ ಪ್ರಕಾರಗಳು ಕಂಡುಬಂತು. ಡಿ. ಎಸ್. ಕರ್ಕಿಯವರು ತಮ್ಮ ಛಂದೋವಿಕಾಸದಲ್ಲಿ 3-3-3-3 ; 3-4 ; 3-4 ; 4-4-4-4 ; 5-5-5-5 ಮಾತ್ರೆಗಳೆಂಬ ಪ್ರಕಾರಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ ಕನ್ನಡ ಕವಿಗಳಿಗೆ ಈ 3-4, 3-4,

ಮಾತ್ರೆಗಳು ಹೆಚ್ಚು ಮೆಚ್ಚಿಕೆ ಆದಂತೆ ಕಂಡು ಬಂದಿಲ್ಲ. ಪುರಂದರದಾಸರ ಒಂದು ಹಾಡಿದೆ– "ಎಂದು ಕಾಂಬೆನೊ ಎನ್ನ ಸಲಹುವ ತಂದೆ ಉಡಪಿಯ ಜಾಣನ" 3–4–3–4 ಮಾತ್ರೆಯದ್ದು, ತಿರುಕೊಳವಿನಾಚಿಯ ಪ್ರಲಾಪದಲ್ಲಿ 'ಮಗನೆ ನೀನಿಂತಳಿಯೆ ಸೈರಿಪೆನೆಂತು ಪೇಳ್ಕೈ ಶಂಕರ'–ಎಂದು ಬರುತ್ತದೆ. ಎಸ್. ಜಿ. ನರಸಿಂಹಾಚಾರ್ ಅವರ "ಗಿರಿಜೆ ನರನನು ಬಯಸಿ ಬಂದಳು ಹರನನು ಶಶಿಧರನನು"–ಬೇಂದ್ರೆಯವರೂ ಈ ಪ್ರಯೋಗವನ್ನು 3–4 ಕಡೆ ತಂದಿದ್ದಾರೆ. ಇದನ್ನು ಕಂಡು ಹಿಡಿದೆ ಎಂದು ಬಹಳ ಸಂತೋಷ ಆಯ್ತು.

ಕೊನೆಯದಾಗಿ ಕಂಪ್ಯೂಟರ ವಿಷಯ ಹೇಳಿ ಮುಗಿಸುತ್ತೇನೆ. ಸಾಹಿತ್ಯದ ಅಭ್ಯಾಸಕ್ಕೆ ಕಂಪ್ಯೂಟರ್‌ನ್ನು ಬಳಸಬೇಕಾಗುತ್ತದೆ. ಕನ್ನಡ ಸಾಹಿತ್ಯಕ್ಕೂ ಇದು ಅನ್ವಯಿಸುತ್ತದೆ. ಏಕೆಂದರೆ ಎಷ್ಟೋ ಸಲ ವಿಮರ್ಶನ ಬುದ್ಧಿ ಒಮ್ಮೊಮ್ಮೆ ಕೈ ಕೊಡುತ್ತದೆ. ಇಂಗ್ಲಿಷ್ ಸಾಹಿತ್ಯದಲ್ಲೂ ಇದು ಬರುತ್ತದೆ. ಕೀಟ್ಸ್ ಕವಿಗೆ ಇಂಥಿಂಥ ಬಣ್ಣಗಳು ಬಹಳ ಪ್ರಿಯವಾದದ್ದು ಎಂದು ಒಂದು ಥಿಯರಿಯೇ ಇದೆ .ಯಾರೋ ಒಬ್ಬರು ಆವನ ಕೃತಿಗಳನ್ನೆಲ್ಲ ಕಂಪ್ಯೂಟರಿಗೆ ಹಾಕಿ ಆದರಿಂದ ಅವನ ಶಬ್ದಗಳು ಯಾವುವೆಂದು ಪತ್ತೆ ಮಾಡಿದಾಗ ಅವು ಬೇರೆ ಬಣ್ಣಗಳೇ ಹೊರಟವು, ಕಂಪ್ಯೂಟರಿನ ಸಹಾಯ ತೆಗೆದು ಕೊಂಡಿದ್ದರಿಂದ ಇದನ್ನು ಸಾಧಿಸಲು ಸಾಧ್ಯವಾಯಿತು.

ಮುದ್ದಣನ ಶಿವಭಕ್ತಿ ಅಥವಾ ಶಿವ ಪಾರಮ್ಯ–ಕಂಪ್ಯೂಟರಿಂದಲೇ ಕಂಡು ಬಂದದ್ದು. ಶಿವನ ಪರವಾದ ಶಬ್ದಗಳು ರಾಮವಾಚಿ ಶಬ್ದಗಳಿಗಿಂತ ಎರಡು ಪಟ್ಟು ಹೆಚ್ಚಿದ್ದವು ಎಂದು ಹೇಳ ಸಾಧ್ಯವಾದದು.

ಕಂಪ್ಯೂಟರ್ ಸಹಾಯದಿಂದ ಇಂತಹ ಅನೇಕ ಸಮಸ್ಯೆಗಳನ್ನು ಬಗೆಹರಿಸ ಬಹುದು. ಕಂಪ್ಯೂಟರ್‌ಗೆ ಹೋಗುವ ಮೊದಲಿಗೆ ಇಡೀ ಪಠ್ಯವನ್ನು ಕಂಪ್ಯೂಟರಿಗೆ ಹಾಕಬೇಕು. ಇದು ಕೃತಿ ಮೂಲ ಸಂಶೋಧನೆ ತಾನೇ. ಅನಂತರ ಅದು ಪದ ಪ್ರಯೋಗ ಕೋಶವನ್ನು ಸಿದ್ಧ ಮಾಡಿ ಕೊಡುತ್ತದೆ : ತನ್ನಷ್ಟಕ್ಕೇ ಮಾಡಿ ಕೊಡುತ್ತದೆ ! ಒಂದು ಪದ ಎಷ್ಟು ಕಡೆ, ಯಾವ ಯಾವ ಸಂದರ್ಭದಲ್ಲಿ ಬಂದಿದೆ ಎಂದು ಅದು ಕೊಡುತ್ತಾ ಹೋಗುತ್ತದೆ. ಈ ಪದ ಪ್ರಯೋಗ ಕೋಶವನ್ನು ಮೊದಲು ಮಾಡಿದ ಎಸ್. ಆರ್. ಗುಂಜಾಳ್ ಮುಂತಾದವರಿಗೆ ಗೊತ್ತು ಇದು ಎಷ್ಟು ಕಷ್ಟದ ಕೆಲಸ ಎನ್ನುವುದು. ಕಂಪ್ಯೂಟರಿನಲ್ಲಿ ಬಹಳ ಸುಲಭ. ಒಮ್ಮೆ ಈ ಪದ ಪ್ರಯೋಗಕೋಶ ಸಿದ್ಧವಾಗಿ ಬಿಟ್ಟರೆ–ಅದರಿಂದಾಗುವ ಅನುಕೂಲ ಏನೆಂದರೆ ಯಾರಿಬ್ಬರ ಕೃತಿಗಳನ್ನು ಹೋಲಿಸಿ ನೋಡಬಹುದು. ಕಣವಿಯವರ ಮೇಲೆ ಬೇಂದ್ರೆಯವರ ಪ್ರಭಾವ ಎಷ್ಟು

ಆಗಿದೆ ಎಂಬುದನ್ನು ಬೇಂದ್ರೆಯವರ ಮತ್ತು ಕಣವಿಯವರ ಕೃತಿಗಳನ್ನು Computerಗೆ ಹಾಕಿದಾಗ ತಟ್ಟನೆ ಇದು ಗೊತ್ತಾಗುತ್ತದೆ. ಮಿಲ್ಟನ್ ಮತ್ತು ಶೆಲ್ಲಿ ಇವರಲ್ಲಿ ಒಬ್ಬರ ಪ್ರಭಾವ ಇನ್ನೊಬ್ಬರ ಮೇಲೆ ಹೇಗೆ ಆಗಿದೆ ಎಂದು ನಿಖರವಾಗಿ ಸಿದ್ಧಮಾಡಿ ತೋರಿಸಿ ಕೊಟ್ಟಿದ್ದಾರೆ. ಎಂದು ನಾವು ನೋಡಬಹುದು.

ಕಂಪ್ಯೂಟರ್‌ಅನ್ನು ನಾನು ಮನೆಯಲ್ಲಿ ಇಟ್ಟುಕೊಂಡಿದ್ದೇನೆ. ಇಷ್ಟು ದಿನ ಕಂಪ್ಯೂಟರಿನಲ್ಲಿ ಏನಾದರೂ ಹಾಕಬೇಕಾದರೆ ಅದು ರೋಮನ್ ಲಿಪಿಯಲ್ಲಿ ಬರೆಯಬೇಕಾಗಿತ್ತು. ಈಗ ಸಂಶೋಧನಾ ದೃಷ್ಟಿಯಿಂದ ಹೇಳುತ್ತಿದ್ದೇನೆ, ಕನ್ನಡ ಲಿಪಿಯಲ್ಲೇ ಒಂದು ಕೃತಿಯನ್ನು ಸೇರಿಸಬಹುದು, ಆ ಮೇಲೆ ಅದಕ್ಕೆ ಉತ್ತರವನ್ನು ನಾವು ಕನ್ನಡದಲ್ಲೇ ತೆಗೆದುಕೊಳ್ಳಬಹುದಾದ ಹೊಸ ಶೋಧ ಆಗಿದೆ.

ಕೊನೆಯದಾಗಿ ಹೇಳಬೇಕಾದದ್ದು ಏನೆಂದರೆ–ಕನ್ನಡ ಸಂಶೋಧನೆ ವಿಷಯ ಎಷ್ಟು ಕೆಳ ಮಟ್ಟಕ್ಕೆ ಇಳಿದಿದೆ ಎಂಬುದನ್ನು ನೆನೆದರೆ ಬಹಳ ಬೇಸರವಾಗುತ್ತದೆ. ನಮಗಿಂತ ಹಿರಿಯರಾಗಿದ್ದವರು ನಮಗೆ ಬೈಯುತ್ತಿದ್ದರು–'ಏನು ಈಗಿನ ಕಾಲ' ಎಂದು. ಈಗ ನಾವು ಅದಕ್ಕಿಂತ ಕೆಳಗಿನ ಸ್ತರವನ್ನು ನೋಡುತ್ತಿದ್ದೇವೆ. ಕನ್ನಡ ಸಂಶೋಧನೆಯ ಈಗಿನ ಪರಿಸ್ಥಿತಿಯಲ್ಲಿ ಪಿ.ಹೆಚ್.ಡಿ. ತೆಗೆದುಕೊಳ್ಳುವುದು ಬಹಳ ಸುಲಭ ಎನ್ನುವ ಭಾವನೆ ಬಂದು ಬಿಟ್ಟಿದೆ–ಹಾಗಾಗಬಾರದು. ದಯ ಮಾಡಿ ಮುಂದಿನ ಸಂಶೋಧನೆ ಏನಾದರೊಂದು ಹೊಸತನ್ನು ಕಂಡು ಹಿಡಿಯುವಂತಿರಲಿ. ಪ್ರಯತ್ನ ಮಾಡುವ ಪ್ರಜ್ಞೆಯಿರಲಿ.

(ಧ್ವನಿ ಸಂಗ್ರಹ—ಉಮಾದೇವಿ)

ಅರ್ಥಶಾಸ್ತ್ರದಲ್ಲಿ ಸಂಶೋಧನ ವಿಧಿ ವಿಧಾನ

ಡಾ|| ಅಬ್ದುಲ್ ಅಜೀಜ್

ಸಂಶೋಧನೆ ಎಂದರೆ, ಸತ್ಯಾನ್ವೇಷಣೆ, ಇಲ್ಲಿ ಸತ್ಯ ಎಂದರೆ ಸುಳ್ಳಿಗೆ ವಿರುದ್ಧ ಎನ್ನುವ ಅರ್ಥವಲ್ಲ, ಸತ್ಯ ಎಂದರೆ ವಾಸ್ತವಿಕತೆಯನ್ನು ಅರ್ಥ ಮಾಡಿಕೊಳ್ಳುವುದು. ಒಂದು ದೇಶ ಅಥವಾ ಜಗತ್ತು, ಎಲ್ಲದರಲ್ಲಿಯೂ ಇರುವ ವಾಸ್ತವಿಕತೆಯನ್ನು ಅರ್ಥ ಮಾಡಿಕೊಳ್ಳುವುದು, ಹೀಗೆ ಅರ್ಥೈಸಿಕೊಳ್ಳಬೇಕಾದರೆ ಎರಡು ವಿಷಯಗಳು ಮುಖ್ಯ ಒಂದು–ಅದು ಹೇಗೆ ? ಎರಡು–ಅದು ಏಕೆ ? ಎನ್ನುವ ಪ್ರಶ್ನೆಯನ್ನು ಕೇಳಿಕೊಂಡು ಅದನ್ನು ಅರ್ಥೈಸಿಕೊಳ್ಳುತ್ತೇವೆ ಉದಾ : ಗ್ರಾವಿಟೇಷನ್ ಬಗ್ಗೆ ನ್ಯೂಟನ್ ಹೇಳಿರುವುದು ಸೇಬು ಕೆಳಕ್ಕೆ ಏಕೆ ಬಂತು ? ಹೇಗೆ ಬಂತು ? ಎಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಇದು ಕೇವಲ ವಿಜ್ಞಾನಕ್ಕಲ್ಲದೆ ಇತರ ಎಲ್ಲ ವಿಷಯಗಳಿಗೆ ಅನ್ವಯಿಸುತ್ತದೆ. ಇದನ್ನು ಅರ್ಥ ಮಾಡಿಕೊಂಡಾಗ ಆದರ ವಾಸ್ತವಿಕತೆಯ ಅರಿವು ನಮಗಾಗುತ್ತದೆ, ಇದೇ ಸಂಶೋಧನೆ. ಈ ಸತ್ಯ ತಿಳಿಯಬೇಕಾದರೆ ನಮ್ಮ ಹಿಂದಿನವರು ಡಿಡೆಕ್ಟೀವ್ ಯೋಚನೆ ಮಾಡುತ್ತಿದ್ದರು, ಈಗ ಇಂಡಕ್ಟೀವ್ ಮೆಥೆಡ್ ಉಪಯೋಗಿಸುತ್ತೇವೆ. ಎಂದರೆ ಈ ಡಿಡೆಕ್ಟೀವ್ ಹಾಗೂ ಇಂಡಕ್ಟೀವ್ ಮೆಥೆಡ್‌ಗಳನ್ನು ಉಪಯೋಗಿಸಿ ಕೊಂಡು ವಾಸ್ತವಿಕತೆಯನ್ನು ಅರ್ಥ ಮಾಡಿಕೊಳ್ಳುತ್ತೇವೆ.

ಈಗ ಇದನ್ನು ಅರ್ಥ ಮಾಡಿಕೊಳ್ಳಲು ಯಾವುದೇ ಶಿಸ್ತಿನಲ್ಲಿಯೂ ಒಂದೇ ರೀತಿಯ ಮಾರ್ಗ ಅಥವಾ ಪ್ರೊಸೀಜರ್‌ನ್ನು ಉಪಯೋಗಿಸಲಾಗುತ್ತದೆ. ಸ್ಥೂಲವಾಗಿ ನೋಡುವುದಾದರೆ ಮಾರ್ಗ ಒಂದೇ. ಯಾವುದೇ ವಿಷಯ ಅರ್ಥ ಮಾಡಿಕೊಳ್ಳಲು ಮೊದಲು ಸರಿಯಾದ ಪ್ರಶ್ನೆ ಎತ್ತಬೇಕು. ಆಗ ಅರ್ಥ ಸಂಶೋಧನೆ ಮುಗಿದಂತೆ ; ಅದು ಏಕೆ ? ಹೇಗೆ ಎಂಬುದಕ್ಕೆ ಸಂಬಂಧಿಸಿದ್ದಿರಬೇಕು. ಎರಡನೆಯದು ಆ ಪ್ರಶ್ನೆಗೆ ಅರ್ಥ, ಉತ್ತರ ಪಡೆಯಲು ಒಂದು ಊಹೆಯನ್ನು ಮಾಡಿಕೊಳ್ಳಬೇಕು. ಎಂದರೆ, ಹೈಪಾಥಿಸಿಸ್, ಹೈಪೊ ಎಂದರೆ ಅರ್ಥ ; ಇದು ಒಂದು ಊಹೆ ; ಪ್ರಮೇಯ ಆದನ್ನು ಮುಂದೆ ಸಾಧಿಸಬೇಕು. ಇದಕ್ಕಾಗಿ ಕೆಲವು ಹಂತಗಳನ್ನು ದಾಟಬೇಕಾಗಿದ್ದು ಅವುಗಳೆಂದರೆ ಯಾವುದೇ ವಿಷಯದಲ್ಲಾಗಲಿ ಆದನ್ನು ಕುರಿತು ಪ್ರಯೋಗ ಮಾಡಬೇಕು, ಆನಂತರ ಆದನ್ನು ಅವಲೋಕನ ಮಾಡಬೇಕು. ಆದರ ಮೇಲೆ ಒಂದು

ನಿರ್ಧಾರಕ್ಕೆ ಬರಬೇಕು. ಆ ನಿರ್ಧಾರದ ಆಧಾರದ ಮೇಲೆ ಒಂದು ಸೂತ್ರ ಮೀಮಾಂಸೆಯನ್ನು ಸೃಷ್ಟಿಸಬೇಕು (ಥಿಯರಿ) ಇದು ಸ್ಥೂಲವಾದದ್ದು.

ಅರ್ಥಶಾಸ್ತ್ರದಲ್ಲಿ ಸಂಶೋಧನೆಯನ್ನು ಈ ರೀತಿ ವ್ಯಾಖ್ಯಾನಿಸಬಹುದು. ಅರ್ಥಶಾಸ್ತ್ರದಲ್ಲಿ ಇರುವ ಘಟಕಗಳನ್ನು ನೋಡಬೇಕು. ಆರ್ಥಿಕತೆ ದೊಡ್ಡ ಘಟಕ. ಅದನ್ನು ಬಿಟ್ಟರೆ ಬೇರೆ ಉಳಿದ ಸಣ್ಣ ಘಟಕಗಳು ಇವೆ ; ಉತ್ಪಾದನೆ ಮಾಡುವಂತಹ ಘಟಕ ಇರಬಹುದು ಅಥವಾ ಉತ್ಪಾದನೆಗೆ ಸಹಾಯ ಮಾಡುವ ಶ್ರಮ ಒಂದು ಘಟಕ ಆಗಬಹುದು. ಬಂಡವಾಳ, ಭೂಮಿ ಇವೆಲ್ಲ ಒಂದೊಂದು ಘಟಕಗಳಾಗಬಹುದು. ಇವೆಲ್ಲ ಆದ ಮೇಲೆ ವಸ್ತುಗಳನ್ನು ಅನುಭವಿಸುವ ಅನುಭೋಗಿಗಳು ಒಂದು ಘಟಕವಾಗಬಹುದು. ಸಾಮಾನ್ಯವಾಗಿ ಈ ಅನೇಕ ಘಟಕಗಳ ನಡವಳಿಕೆಯನ್ನು ಅರ್ಥ ಮಾಡಿಕೊಳ್ಳುವುದು ನಮ್ಮ ಗುರಿ. ಉತ್ಪಾದನಾ ಘಟಕದಲ್ಲಿ ಉತ್ಪಾದನಾ ಸಂಘಟನಾಕಾರಿ ಯಾರು? ಆ ವ್ಯಕ್ತಿ ಯಾವ ರೀತಿ ಫ್ಯಾಕ್ಟರ್ಸ್ ಆಫ್ ಪ್ರೊಡಕ್ಷನ್ ಅನ್ನು ಸಂಘಟಿಸಿ ಉತ್ಪಾದನೆ ಕೈಗೊಳ್ಳುತ್ತಾನೆ ? ಅನುಭೋಗಿ ತನ್ನ ಆದಾಯವನ್ನು ಬೇರೆ ಬೇರೆ ವಸ್ತುಗಳ ಮೇಲೆ ವಿನಿಯೋಗಿಸಿ ಹೇಗೆ ತೃಪ್ತಿ ಪಡೆಯುತ್ತಾನೆ ? ಎಂಬುದನ್ನು ಅರ್ಥಶಾಸ್ತ್ರದಲ್ಲಿ ನೋಡುತ್ತೇವೆ. ಇದರ ಬಗ್ಗೆ ನಾವು ಏನು ಪ್ರಶ್ನೆ ಕೇಳುತ್ತೇವೆ, ಅನುಭೋಗಿ ಯಾವ ರೀತಿ ನಡೆದುಕೊಳ್ಳುತ್ತಾನೆ-ಯಾವ ಪರಿಸ್ಥಿತಿಯಲ್ಲಿಯಾದರೂ ಆಗಬಹುದು. ಉದಾಹರಣೆಗೆ ಬೆಲೆ ಏರಿಕೆಯಾದಾಗ ಯಾವ ರೀತಿ ನಡೆದುಕೊಳ್ಳುತ್ತಾನೆ. ಬೆಲೆ ಇಳಿಕೆಯಾದಾಗ ಯಾವ ರೀತಿ ನಡೆದುಕೊಳ್ಳುತ್ತಾನೆ-ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಆ ರೀತಿ ನಡೆದುಕೊಂಡಾಗ ಬೆಲೆ ಏರಿದರೆ ಅಥವಾ ಇಳಿದರೆ ಏಕೆ ಆ ರೀತಿ ನಡೆದುಕೊಂಡ ? ಎಂದು ಈ ಎರಡು ರೀತಿಯನ್ನೂ ಗಮನಿಸಬೇಕು.

ನಮ್ಮ ಪ್ರಕಾರ ಸಂಶೋಧನೆಯು ಒಂದು ರೀತಿಯ ಕಾರ್ಯಗತಿ ಅಥವಾ ಪ್ರೊಸೆಸ್. ಈ ಕಾರ್ಯಗತಿಯಲ್ಲಿ ಸಂಶೋಧಕ ಆರ್ಥಿಕ ಘಟಕಗಳ ನಡವಳಿಕೆಯ ಬಗ್ಗೆ ಮಾಹಿತಿ ಸಂಗ್ರಹಿಸಿ ಆ ಮಾಹಿತಿಯನ್ನು ನಂತರ ವಿಶ್ಲೇಷಿಸಿ ಅದರ ಆಧಾರದ ಮೇಲೆ ಕೆಲವು ಸೂತ್ರಗಳನ್ನು ರೂಪಿಸಿ, ಆ ಸೂತ್ರದ ಆಧಾರದ ಮೇಲೆ ಭವಿಷ್ಯತ್ತಿನಲ್ಲಿ ಈ ಘಟಕ ಹೇಗೆ ನಡೆದುಕೊಂಡು ಹೋಗಬಹುದು ಎಂಬುದನ್ನು ಊಹೆ ಮಾಡಿ ಹೇಳುತ್ತಾನೆ ಸಾಮಾನ್ಯವಾಗಿ ಈ ರೀತಿ ಊಹೆ ಮಾಡಿ ಹೇಳುವುದರಿಂದ ಅರ್ಥಶಾಸ್ತ್ರಜ್ಞನನ್ನು 'ಕಣಿ' ಹೇಳುವವನು ಎಂದು ಕರೆಯುತ್ತಾರೆ, ಅರ್ಥಶಾಸ್ತ್ರಜ್ಞರು. ಭಾರತದಲ್ಲಿ ಹಿಂದಿನ 5 ವರ್ಷಗಳಲ್ಲಿ ಭಾರತದ ಆರ್ಥಿಕತೆ ಇದೇ ರೀತಿ ಮುಂದುವರಿದುಕೊಂಡು ಹೋಗಿದೆ, ಮುಂದಿನ 5 ವರ್ಷದಲ್ಲಿ ಯಾವ ರೀತಿ ಮುಂದುವರಿದುಕೊಂಡು ಹೋಗುತ್ತದೆ ಎಂಬುದನ್ನು ಹಿಂದಿನ ಆ ನಡವಳಿಕೆಯ ಆಧಾರದ ಮೇಲೆ ಪ್ರಾಜೆಕ್ಟ್ ಮಾಡುತ್ತಾರೆ. ಇದರಿಂದ ಮುಂದೆ ಏನು ನಡೆಯುತ್ತದೆ ಎಂದು ಹೇಳಬಹುದು.

ಇದೆಲ್ಲವರ ಆಧಾರದ ಮೇಲೆ ಅಂತಿಮ ನಿರ್ಣಯ ಮಾಡಬಹುದು, ಇದು ಬಹಳ ಮುಖ್ಯವಾದ ಹಂತ. ಉದಾ : ಸೇಬಿನ ಬೆಲೆ ೨೦ ರೂ.ಗಳು ಆದಾಗ ಜನ ಏನು ಮಾಡುತ್ತಾರೆ ? ನಾಳೆ ಅದರ ಬೆಲೆ ೨೫ ರೂ. ಆದಾಗ ಎಷ್ಟು ಕೊಂಡು ಕೊಳ್ಳುತ್ತಾರೆ ? ಎಂಬುದನ್ನು ಒಂದು ಕಡೆ ಹಾಕಿಕೊಂಡು ಮತ್ತೊಂದು ಕಡೆ ಎಷ್ಟು ಕೊಂಡು ಕೊಳ್ಳುತ್ತಾರೆ ? ಎಂಬುದನ್ನು ಹಾಕಿಕೊಂಡು ನೋಡಿದಾಗ ಅದರಲ್ಲಿನ ಟ್ರೆಂಡ್ ನಮಗೆ ಕಂಡು ಬರುತ್ತದೆ. ಆ ಟ್ರೆಂಡ್ ಏನೆಂದರೆ ಬೆಲೆ ಹೆಚ್ಚಾದಂತೆಲ್ಲಾ ಕೊಂಡು ಕೊಳ್ಳುವ ಪ್ರಮಾಣ ಕಡಿಮೆಯಾಗುತ್ತದೆ. ಮಾಹಿತಿಯನ್ನು ವಿಶ್ಲೇಷಿಸಿ ಬರುವ ಟ್ರೆಂಡ್‌ನ್ನು ನೋಡಿ ಸೂತ್ರವನ್ನು ರೂಪಿಸುತ್ತೇವೆ. ಎಂದರೆ ಜನರಲೈಸ್ ಮಾಡುತ್ತೇವೆ. ಬೆಲೆಗಳಲ್ಲಿ ಬದಲಾವಣೆ ಉಂಟಾದಂತೆಲ್ಲಾ ಬೇಡಿಕೆಯಲ್ಲೂ ಬದಲಾವಣೆ ಆಗುತ್ತದೆ. ವ್ಯತಿರಿಕ್ತವಾಗಿ ಬದಲಾವಣೆ ಕಂಡು ಬರುತ್ತದೆ. ಬೆಲೆ ಕಡಿಮೆಯಾದರೆ ಬೇಡಿಕೆ ಹೆಚ್ಚುತ್ತದೆ ; ಬೆಲೆ ಹೆಚ್ಚಾದರೆ ಬೇಡಿಕೆ ಇನ್ನೂ ಹೆಚ್ಚಾಗುತ್ತದೆ. ಇದು ಈ ರೀತಿಯ ಸೂತ್ರ. 25 ರೂ. ಬೆಲೆ ಇದ್ದಾಗ ಇಷ್ಟು ಇದ್ದ ಬೇಡಿಕೆಯು 40 ರೂ. ಬೆಲೆ ಆದಾಗ ಎಷ್ಟಾಗುವುದು ? ಅನ್ನುವ ಊಹೆಯನ್ನು ಮಾಡಬೇಕಾಗುತ್ತದೆ. ಅದು ಭವಿಷ್ಯ ಹೇಳುವಂತದ್ದು. ಅದನ್ನು ಹೇಗೆ ಮಾಡುತ್ತೇವೆ ? ಅದಕ್ಕೆ ಸ್ಟಾಟಿಸ್ಟಿಕಲ್ ಟೆಕ್ನಿಕ್ಸ್ ಉಪಯೋಗಿಸುತ್ತೇವೆ. ಅಂದರೆ ಅಂಕಿ ಅಂಶಗಳ ಆಧಾರದ ಮೇಲೆ ಪ್ರಾಜೆಕ್ಟ್ ಮಾಡುತ್ತೇವೆ. ಎಕ್ಸಟ್ರಾ ಪೊಲೈಟ್ ಮಾಡಿ ಹಿಂದೆ ಯಾವ ಟ್ರೆಂಡ್ ಇತ್ತು ಎಂದು ಅದನ್ನು ಮುಂದೆ ತೆಗೆದುಕೊಂಡು ಹೋಗಲು ಲೆಕ್ಕಾಚಾರ ಮಾಡುತ್ತೇವೆ. ಅದನ್ನು ಇವತ್ತು ಕಂಪ್ಯೂಟರ್ ಮೂಲಕ ಮಾಡುತ್ತೇವೆ.

ಕಂಪ್ಯೂಟರ್‌ನಿಂದ ಬಹಳ ಅನುಕೂಲವಾಗಿದೆ. ಅಂದರೆ ರೀಸರ್ಚ್ ಮೆಥಡ್ ಬಹಳ ಮುಂದುವರಿದಿದೆ. ಕಂಪ್ಯೂಟರ್ ಡೇಟಾಗಳನ್ನು ತೆಗೆದುಕೊಂಡು ನಾವು ಇವತ್ತು ಕಾಂಪ್ಲಿಕೇಟೆಡ್ ಅನಾಲಿಸಸ್‌ಗಳನ್ನು ಸುಲಭವಾಗಿ ಮಾಡಬಹುದಾಗಿದೆ. ಉದಾ : ಅನುಭೋಗಿ ಬೀಡಿ, ಸಿಗರೇಟ್‌ಗಳನ್ನು ಕೊಳ್ಳುತ್ತಾನೆ. ನಮ್ಮ ಜನರಿಗೂ ತಿಳಿದಿದೆ, ಇವನ್ನು ಸೇದಿದರೆ ರೋಗವು ಬರುವುದೆಂದು. ಹೀಗೆ ಗೊತ್ತಾದಾಗ ನಾವು ಹಣಕಾಸಿನ ಮಂತ್ರಿಗಳಿಗೆ ಏನು ಸಲಹೆ ಕೊಡಬಹುದು, 'ನೀವು ಬೀಡಿ–ಸಿಗರೇಟು ಬೆಲೆ ಹೆಚ್ಚಿಸಿ, ಅದರ ಮೇಲೆ ತೆರಿಗೆಯನ್ನು ಹೆಚ್ಚು ಮಾಡಬೇಕು' ಎಂದು ಹೇಳಬಹುದು, ಅಥವಾ ಹಾಲು ಕುಡಿದರೆ ಎಲ್ಲರ ಆರೋಗ್ಯ ಚೆನ್ನಾಗಿ ಆಗುತ್ತದೆಂದು ತಿಳಿದಾಗ ಅದಕ್ಕೆ ನಮ್ಮ ಈ ಸೂತ್ರದ ಆಧಾರದ ಮೇಲೆ ನಾವು ಏನು ಹೇಳುತ್ತೇವೆ. 'ಅದರ ಬೆಲೆ ಕಡಿಮೆ ಮಾಡಿ, ಸಬ್ಸಿಡಿ ಕೊಟ್ಟು ಬೆಲೆ ಕಡಿಮೆ ಮಾಡಿ, ಜನ ಹೆಚ್ಚಾಗಿ ಹಾಲು ಕುಡಿಯಲಿ' ಎಂದು ಹೇಳುತ್ತೇವೆ. ಇದು ಧೋರಣೆ ರೂಪಿಸುವ ರೀತಿ. ಇದು ಬಹಳ ಮುಖ್ಯ. ಧೋರಣೆಗಳನ್ನು ಸಂಶೋಧನಾಧಾರಿತ ಮಾಹಿತಿಯ ಮೇಲೆ ರೂಪಿಸುವುದು ಬಹಳ ಮುಖ್ಯ.

ಸಂಶೋಧನೆ ಮಾಡಬೇಕಾದರೆ ಮೊದಲೇ ಹೇಳಿದಂತೆ ಪ್ರೊಸೀಜರ್ ಏನು ಮಾಡುತ್ತೇವೆ? ನಾವು ಅರ್ಥಶಾಸ್ತ್ರದ ಪ್ರೊಸೀಜರ್ ತೆಗೆದುಕೊಳ್ಳುತ್ತೇವೊ ಅಥವಾ ಬೇರೆ ಯಾವುದಾದರೂ ತೆಗೆದುಕೊಳ್ಳುತ್ತೇವೊ ಎಂಬುದು ಪ್ರಶ್ನೆ. ನಮ್ಮ ಅನುಭವದಲ್ಲಿ ಅರ್ಥಶಾಸ್ತ್ರ ಪ್ರೊಸೀಜರ್ ಬಿಟ್ಟರೆ ಬೇರೆ ಏನೂ ಕಂಡು ಬರಲಿಲ್ಲ. ಯಾಕೆಂದರೆ ನಾವು ಯಾವುದೇ ಒಂದು ವಿಷಯವನ್ನು ತೆಗೆದುಕೊಂಡಾಗ ಮೊತ್ತ ಮೊದಲಿಗೆ ಅದರ ಬಗ್ಗೆ ಒಂದು ಪ್ರಮೇಯ ಅಥವಾ ಹೈಪಾಥಿಸಿಸ್‌ನ್ನು ರೂಪಿಸಿಕೊಳ್ಳುತ್ತೇವೆ. ಇಲ್ಲಿ ತನಕ ಏನು ಕೆಲಸ ಆಗಿದೆ, ಆ ವಿಷಯಕ್ಕೆ ಸಂಬಂಧಪಟ್ಟಂತೆ ಎಷ್ಟು ಸಾಹಿತ್ಯ ಇದೆ, ಅದನ್ನು ಪರಾಮರ್ಶೆ ಮಾಡಿ ಯಾವ ರೀತಿ ಹೇಳಿದ್ದಾರೆ, ಏನನ್ನು ಹೇಳಲಿಲ್ಲ ಎಂಬುದನ್ನು; ಹಾಗೂ ಆ ಪ್ರಶ್ನೆಗೆ ಸಂಬಂಧಪಟ್ಟ ಉತ್ತರ ಅಲ್ಲಿದೆಯೆ, ಇಲ್ಲವೇ ಎಂದು ಪರಿಶೀಲಿಸಿ ಇದ್ದರೆ ಆ ಪ್ರಶ್ನೆಯನ್ನು ಹಾಕಿಕೊಳ್ಳುತ್ತೇವೆ. ಇದಕ್ಕೆ ತಕ್ಕನಾದ ಒಂದು ಹೈಪಾಥಿಸಿಸ್ ಬೇಕಾಗುತ್ತದೆ. ಇದನ್ನು ಅರ್ಥಶಾಸ್ತ್ರದಲ್ಲಿ ಹೇಳುವುದು. "ಇಟ್ಸ್ ಎ ಸ್ಟೇಟ್‌ಮೆಂಟ್ ಆಫ್ ರಿಲೇಷನ್ ಷಿಪ್ ಬಿಟ್ವೀನ್ ಟೂ ವೇರಿಯಬಲ್ಸ್".

ಅನುಭೋಗಿಯ ನಡತೆಯ ಬಗ್ಗೆ ನಾವು ಅಭ್ಯಸಿಸಿ ಒಂದು ಸೂತ್ರವನ್ನು ತಯಾರು ಮಾಡುತ್ತೇವೆ. "ಬೆಲೆ ಏರಿದಂತೆ ಬೇಡಿಕೆ ಕಡಿಮೆಯಾಗುತ್ತದೆ", ಇದು ಒಂದು ಸೂತ್ರ, ಇದೇ ಸೂತ್ರ ಅಥವಾ ಸ್ಟೇಟ್‌ಮೆಂಟ್ ಅನ್ನು ನಾವು ಹೈಪಾಥಿಸೀಸ್ ಎಂದು ಕರೆಯುತ್ತೇವೆ. ಈ ಸೂತ್ರ ಆಗಿದೆ, ಆದರೆ ಈ ಸೂತ್ರವನ್ನು ಇಂಗ್ಲೇಂಡಿನ 'ಮಾರ್ಷಲ್' ಎಂಬುವರು ಮೊಟ್ಟ ಮೊದಲಿಗೆ ಹೇಳಿದರು. ನಂತರ ಹಿಕ್ಸ್, ಹ್ಯಾಮಿಲ್ಟನ್, ಮೊದಲಾದವರು ಹೇಳಿದ್ದಾರೆ. ಆದರೆ ನಮ್ಮ ದೇಶದಲ್ಲಿ ಹಾಗಿಲ್ಲವಲ್ಲ! ಅಲ್ಲಿ ಈ ರೀತಿ ಆದರೆ ಇಲ್ಲೂ ಅದೇ ರೀತಿ ಉಂಟಾಗುತ್ತದೆ ಎಂದು ನಮಗೆ ಯಾವುದೇ ಖಾತ್ರಿ ಇಲ್ಲ. ಆದ್ದರಿಂದ ನಾವು ಆಗ ಒಂದು ಹೈಪಾಥಿಸಿಸ್ ಗನುನಿಸುತ್ತೇವೆ. ಆದರಂತೆ ಎರಡು ವೇರಿಯಬಲ್‌ಗಳು—ವೇರಿಯಬಲ್ ಅಂದರೆ ಏರಿಳಿತಕ್ಕೊಳಗಾಗುವುದು—ಒಂದು ಬೆಲೆ ಏರಬಹುದು ಅಥವಾ ಇಳಿಯಬಹುದು. ಹಾಗೆಯೇ ಇನ್ನೊಂದು ಬೇಡಿಕೆ ಇಳಿಯಬಹುದು. ಇವುಗಳಿಗಿರುವ ಸಂಬಂಧ ಯಾವ ರೀತಿ ಇದೆ? ಈ ಸಂಬಂಧವನ್ನು ಸೂಚಿಸುವಂತಹ ಸ್ಟೇಟ್‌ಮೆಂಟ್ಸ್ ಏನಿದೆ? ಎಂಬುದನ್ನು ನಾವು ಮಾಹಿತಿಯನ್ನು ಸಂಗ್ರಹಿಸಿ ಪರಿಶೀಲಿಸುತ್ತೇವೆ. ಇಲ್ಲಿ ಯಾವ ರೀತಿಯ ಸಂಬಂಧ ಇದೆ ಎಂದರೆ ಒಂದು ನೇರವಾದ ಸಂಬಂಧ. ಬೆಲೆ ಏರಿದರೆ ಬೇಡಿಕೆಯೂ ಏರುತ್ತದೆ. ಇನ್ನೊಂದು ವ್ಯತಿರಿಕ್ತವಾದಂತದ್ದು, ಬೆಲೆ ಏರಿದಾಗ ಬೇಡಿಕೆ ಇಳಿಯುವುದು, ಹೀಗೆ ಮಾಡಿಕೊಂಡಾಗ ನಾವು ವೆರಿಫೈಯ್ ಮಾಡಬಹುದು. ಈ ವೆರಿಫೈ ಮಾಡಬೇಕಾದರೆ ಹೈಪಾಥಿಸಿಸ್ ಮಾಡಿ ಅದರ ಮೇಲೆ ಪ್ರಯೋಗ ಮಾಡಬೇಕು. ವಿಜ್ಞಾನದಲ್ಲಿ ಹೇಗೆ ಪ್ರಯೋಗ ಮಾಡುತ್ತೇವೋ ಹಾಗೆ ಅರ್ಥಶಾಸ್ತ್ರದಲ್ಲಿ ಪ್ರತಿಯೊಬ್ಬ

ಅನುಭೋಗಿಯನ್ನು ಮಾರುಕಟ್ಟೆಯಲ್ಲಿ ಹಿಡಿದು ಪ್ರಯೋಗ ನಡೆಸಲು ಸಾಧ್ಯವಿಲ್ಲ. ಆದರೂ ಅರ್ಥಶಾಸ್ತ್ರಜ್ಞರು ಪ್ರಯೋಗ ಮಾಡುತ್ತಾರೆ, ಅವರದ್ದೇ ಆದ ಪ್ರಯೋಗಶಾಲೆ ಹೊಂದಿರುತ್ತಾರೆ. ಹಾಗೆ ನೋಡಿದರೆ ಎಲ್ಲ ಸಮಾಜ ವಿಜ್ಞಾನಿಗಳೂ ಪ್ರಯೋಗಾಲಯವನ್ನು ಹೊಂದಿರುತ್ತವೆ. ಆರ್ಥಿಕತೆಯೇ ನಮ್ಮ ಪ್ರಯೋಗಾಲಯ. ನಮ್ಮಲ್ಲಿ ಮಾರುಕಟ್ಟೆ ಇದೆ. ಅದೇ ನಮ್ಮ ಪ್ರಯೋಗಾಲಯ. ಈ ಮಾರುಕಟ್ಟೆಯಲ್ಲಿ ನಾವು ಹೋಗಿ ಈ ಕನ್ಸ್ಯೂಮರ್ ಗ್ರಾಹಕ ಹೇಗೆ ? ಅವನು ಯಾವ ರೀತಿ ನಡೆದು ಕೊಳ್ಳುತ್ತಾನೆ ? ಬೆಲೆ ಹೆಚ್ಚಾದಾಗ ಏನು ಮಾಡುತ್ತಾನೆ ? ಬೆಲೆ ಕಡಿಮೆಯಾದಾಗ ಏನು ಮಾಡುತ್ತಾನೆ ? ಎಂದು ನಾವು ಮಾಹಿತಿ ಸಂಗ್ರಹ ಮಾಡುತ್ತೇವೆ. ೨೦ ರೂ. ಬೆಲೆ ಇದ್ದಾಗ ಎಷ್ಟು ಕೊಂಡುಕೊಳ್ಳಲಾಯಿತು. ರೂ. ೨೫ ಆದಾಗ ಎಷ್ಟು ಕಡಿಮೆಯಾಯಿತು, ಇದನ್ನು ನಾವು ಗುರುತು ಹಾಕಿ ಕೊಳ್ಳುತ್ತೇವೆ. ಇದನ್ನೇ ನಾವು ಡೇಟಾ ಎಂದು ಹೇಳುತ್ತೇವೆ.

ಡೇಟಾದಲ್ಲಿ ಎರಡು ವಿಧ, ಒಂದು ಸೆಕೆಂಡರಿ ಡೇಟಾ. ಈ ಸೆಕೆಂಡರಿ ಡೇಟಾ ಆಗಲೇ ಆಗಿರುತ್ತದೆ. ಅದನ್ನು ತೆಗೆದುಕೊಂಡು ನಾವು ವಿಶ್ಲೇಷಣೆ ಮಾಡುತ್ತೇವೆ. ಮತ್ತೊಂದು ಪ್ರೈಮರಿ ಡೇಟಾ, ನಾವು ಖುದ್ದು ಮಾಹಿತಿಯನ್ನು ಸಂಗ್ರಹಿಸುವುದು. ಜನರನ್ನು ಇಂಟರ್‌ವ್ಯೂ ಮಾಡುವುದರ ಮೂಲಕವಾಗಲಿ, ಅವಲೋಕನ ಮಾಡುವುದರ ಮೂಲಕವಾಗಲಿ ಮಾಹಿತಿ ಸಂಗ್ರಹಿಸುತ್ತೇವೆ. ಈ ರೀತಿ ನಾವು ಡೇಟಾವನ್ನು ಸಂಗ್ರಹಿಸಿದಾಗ ನಮಗೆ ಅಬ್ಸರ್ವ್ ಮಾಡಲು ಅವಕಾಶ ದೊರೆಯುತ್ತದೆ. ಈ ಉದ್ದೇಶಕ್ಕಾಗಿ ಪ್ರತಿ ಸಾರಿ ಬೆಲೆಯನ್ನು ಸ್ವಲ್ಪ ಏರಿಸಿ ಇಳಿಸಿ ಆಗ ಜನ ಏನು ಮಾಡುತ್ತಾರೆ? ಹೇಗೆ ವರ್ತಿಸುತ್ತಾರೆ ? ಎಂಬುದನ್ನು ನೋಡಲು ಸಾಧ್ಯವಿಲ್ಲ. ಬೆಲೆಗಳು ತಮ್ಮಷ್ಟಕ್ಕೆ ತಾವೆ ಏರಿಕೆ ಇಳಿಕೆ ಆಗುತ್ತವೆ. ನಾವು ಅದನ್ನು ಕ್ಯಾಪ್ಚರ್ ಮಾಡುತ್ತೇವೆ. ಇದಕ್ಕೆ ಒಂದು ತಿಂಗಳಾಗಬಹುದು ಅಥವ 10 ವರ್ಷದ್ದಾಗಬಹುದು, ಆಗ ಬೆಲೆಗಳು ಹೇಗೆ ಏರಿಳಿಕೆ ಆಗಿವೆ ಎಂಬುದನ್ನು ಹಾಗೂ ಈ ಅವಧಿಯಲ್ಲಿ ಕೊಳ್ಳುವಿಕೆ ಪ್ರಮಾಣ ಎಷ್ಟಾಯಿತು ಎಂಬುದನ್ನು ನೋಡಿಕೊಳ್ಳುತ್ತೇವೆ.

ಈ ಉದ್ದೇಶಕ್ಕಾಗಿ ಮಾರುಕಟ್ಟೆಯನ್ನು ಕ್ಯಾಪ್ಚರ್ ಮಾಡಿ ಸ್ಟ್ಯಾಟಿಸ್ಟಿಕಲ್ ಟೆಕ್ನಿಕ್ ಉಪಯೋಗಿಸಿ ಕೋ–ರಿಲೇಷನ್ ಅಂದರೆ, ಸಹ–ಸಂಬಂಧ ಪ್ರಮೇಯವನ್ನು ಅನುಸರಿಸುತ್ತೇವೆ. ಬೆಲೆಗಳ ಏರುವಿಕೆಗೂ ಬೇಡಿಕೆ ಬದಲಾವಣೆ ಆಗುವಿಕೆಗೂ ಏನಾದರೂ ನೇರವಾದ ಸಂಬಂಧ ಇದೆಯೇ ಎಂಬುದನ್ನು ಕಂಡು ಕೊಳ್ಳುವುದೇ ಕೋ–ರಿಲೇಷನ್. ಕೆಲವೊಮ್ಮೆ ಅಸೋಷಿಯೇಷನ್ ರಿಲೇಷನ್ ಕೂಡ ಇರಬಹುದು. ಬೆಲೆಗಳು ಇಳಿದಾಗ ಬೇಡಿಕೆ ಕಡಿಮೆ ಇರಬಹುದು. ಆದರೆ ಬೇಡಿಕೆ ಕಡಿಮೆಯಾಗಲು ಬೆಲೆಗಳು ಮಾತ್ರ ಕಾರಣವೇ ? ಎಂಬುದನ್ನು ನೋಡಿದಾಗ ಬೆಲೆಗಳು ಮಾತ್ರ ಕಾರಣ ಎಂದು

ಗೊತ್ತಾದಾಗ ನಮಗೆ ಧೋರಣೆ ರೂಪಿಸಲು ಸುಲಭವಾಗುತ್ತದೆ. ಹಾಲಿನ ಬೆಲೆ ಕಡಿಮೆಯಾದರೆ ಹೆಚ್ಚು ಮಂದಿ ಅದನ್ನು ಕುಡಿಯುತ್ತಾರೆ. ಅದರ ಆಧಾರದ ಮೇಲೆ ನಾವು ಒಂದು ಧೋರಣೆ ರೂಪಿಸಿ ಸರ್ಕಾರಕ್ಕೆ ಕೊಡಬಹುದು. ಆದರೆ ಹಾಲಿನ ಬೆಲೆ ಒಂದೇ ಅಲ್ಲದೆ ಬೇರೆ ಬೇರೆ ಕಾರಣಗಳಿಂದ ಅದು ಬದಲಾವಣೆ ಆದಾಗ ನಮಗೆ ಧೋರಣೆ ರೂಪಿಸಲು ಸ್ವಲ್ಪ ಕಷ್ಟವಾಗುತ್ತದೆ, ಉದಾ : ಕೆಲವರಿಗೆ ಹಾಲನ್ನು ಕಂಡರೆ ಇಷ್ಟವಿರುವುದಿಲ್ಲ, ವಾಕರಿಕೆ ಬರುತ್ತದೆ, (ಅಂದರೆ ಟೇಸ್ಟ್ ;) ಕೆಲವರು ಹಾಲು ಕುಡಿಯುವುದು ಫ್ಯಾಷನ್ ಅಂತ ತಿಳಿದಿರುತ್ತಾರೆ ; ಅಥವಾ ಆದಾಯ ಕಡಿಮೆ ಇರಬಹುದು. ಅದರ ಬೆಲೆ ಎಷ್ಟು ಕಡಿಮೆಯಾದರೂ ಅದನ್ನು ಕೊಂಡುಕೊಳ್ಳುವ ಶಕ್ತಿ ಇಲ್ಲದಿರುವುದು ; ಅಥವಾ ಹಾಲಿನ ಬೆಲೆಗಿಂತ ಎಳನೀರು ಬೆಲೆ ಕಡಿಮೆಯಾದಾಗ ಅದನ್ನು ಕುಡಿಯಬಹುದು ಹೀಗೆ ಅನೇಕ ಕಾರಣಗಳಿವೆ. ಈ ತರಹದ ಕಾರಣಗಳಿದ್ದಾಗ ನಾವು ಅದನ್ನೆಲ್ಲಾ ಗುರುತು ಹಾಕಿಕೊಳ್ಳುತ್ತೇವೆ. ಇವನ್ನೆಲ್ಲ ಇಂಡಿಪೆಂಡೆಂಟ್ ವೇರಿಯಬಲ್ ಎಂದು ಕರೆಯುತ್ತೇವೆ. ಬೇಡಿಕೆಯನ್ನು ನಿರ್ಧರಿಸುವ ವೇರಿಯಬಲ್ಸ್ ಯಾವುದು? ಬೆಲೆ, ಆದಾಯ, ಟೇಸ್ಟ್, ಫ್ಯಾಷನ್ ಇತ್ಯಾದಿ ಇವುಗಳನ್ನು ಒಂದು ಕಡೆ ಹಾಕಿ, ಬೇಡಿಕೆಯನ್ನು ಒಂದು ಕಡೆ ಹಾಕಿ ಹಾಲನ್ನು ಕುಡಿದ ಪ್ರಮಾಣ ಪ್ರತಿ ವರ್ಷಕ್ಕೆ ಎಷ್ಟಿದೆ ? ಅನಂತರ ಹಾಲಿನ ಬೆಲೆ ಎಷ್ಟು ಏರಿದೆ ಅಥವಾ ಇಳಿದಿದೆ ? ಅದರ ಜೊತೆಗೆ ಜನರ ನಿಜಾದಾಯ-ಅಂದರೆ ನನ್ನ ಆದಾಯ ಈ ಹೊತ್ತು 100 ರೂ. ಇರಬಹುದು. ಅದಕ್ಕೆ ನಾನು 100 ಬಾಳೆ ಹಣ್ಣನ್ನು ತಿನ್ನಬಹುದು. ನಾಳೆ ನನ್ನ ಆದಾಯ 200 ಆಗುತ್ತದೆ ಎಂದುಕೊಂಡರೆ ಅವೊತ್ತು ಬಾಳೆ ಹಣ್ಣಿನ ಬೆಲೆ 2 ರೂ. ಆಗಿರುತ್ತದೆ. ಆಗ ನಾನು 100 ಬಾಳೆ ಹಣ್ಣು ತಿನ್ನುತ್ತೇನೆ ಅಂದರೆ ನನ್ನ ನಿಜ ಆದಾಯ (ರಿಯಲ್ ಇನ್‌ಕಮ್) ಹಣದ ರೂಪದ ಆದಾಯ ಹೆಚ್ಚಾಗಿದ್ದರೂ ನಮ್ಮ ನಿಜ ಆದಾಯ ಅಷ್ಟೆ ಇರುತ್ತದೆ. ನಿಜ ಆದಾಯವನ್ನು ತೆಗೆದುಕೊಂಡು ಅದರ ವೇರಿಯಬಲ್ ಏನಿದೆ, ಅಂದರೆ ಪ್ರತಿ ವರ್ಷಕ್ಕೆ ಎಷ್ಟು ಹೆಚ್ಚಿದೆ ? ತಲಾ ನಿಜ ಆದಾಯ ಯಾವ ರೀತಿ ಬದಲಾವಣೆ ಆಗಿದೆ ಎಂದು ನೋಡುತ್ತೇವೆ.

ಇಷ್ಟೆಲ್ಲ ಆದ ಮೇಲೆ ರಿಗ್ರೇಶನ್‌ನ್ನು ಕಂಪ್ಯೂಟರ್‌ನಲ್ಲಿ ಹಾಕಿದರೆ ಒಂದು ಈಕ್ವೇಶನ್ ಬರುತ್ತದೆ. ಈ ಈಕ್ವೇಶನ್ $Y = X_1 + X_2 + X_3 + 100$. ಏನು ಹೇಳುತ್ತದೆ ಅಂದರೆ ಬೇಡಿಕೆಯು ಶೇಕಡ 1 ರಷ್ಟು ಹೆಚ್ಚಾದಾಗ ಇದಕ್ಕೆ ಕಾರಣವಾದ ಅಂಶಗಳು X_1 = ಬೆಲೆ, X_2 = ನಿಜ ತಲಾ ಆದಾಯ, X_3 = ಫ್ಯಾಷನ್, ಟೇಸ್ಟ್ ಇತ್ಯಾದಿ, ಹೀಗೆ 100 ಅನ್ನು ಇಟ್ಟುಕೊಂಡಾಗ X_1 ಒಂದು ಕೋ-ಎಫಿಷಿಯಂಟ್‌ಗೆ ಬರುತ್ತದೆ. ಬೆಲೆಯಲ್ಲಿ ಬದಲಾವಣೆ ಉಂಟಾದಾಗ ಬೇಡಿಕೆಯಲ್ಲಿ ಒಂದಷ್ಟು ಬದಲಾವಣೆ ಉಂಟಾಗುತ್ತದೆ. ಎಷ್ಟರ ಮಟ್ಟಿಗೆ ಎಂದರೆ ಬೆಲೆಗಳು ಶೇ. 1ರಷ್ಟು ಹೆಚ್ಚಾದಾಗ ಬೇಡಿಕೆಯಲ್ಲಿ ಶೇ. 0.5ರಷ್ಟು ಬದಲಾಗುತ್ತದೆ. ವೇರಿಯಬಲ್‌ಗಳಾದ ನಿಜ

ತಲಾ ಆದಾಯ, ಟೇಸ್ಟ್, ಫ್ಯಾಷನ್ ಅಥವಾ ಅದಕ್ಕೆ ಪರ್ಯಾಯ ವಸ್ತುಗಳು ಉದಾ: ಹಾಲಿಗೆ ಬದಲಾಗಿ ಶರಬತ್ತು, ಎಳನೀರು, ಸಕ್ಕರೆ ಇತ್ಯಾದಿ. ಸಕ್ಕರೆ ಬೆಲೆ ಹೆಚ್ಚಾಗಿ ಹಾಲಿನ ಬೆಲೆ ಕಡಿಮೆ ಆದರೂ ಜನ ಹಾಲನ್ನು ಕುಡಿಯುತ್ತಾರೆ. ಆಗ ಆ ಬೇಡಿಕೆ ಹೆಚ್ಚಾಗುವುದಿಲ್ಲ. ಇದನ್ನೆಲ್ಲಾ ನಾವು ಕ್ಯಾಪ್ಚರ್ ಮಾಡಿ ಅಲ್ಲಿ ಹಾಕುತ್ತೇವೆ. ಈ ಈಕ್ವೇಶನ್‌ಗಳ ಆಧಾರದ ಮೇಲೆ ಬೆಲೆಗಳ ಮತ್ತು ಬೇರೆ ಇಂಡಿಪೆಂಡೆಂಟ್ ವೇರಿಯ ಬಲ್‌ಗಳ ಸಂಬಂಧ, ಬೇಡಿಕೆಯು ಈ ಬೆಲೆಗಳ ಮತ್ತಿತರ ಅಂಶಗಳ ಮೇಲೆ ಯಾವ ರೀತಿ ಸ್ಪಂದಿಸುತ್ತದೆ, ಮುಂತಾದವುಗಳಿಗೆಲ್ಲ ಧೋರಣೆ ರೂಪಿಸಬಹುದು.

ಇಲ್ಲಿ ನಮಗೆ ಎದುರಾಗುವಂತಹ ಒಂದು ಅಂಶವೆಂದರೆ ನಾವು ಯಾವುದೊ ಒಂದು ಮಾರುಕಟ್ಟೆಗೆ ಹೋಗಿ ಹತ್ತಿಪ್ಪತ್ತು ಅಥವಾ ನೂರು ಜನರಲ್ಲಿ ನಡವಳಿಕೆ ಯನ್ನು ಅವಲೋಕಿಸಿ ಸಾಮಾನ್ಯೀಕರಣ ಮಾಡಲು ಸಾಧ್ಯವೇ ಎನ್ನುವ ಪ್ರಶ್ನೆ. ಮುಖ್ಯವಾಗಿ ಇದು ಇಂಡೆಕ್ಟೀವ್ ಸಂಶೋಧನೆಯಲ್ಲಿ ಬರುವಂತಹ ಪ್ರಶ್ನೆ. ಈಗ ನಮ್ಮಲ್ಲಿ ಇರುವ ಅನುಭೋಗಿಗಳ ಸಂಖ್ಯೆ : 94 ಕೋಟಿ, ಅಥವಾ ಸುಮಾರು 20 ಕೋಟಿ ಸಂಸಾರದ ವ್ಯಕ್ತಿಗಳು. ಈ ೨೦ ಕೋಟಿ ಮನೆಗಳಿಗೂ ಹೋಗಬೇಕಿಲ್ಲ, ಇದಕ್ಕೆ ಸರಿಯಾದ ಮಾರ್ಗದಲ್ಲಿ ಸ್ಯಾಂಪ್‌ಲಿಂಗ್ ತೆಗೆದುಕೊಳ್ಳಬೇಕು. ಈ ಸ್ಯಾಂಪಲಿಂಗ್ ತಗೆದುಕೊಂಡು ಈ ಹೊತ್ತು ಈ ಸ್ಯಾಂಪಲ್‌ನ್ನು ಬೃಹತ್ ಪ್ರಮಾಣದಲ್ಲಿ ಕೈಗೊಳ್ಳ ಲಾಗುತ್ತಿದೆ. ಉದಾ : 5 ಲಕ್ಷ ಸಂಸಾರದ ಸ್ಯಾಂಪಲ್ ಆದರಿಂದ ಮಾಹಿತಿ ಸಂಗ್ರಹಿಸಿ ಆದರ ಆಧಾರದ ಮೇಲೆ ಕೆಲವು ವೇರಿಯಬಲ್ಸ್‌ಗಳನ್ನು ರೂಪಿಸಬಹುದು. ಆದರೆ ಅದು ಒಂದು ಸಂಸ್ಥೆಯಾಗಿದ್ದರೆ ಸರಿ. ಅಲ್ಲಿ 5 ಲಕ್ಷಕ್ಕೆ ಸುಮಾರು 50.000 ಇನ್‌ವೆಸ್ಟಿಗೇಟರ್ಸ್ ಇರುತ್ತಾರೆ, ಆದರೆ ಸಂಶೋಧನೆ ಮಾಡುವವರು ಆ ರೀತಿ ಮಾಡಲು ಸಾಧ್ಯವಿಲ್ಲ. ಆದಕ್ಕೆ ಬದಲಾಗಿ ಯೂನಿವರ್ಸ್ ಘಟಕಗಳನ್ನು ಮಾಡಿಕೊಳ್ಳಬೇಕು. ಇಷ್ಟು ಮನೆಗಳಿಗೆ ಒಂದು ಯೂನಿವರ್ಸ್ ಸಂಶೋಧನಾ ವಿಶ್ವ ಎಂದು ಮಾಡಿಕೊಂಡು ಆ ವಿಶ್ವದಲ್ಲಿ ಇರುವ ಟಿಪಿಕಲ್ ವ್ಯಕ್ತಿಗಳನ್ನು ಕಂಡುಕೊಳ್ಳಬೇಕು. ಆ ಟಿಪಿಕಲ್ ಆದರಲೂ ಯಾವಾಗ ಬರುತ್ತದೆ, ಅಂದರೆ ನಾವು ಅವರಲ್ಲಿ ಎಲ್ಲ 20 ಕೋಟಿ ಮನೆ ಗಳಲ್ಲಿ ಇರುವ ಗುಣಲಕ್ಷಣಗಳನ್ನು ಕಂಡುಕೊಳ್ಳಬೇಕು. ನಾವು ಯಾರನ್ನು ಆರಿಸು ತ್ತೇವೋ ಅವರಲ್ಲಿ 20 ಕೋಟಿ ಮನೆಗಳಲ್ಲಿರುವ ಗುಣಲಕ್ಷಣ ಇರಬೇಕು. ಅವರ ಸೋಷಿಯೋ-ಎಕನಾಮಿಕ್ಸ್ ಪರಿಸ್ಥಿತಿ, ಹಾಗೂ ಹ್ಯೂಮನ್ ಬೀಯಿಂಗ್ಸ್ ನಾರ್ಮಲ್ ಆಗಿರಬೇಕು. ಏಕೆಂದರೆ ಸಿಗರೇಟ್ ಬೆಲೆ ಹೆಚ್ಚಾದಾಗ ಹೆಚ್ಚಾಗಿ ಸೇದ ಬಾರದು ಎನ್ನುವುದು ನಾರ್ಮಲ್ ಅಲ್ಲ. ಹಾಲಿನ ಬೆಲೆ ಕಡಿಮೆಯಾದಾಗ ಆದನ್ನು ಕುಡಿಯದೆ ಸುಮ್ಮನಾಗುವುದು, ಅಥವಾ ಚಿನ್ನದ ಬೆಲೆ ಹೆಚ್ಚಾದಾಗ ಆದನ್ನು ಇನ್ನೂ ಹೆಚ್ಚಾಗಿ ಕೊಂಡುಕೊಳ್ಳುವುದು, ಆದನ್ನು ಬೇರೆ ಕಾರಣಕ್ಕೂ ಕೊಳ್ಳುವುದು ಇಂತಹ ಟಿಪಿಕಲ್ ಗುಣಲಕ್ಷಣ ಇರುವವರನ್ನು ಆರಿಸಬೇಕು. ಏಕೆಂದರೆ ಒಂದು ರೀತಿ ಅತಿರೇಕ

ವಾದ ವ್ಯಕ್ತಿಗಳು ಇವರು. ನಮ್ಮ ಪ್ರಕಾರ ಜನರಲ್ಲಿ ರ್‍ಯಾಷನಾಲಿಟಿ–ವೈಚಾರಿಕತೆ ಇರಬೇಕು. ಹಾಗೆಂದರೆ ಬೆಲೆ ಹೆಚ್ಚಾದರೆ ಕಡಿಮೆಕೊಳ್ಳಬೇಕು ಇದು ರ್‍ಯಾಷನಾಲಿಟಿ ಅರ್ಥಶಾಸ್ತ್ರದಲ್ಲಿ ಇದನ್ನು ಗುರುತು ಹಾಕಿಕೊಂಡು ಇಲ್ಲಿ ಇದು ಹೇಗೆ ಬಂದಿದೆ ಎಂದು ಕಂಡು ಹಿಡಿಯಬೇಕು.

ಈಗ ನ್ಯಾಷನಲ್ ಲೆವೆಲ್ ಸರ್ವೆಯನ್ನು ವೈಯಕ್ತಿಕವಾಗಿ ಯಾರೂ ಮಾಡಲು ಸಾಧ್ಯವಿಲ್ಲ, ಅದಕ್ಕೆ ನಾವು ನಮ್ಮ ವಿದ್ಯಾರ್ಥಿಗಳಿಗೆ ಬೇರೆ ಬೇರೆ ರಾಜ್ಯಗಳನ್ನು ಆರಿಸಿ ಕೊಳ್ಳಿಎನ್ನುತ್ತೇವೆ. ಈಗ ಕರ್ನಾಟಕದಲ್ಲಿ ಆರಿಸಬೇಕಾದರೆ ಈಗ ಇಲ್ಲಿ ಶೇ. 4.5 ಕೋಟಿ ಜನರಿದ್ದಾರೆ, 90 ಲಕ್ಷ ಮನೆಗಳಿವೆ. ಇದರಲ್ಲಿ ಎಷ್ಟು ಸ್ಯಾಂಪಲ್‌ಗಳನ್ನು ಆರಿಸ ಬೇಕು ಎಂಬುದಕ್ಕೆ ಎರಡು ಅಂಶಗಳಿವೆ, ಒಂದು ಸ್ಯಾಂಪಲ್ ಎಷ್ಟಿರಬೇಕು–ಮುಖ್ಯ ವಾಗಿ ರೀಸರ್ಚ ಮಾಡುವವರಿಗೆ ಅದರ ಗಾತ್ರ ,ಎಷ್ಟಿರಬೇಕು–ಮತ್ತು ಅವಧಿ ಎಷ್ಟಿರ ಬೇಕು ಎಂಬುದು ಇನ್ನೊಂದು. ರೂರಲ್ ಏರಿಯಾಗಳಲ್ಲಿ ಮಾಡಬೇಕಾದರೆ 150–200ಕ್ಕಿಂತ ಹೆಚ್ಚು ಮನೆಗಳಿರಬೇಕು. (ಸಾಮಾನ್ಯವಾಗಿ) 300 ಫ್ಯಾಕ್ಟರಿ ನಗರಗಳಲ್ಲಿ (ದೊಡ್ಡದು) 10ಕ್ಕಿಂತ ಜಾಸ್ತಿ ಬೇಡ. ಸಣ್ಣ ಫ್ಯಾಕ್ಟರಿಗಳಾದರೆ 50ಕ್ಕಿಂತ ಜಾಸ್ತಿ ಬೇಡ, ಏಕೆಂದರೆ ಹೋದ ಕೂಡಲೆ ಯಜಮಾನರು ಇಲ್ಲ ಎನ್ನುತ್ತಾರೆ. ಆದರೆ ಅವರೇ ಯಜಮಾನರಾಗಿರುತ್ತಾರೆ. ಈ ಸಂಖ್ಯೆಗೆ ಯಾವುದೇ ವೈಜ್ಞಾನಿಕ ಆಧಾರ ಇಲ್ಲ. ಸಂಶೋಧಕರಲ್ಲಿರುವ ಸಂಪನ್ಮೂಲದ ಆಧಾರದ ಮೇಲೆ ನಿಂತಿರುತ್ತದೆ. ಇಷ್ಟು ಸ್ಯಾಂಪಲ್‌ಗಳ ಆಧಾರದ ಮೇಲೆ ಹೇಗೆ ಸಾಮಾನ್ಯೀಕರಣ ಮಾಡುತ್ತೀರೆಂದು ಯಾರಾದರೂ ಕೇಳ ಬಹುದು, ಅದಕ್ಕೆ ರ್‍ಯಾಂಡಮ್ ಸಿಸ್ಟಮ್‌ಅನ್ನು ಅನುಸರಿಸುತ್ತೇವೆ. ಪ್ರತಿಯೊಂದು ರಾಜ್ಯದಲ್ಲಿಯೂ ರ್‍ಯಾಂಡಮ್ ಆಗಿ ನಾಲ್ಕು ಜಿಲ್ಲೆ, ಅವುಗಳಲ್ಲಿ ನಾಲ್ಕು ತಾಲೂಕು ಅವು ಗಳಲ್ಲಿ ನಾಲ್ಕು ಹಳ್ಳಿಗಳನ್ನು ಆಯ್ದು ಕೊಂಡು ಸಮೀಕ್ಷೆ ಕೈಗೊಳ್ಳುತ್ತೇವೆ. ಕರ್ನಾಟಕ ತೆಗೆದುಕೊಂಡರೆ ಇಲ್ಲಿನ ಕ್ಷೇತ್ರ ಸ್ವರೂಪವನ್ನು ನೋಡುತ್ತೇವೆ. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಮಲೆನಾಡು, ತೀರಪ್ರದೇಶ ಹೀಗೆ 4 ಭಾಗವಿದೆ. ಇವುಗಳ ಜಿಯಾ ಗ್ರಫಿಕಲ್ ಫ್ಯಾಕ್ಟರ್ಸ್ ಬೇರೆ. ಕಲ್ಚರಲ್ ಫ್ಯಾಕ್ಟರ್ಸ್ ಬೇರೆ. ನಗರಗಳನ್ನು ತೆಗೆದು ಕೊಳ್ಳುವಾಗ ಬೆಂಗಳೂರಿನಂತಹ ನಗರಗಳನ್ನು ತೆಗೆದುಕೊಳ್ಳಬಾರದು. ಏಕೆಂದರೆ ಅದು ಮಿನಿ ಭಾರತ ಇದ್ದಂತೆ. ಇಂತಹ ಮಿಶ್ರ ಸಂಸ್ಕೃತಿಯ ನಗರಗಳಿಂದ ನಮ್ಮ ನಿರೀಕ್ಷಿತ ಫಲಿತಾಂಶ ದೊರೆಯುವುದು ಕಷ್ಟವಾಗುತ್ತದೆ. ಸಮೀಕ್ಷೆಗಾಗಿ ಕ್ಷೇತ್ರಗಳನ್ನು ಸಾಮಾನ್ಯ ವಾಗಿ ಹೀಗೆ ಆಯ್ಕೆ ಮಾಡಲಾಗುವುದು. ಕೋಲಾರ ತೆಗೆದುಕೊಂಡಾಗ ಅದರಲ್ಲಿ ಮಾಲೂರು ತಾಲ್ಲೂಕು, ನಂತರ ಅದರಲ್ಲಿ ಒಂದು ಹಳ್ಳಿ, ಆ ಹಳ್ಳಿಗೆ ಹೋದ ಮೇಲೆ 300 ಮನೆಗಳನ್ನು ತೆಗೆದುಕೊಂಡು ಅದರಲ್ಲಿ ಯಾವುದಾದರೂ 75 ಮನೆಗಳನ್ನು ಆರಿಸಿಕೊಳ್ಳಬೇಕು. ಹೀಗೆಯೇ ಬೇರೆ ಬೇರೆ ಜಿಲ್ಲೆಗಳಲ್ಲಿ ಒಟ್ಟು ನಾಲ್ಕು ಹಳ್ಳಿಯಿಂದ ತಲಾ 75ರಂತೆ 300 ಮನೆಗಳ ಆಯ್ಕೆ ಮಾಡಿಕೊಳ್ಳಬೇಕು. ನಂತರ ಸಮೀಕ್ಷಾ

ಕಾರ್ಯದ ಅನುಕೂಲಕ್ಕಾಗಿ ಮನೆಗಳನ್ನು ಸಂಖ್ಯೆಯ ಮೂಲಕ ಗುರುತು ಹಾಕಿಕೊಳ್ಳಬೇಕು ಅಥವಾ ವ್ಯಕ್ತಿಯ ಹೆಸರನ್ನು ಅಕಾರಾದಿ ಬರೆದುಕೊಳ್ಳಬೇಕು. ಅದರಲ್ಲಿ ಪ್ರತಿ ನಾಲ್ಕನೆ ವ್ಯಕ್ತಿಯನ್ನು ತೆಗೆದುಕೊಳ್ಳಬೇಕು. ಹೀಗೆ ತೆಗೆದುಕೊಳ್ಳುವಾಗ ಬೇರೆ ಜಾತಿಯವರನ್ನು ಗುರ್ತಿಸಿ ಅದರಲ್ಲಿ ಕೃಷಿಕರನ್ನು, ವ್ಯಾಪಾರ ಮಾಡುವವರನ್ನು, ಕೂಲಿ ಮಾಡುವವರನ್ನು ಹೀಗೆ ಪ್ರತ್ಯೇಕ ಗುಂಪಾಗಿ ಮಾಡಿಕೊಳ್ಳಬೇಕು. ಹೀಗೆಗುಂಪು ಮಾಡಿ ಒಟ್ಟು 300 ಜನರನ್ನು ಆರಿಸಬೇಕು. ಹೀಗೆ ಮಾಡಿದಾಗ ಇದು ಮಲ್ಟಿ ಸ್ಟೇಜ್ ರೆಕ್ಟಿಫೈಡ್ ರ್‍ಯಾಂಡಮ್ ಆಗುತ್ತದೆ. ಆಗ ಇದು, ಒಂದು ರೀತಿಯ ಪ್ರಾತಿನಿಧಿಕವಾದ ಸ್ಯಾಂಪಲ್ಲಾಗುತ್ತದೆ. ಈ 4 ಹಳ್ಳಿಗಳವರ ಗುಣಲಕ್ಷಣಗಳನ್ನು ತಿಳಿದುಕೊಂಡು ಇವರ ಗುಣಗಳನ್ನು ಒಟ್ಟಾರೆ ಕರ್ನಾಟಕಕ್ಕೆ ಸಾಮಾನ್ಯೀಕರಣ ಮಾಡಿಕೊಳ್ಳುತ್ತೇವೆ. ಹೀಗೆ ಪ್ರತಿಯೊಂದು ರಾಜ್ಯಗಳಲ್ಲೂ ಅಧ್ಯಯನ ಮಾಡಿದಾಗ ಭಾರತದ ಜನ ಹೇಗೆ ವರ್ತಿಸುತ್ತಾರೆ ಎಂಬುದು ತಿಳಿಯುತ್ತದೆ.

ಆದರೆ ಹೀಗೆ ಸ್ಯಾಂಪಲ್‌ಗಳನ್ನು ಆಯ್ಕೆ ಮಾಡಿ ಕೊಂಡ ಕ್ಷೇತ್ರ ಕಾರ್ಯಕ್ಕೆ ಹೋದಾಗ ಕೆಲವು ಮನೆಗಳಲ್ಲಿ ಮಾಹಿತಿ ಕೊಡಲು ತೊಂದರೆ ಉಂಟಾಗಬಹುದು. ಆ ಮನೆಯವರು ಸರಿಯಾದ ಸಹಕಾರ ನೀಡದಿರಬಹುದು. ಈ ರೀಸರ್ಚ್ ಬಗ್ಗೆ ಕೆಲವರಿಗೆ ಅಸಡ್ಡೆ ಅಥವಾ ಟ್ಯಾಕ್ಸ್ ಆಫೀಸ್ ಎಂದು ಕೊಂಡುಬಿಡಬಹುದು. ಇಂತಹ ಸಮಯದಲ್ಲಿ ಆರ್ಥಿಕ ಸಮೀಕ್ಷೆ ಕಷ್ಟವಾಗುತ್ತದೆ ಹಾಗೆಂದು ಅಂತಹ ಮನೆಯನ್ನು ತೆಗೆದು ಹಾಕಿದರೆ ಸ್ಯಾಂಪಲ್‌ಗೆ ತೊಂದರೆ ಉಂಟಾಗುತ್ತದೆ. ಆಗ ಆ ಮನೆಯ ಬದಲಿಗೆ ಅದರ ಹಿಂದಿನ ಅಥವಾ ಮುಂದಿನ ಅಂದರೆ 3 ಅಥವಾ 5ನೇ ಮನೆಯನ್ನು ತೆಗೆದುಕೊಳ್ಳಬೇಕಾಗುತ್ತದೆ, ಸಾಮಾನ್ಯವಾಗಿ ಪುರುಷರ ಆದಾಯ ಕೇಳಿದಾಗ ಸರಿಯಾದ ವಿವರಣೆ ನೀಡುವುದಿಲ್ಲ, ರೈತರನ್ನು ಕೇಳಿದಾಗ ಮಳೆ ಬಂದಿಲ್ಲ, ಎಂದು ಸಾಗ ಹಾಕುತ್ತಾರೆ. ಇದರಿಂದ ಇನ್‌ಕಮ್ ಅದಲು-ಬದಲಾಗುತ್ತದೆ. ರೈತ ಬೆಳೆದುದನ್ನು ಸರಿಯಾಗಿ ಹೇಳದೆ ಇದ್ದಾಗ ಮನೆಯಲ್ಲಿ ಬಳಸುವ ಧಾನ್ಯದ ಪ್ರಮಾಣ ಕೇಳಿ ಅವರ ಆದಾಯವನ್ನು ಹೊಂದಿಸುತ್ತೇವೆ. ಹಾಗೆಯೇ ಮಹಿಳೆಯರ ವಯಸ್ಸು ಹೇಳುವುದಿಲ್ಲ, ವ್ಯಕ್ತಿಯ ವಯಸ್ಸು ಕೂಡ ಮುಖ್ಯವಾದ ವೇರಿಯಬಲ್ ಆಗುತ್ತದೆ. ಆದ್ದರಿಂದ ಮಕ್ಕಳ ಬಗೆಗೆ ಕೇಳಿ ಅವರ ವಯಸ್ಸಿನ ಆಧಾರದ ಮೇಲೆ ನಾವು ಹೊಂದಿಸಿಕೊಳ್ಳಬೇಕಾಗುತ್ತದೆ. ಇದನ್ನು ಕ್ರಾಸ್ ವೆರಿಫಿಕೇಷನ್ ಎಂದು ಕರೆಯಲಾಗುತ್ತದೆ. ಇದು ಬಹಳ ಮುಖ್ಯ ಇದರ ಆಧಾರದ ಮೇಲೆ ಡೇಟವನ್ನು ತೆಗೆದುಕೊಳ್ಳುತ್ತೇವೆ.

ಅರ್ಥಶಾಸ್ತ್ರದಲ್ಲಿ ಶಾಸ್ತ್ರೀಯವಾಗಿ ಅಧ್ಯಯನ ಮಾಡಲು ಹೊರಟಾಗ ವಿಜ್ಞಾನದಲ್ಲಿ ಹೇಗೆ ಶಿಸ್ತುಬದ್ಧವಾಗಿ ಮಾಡುತ್ತೇವೋ ಹಾಗೆಯೇ ಇಲ್ಲಿಯೂ ಮಾಡಬೇಕು. ಅದಲ್ಲದೆ ಬೇರೆ ಸಾಮಾಜಿಕ ಶಾಸ್ತ್ರಗಳಲ್ಲಿಯೂ ಹಾಗೆಯೇ ಮಾಡಬೇಕಾಗುತ್ತದೆ. *

ಧ್ವನಿಸಂಗ್ರಹ : ಕು|| ಎಚ್. ಎಂ. ಅನುಪಮ

40

ಸಂಶೋಧನ ವಿಧಿ-ವಿಧಾನ : ಇತಿಹಾಸ ಸಂಶೋಧನೆ

ಡಾ|| ಯು. ಸೂರ್ಯನಾಥ್ ಕಾಮತ್

ಪ್ರತಿಯೊಂದು ಪ್ರಸ್ತುತ ಘಟನೆ, ಸಾಧನೆ ಇತಿಹಾಸದಲ್ಲಿ ದಾಖಲೆ ಮಾಡಲಾಗುತ್ತದೆ. ಸಾಹಿತ್ಯ ಪರಿಷತ್ತಿನ ವಿವರವಾದ ಇತಿಹಾಸ ಬೆಂಗಳೂರಿನ ಇತಿಹಾಸಕ್ಕೆ ಪೂರ್ಣ ಪ್ರಸ್ತುತವಾಗಲಿ ಹಾಗೆಯೇ ಬೆಂಗಳೂರಿನ ಪ್ರತಿಯೊಂದು ಘಟನೆ ಕರ್ನಾಟಕ ಇತಿಹಾಸಕ್ಕೆ ಪ್ರಸ್ತುತವಾಗಲಿ ಆಗುವುದಿಲ್ಲ. ಕರ್ನಾಟಕದ ಇತಿಹಾಸಕ್ಕೆ ಪ್ರಸ್ತುತವಾದ ಪ್ರತಿಯೊಂದು ಸಂಗತಿ ದೇಶದ ಇತಿಹಾಸಕ್ಕೆ ಪ್ರಸ್ತುತವಾಗದು, ಹೀಗೆ ಇತಿಹಾಸ ಬೇರೆ ಬೇರೆ ಮಜಲುಗಳಿಗೆ ಅನುಗುಣವಾಗಿ ರಚಿತವಾಗುತ್ತದೆ. ಮಾನವನ ಸಾಧನೆಗಳಿಗೆ ಸಂಬಂಧಿಸಿ ಬೇರೆ ಬೇರೆ ಘಟನೆ ಇತಿಹಾಸದಲ್ಲಿ ದಾಖಲೆ ಆಗುವುದು. ಆಯಾ ಕ್ಷೇತ್ರಕ್ಕೆ ಸಂಬಂಧಿಸಿ ರಾಜಕೀಯ, ಸಾಹಿತ್ಯ, ಸಂಗೀತ, ಇತ್ಯಾದಿಯಾಗಿ ಇತಿಹಾಸದ ಬಗ್ಗೆ ಒಂದು ಹೊಸ ನಿಲುವು ಇದೆ. ಯಾವ ಘಟನೆ, ಸಾಧನೆ ನಮಗೆ ಹೊಸ ಅನುಭವ ನೀಡಿ ಮಾರ್ಗದರ್ಶಕವಾಗಬಲ್ಲದೊ ಅದು ಇತಿಹಾಸದಲ್ಲಿ ದಾಖಲಾಗಬೇಕು. ಇಂಥ ವ್ಯವಸ್ಥಿತ ದಾಖಲೆ ಈ ದಿಸೆಯಲ್ಲಿ ನಮ್ಮಲ್ಲಿ ಆಗಲಿಲ್ಲ. ರೋಮನ್ ಇತಿಹಾಸ ಬರೆಯುವ ಹೊತ್ತಿಗೆ ಜೂಲಿಯಸ್ ಸೀಜರ್‌ನ ಬಗ್ಗೆ ಅನೇಕ ಸಂಪುಟಗಳಷ್ಟು ಮಾಹಿತಿ ದೊರಕುತ್ತದೆ. ಆದರೆ ಸಮಕಾಲೀನ ಭಾರತದ ಶಾತವಾಹನರ ಸಾಮ್ರಾಜ್ಯದ ಬಗ್ಗೆ ಒಂದು ಸಂಪುಟವಾಗುವಷ್ಟು ಮಾಹಿತಿ ಕೂಡ ಸಿಕ್ಕುವುದಿಲ್ಲ. ಇದು ನಮಗೂ ಪಾಶ್ಚಾತ್ಯರಿಗೂ ಇರುವ ವ್ಯತ್ಯಾಸ. ಇದರಿಂದ ಗತಕಾಲದ ಬಗ್ಗೆ ತಿಳುವಳಿಕೆ ಇಲ್ಲ ಎನ್ನುವಂತಿಲ್ಲ. ಆದರೆ ದಾಖಲೆ ಮಾಡುವ ಬಗ್ಗೆ ಸರಿಯಾದ ಪ್ರಜ್ಞೆ ಇರಲಿಲ್ಲವೆನ್ನಬಹುದು.

ಒಬ್ಬ ರಾಜ ತಾನು ಸತತವಾಗಿ ಒಂದೇ ಸ್ಥಳದಲ್ಲಿ ಮಲಗಬಾರದು. ಸ್ಥಳ ಬದಲಾಯಿಸುತ್ತಿರಬೇಕು, ಹಾಗೇ ಅಂಗರಕ್ಷಕರನ್ನು ಬದಲಾಯಿಸುತ್ತಿರಬೇಕು. ಅವನು ಮಲಗುವ ಸ್ಥಳ, ವೇಳೆ ಅನ್ಯರಿಗೆ ತಿಳಿಯಬಾರದು, ರಾಜನಿಗೆ ಅಡಿಗೆ ಮಾಡಿ ತರುವವನು ರಾಜ ಊಟ ಮಾಡುವ ಮೊದಲು ಅವನ ಎದುರಿಗೆ ತಿನ್ನಬೇಕಾಗಿತ್ತು. ಕೌಟಿಲ್ಯನು ಅರ್ಥ ಶಾಸ್ತ್ರದಲ್ಲಿ ಇದನ್ನೆಲ್ಲಾ ಹೇಳುತ್ತಾನೆ. ಎಂದರೆ ಹಿಂದಿನ ಅಸಂಭವ ನಮ್ಮಲ್ಲಿ ದಾಖಲಾಗಲಿಲ್ಲವೆಂದಲ್ಲ, ಇಂಥ ಉದಾಹರಣೆಗಳು ಮಿತವಾದುವು.

ಈಗ ಬಾಲ್‌ಪೆನ್ ಇದೆ. ಇದಕ್ಕೆ ಮೊದಲು ಫೌಂಟನ್ ಪೆನ್ನು ಇತ್ತು. ಅದಕ್ಕೂ ಮೊದಲು ಮಸಿಯಲ್ಲಿ ಅದ್ದಿ ಬರೆಯುವ ಲೇಖನಿ ಇತ್ತು. ನಾವು ಬಳಸುವ ವಸ್ತುಗಳಲ್ಲಿ ಇರುವ ಹೊಸ ದೋಷ ನಿವಾರಿಸಿ ಉಪಯೋಗಕ್ಕೆ ತರುವುದು ವಿಕಸನಶೀಲ ಮಾನವನ ಸ್ವಭಾವ. ಒಂದರಿಂದ ಮತ್ತೊಂದು ಅನುಕೂಲಕರವೆಂದು ಉಪಯೋಗ ಪಡೆಯಲು ಪೂರ್ವಾನುಭವ ಬೇಕಾಗುತ್ತದೆ. ಇದೇ ಇತಿಹಾಸ. ರಾಜರ ಕಥೆ, ಅವನು ಹುಟ್ಟಿದ್ದು, ಸತ್ತದ್ದು, ಯುದ್ಧ ಮಾಡಿದ್ದು ಮಾತ್ರ ಇತಿಹಾಸ ಎನ್ನ ಬಾರದು. ಪ್ರತಿಯೊಂದು ಬಳಕೆ ವಸ್ತುವಿನ ಸುಧಾರಣೆಯಾಗಬೇಕೆಂಬುದು ಇತಿಹಾಸ ವಾಗಿದೆ. ಇದೇ ರೀತಿ ಧರ್ಮ, ಸಾಹಿತ್ಯ, ಸಮಾಜದ ಬದಲಾವಣೆ ಇವುಗಳಿಗೆಲ್ಲ ಇತಿಹಾಸವಿದೆ.

ಇತಿಹಾಸವನ್ನು ದಾಖಲೆ ಮಾಡುವುದು ಕಾಲಾನುಕ್ರಮವಾಗಿರಬೇಕು. ಯಾವ ಘಟನೆಯ ನಂತರ ಯಾವ ಘಟನೆ ನಡೆಯಿತು ಎಂದು ಕಾಲಾನುಕ್ರಮವಾದ ದಾಖಲೆ ಇರಬೇಕು. ಮುಸ್ಲಿಂರು ಇತಿಹಾಸವನ್ನು ತಾರೀಖ್ ಎನ್ನುತ್ತಾರೆ. ತಾರೀಖು ಎಂದರೆ ದಿನಾಂಕ. ಅವರು ತಾರೀಖು ವಾರ ದಾಖಲೆಗೆ ಮಹತ್ವ ನೀಡಿದ್ದರು. ಮಾರ್ಗದರ್ಶನ ಮಾಡುವಾಗ ಹಿಂದಿನ ಅನುಭವದಿಂದ ಮುಂದಿನ ಅನುಭವಕ್ಕೆ ಪ್ರಜ್ಞೆಯ ಇತಿಹಾಸ ಆಯಾ ಕ್ಷೇತ್ರದಲ್ಲಿ ಪಡೆದ ಅನುಭವವು ಮುಖ್ಯ. ಈ ವಿಕಸಿತವಾದ ಅನುಭವ ದಾಖಲೆಯೇ ಇತಿಹಾಸ.

ಪ್ರಾಗೈತಿಕ ಇತಿಹಾಸ ಕಾಲದ ಅಧ್ಯಯನ ಮಾಡುವ ಜನ ಬಹಳ ಕಡಿಮೆ. ಅಂದರೆ ಇತಿಹಾಸ ಪೂರ್ವಕಾಲದ ಕರ್ನಾಟಕ ಇತಿಹಾಸದ ಅಧ್ಯಯನ ಸಂಶೋಧನೆ ವ್ಯಾಪಕವಾಗಿ ಆಗಬೇಕು. ನಮ್ಮ ವಿಶ್ವವಿದ್ಯಾಲಯಗಳಲ್ಲಿ ಪುರಾತತ್ವ ಅಧ್ಯಯನಕ್ಕೆ ಇಂತಹ ವ್ಯವಸ್ಥೆ ಇದೆ. ಇದರಲ್ಲಿ ತರಬೇತಿ ಪಡೆದವರು ಬಹಳ ಕಡಿಮೆ. ಬೆರಳೆಣಿಕೆ ಯಷ್ಟು ಜನರಿದ್ದಾರೆ. ಉತ್ಖನನ, ತರಬೇತಿ ಅನುಭವ ಪಡೆದವರಲ್ಲಿ ಡಾ|| ಸುಂದರ ಅವರು, ಡಾ|| ಎ. ವಿ. ನರಸಿಂಹಮೂರ್ತಿಅವರು, ಡಾ|| ಸಿ. ನಾಗರಾಜು, ಡಾ|| ಎಂ. ಎಸ್. ಕೃಷ್ಣಮೂರ್ತಿ, ಡಾ|| ರಘುನಾಥಭಟ್, ಡಾ|| ಎಂ. ವಿ. ಕೃಷ್ಣಪ್ಪ ಇವರೆಲ್ಲ ಇದ್ದಾರೆ. ಇವರ ಸಂಖ್ಯೆ ತೀರ ಕಡಿಮೆ.

ಪ್ರಾಚೀನ ಇತಿಹಾಸ, ಮಧ್ಯಯುಗದ ಇತಿಹಾಸ, ಆಧುನಿಕ ಇತಿಹಾಸ ಎಂದು ವಿಭಜನೆ ಮಾಡಿದ್ದಾರೆ. ಯಾವ ಕಾಲದ ಇತಿಹಾಸದ ಅಧ್ಯಯನಕ್ಕೆ ಲಿಖಿತ ದಾಖಲೆ ಗಳು ಸಿಕ್ಕುವುದಿಲ್ಲವೋ, ಆಗ ಅಲ್ಲಿ ಸಿಕ್ಕಬಹುದಾದ ಮೂಳೆ, ಮಡಿಕೆಚೂರು, ನಿವೇಶನ, ಶಿಲಾಯುಧಗಳ ಅಧ್ಯಯನದಿಂದ ಇತಿಹಾಸ ಪೂರ್ವ ಕಾಲದ ಅಧ್ಯಯನ ಆಗುತ್ತದೆ. ಆದಿ ಶಿಲಾಯುಗ ಆಗುತ್ತದೆ. ಬೃಹತ್ ಶಿಲಾಯುಗ, ನವಶಿಲಾ ಯುಗ, ಮುಖ್ಯ ವಿಭಾಗಗಳು. ಆಗ ಮನುಷ್ಯರು ಯಾರಿದ್ದರು? ಆಗಿನ ವ್ಯಕ್ತಿ

ನಾವುಗಳೇನು ತಿಳಿಯದು. ಸಾಮಾಜಿಕ, ಧಾರ್ಮಿಕ, ಆರ್ಥಿಕ, ನಂಬಿಕೆ ಯಾವುದು? ಹೇಗಿರಬಹುದು? ಸಾಮೂಹಿಕ ಜೀವನ ಹೇಗಿತ್ತು? ಇಂಥ ವಿಷಯಗಳ ಬಗ್ಗೆ ಅಲ್ಪ ಸ್ವಲ್ಪ ಅಧ್ಯಯನ ಮಾಡಬಹುದು. ಧಾರ್ಮಿಕ ಚಿಂತನೆಯಲ್ಲಿ ಹೆಣ ಹೂಳುವಾಗ ಅದರ ಜೊತೆಯಲ್ಲಿಡುತ್ತಿದ್ದ ವಸ್ತುಗಳು ಯಾವುವು? ಎಂಬುದನ್ನು ತಿಳಿದಾಗ ಸಾಮೂಹಿಕ ಜೀವನ ಹೇಗಿರಬಹುದು? ಎಂದೂ ಊಹಿಸಬಹುದು. ಧಾರ್ಮಿಕ ನಂಬಿಕೆಗಳ ಬಗ್ಗೆ ಕೂಡ ಅದರಿಂದ ಕಲ್ಪನೆ ಬರುತ್ತೆ.

ಕರ್ನಾಟಕದ ಪ್ರಾಚೀನ ಇತಿಹಾಸದ ಅಧ್ಯಯನದ ಬಗ್ಗೆ ಶಾಸನಗಳು ಮುಖ್ಯ ಆಧಾರ. ಭಾರತದ 10ನೇ ಶತಮಾನದವರೆಗೆ ಪ್ರಾಚೀನ ಇತಿಹಾಸ. ಕರ್ನಾಟಕಕ್ಕೆ ವಿಜಯನಗರದವರೆಗೆ ಆರಂಭದ ಪ್ರಾಚೀನ ಇತಿಹಾಸ. ಮುಂದೆ 1565ರ ವರೆಗೆ ಮಧ್ಯಯುಗ, ವಿಜಯನಗರವನ್ನು ಮಧ್ಯಯುಗ ಎನ್ನುತ್ತೇವೆ. ಮೊಗಲರ ಆಡಳಿತಕ್ಕೆ ಸಂಬಂಧಪಟ್ಟ ಹಾಗೆ, ಮೈಸೂರು ಅರಸರ ಆಡಳಿತಕ್ಕೆ ಸಂಬಂಧಪಟ್ಟ ಹಾಗೆ ಶಾಸನಗಳು ಅಲ್ಪ ಸ್ವಲ್ಪ ಉಪಯೋಗ ಬರುತ್ತದೆ. ಆದರೆ ಇಲ್ಲಿ ಶಾಸನಗಳು ಗೌಣವಾಗುತ್ತವೆ. ಪ್ರಾಚೀನ ಇತಿಹಾಸದ ಬಗ್ಗೆ ಶಾಸನ, ನಾಣ್ಯಗಳಿವೆ. ಪುರಾಣಗಳಲ್ಲಿ ಉಲ್ಲೇಖವಿದೆ. ಸಾತವಾಹನರ ಬಗ್ಗೆ ಶಾಸನಗಳಲ್ಲಿ ಉಲ್ಲೇಖವಿದೆ. ಸಂಸ್ಕೃತದಲ್ಲೂ ಕಥನಗಳಲ್ಲಿ ಬರುತ್ತವೆ. ಕೆಲವು ವಿದೇಶಿ ಲೇಖಕರೂ ಸಿಗುತ್ತಾರೆ. ಟಾಲೆಮಿಯಂಥ ಹ್ಯುಯೆನ್‌ನಂಥ ಪ್ರವಾಸಿಗಳು ಇದ್ದಾರೆ. ಆದರೆ ಶಾಸನಗಳು ಬಹು ಮುಖ್ಯ ಶಾಸನಗಳನ್ನು ಇತಿಹಾಸಕಾರ ನೇರಗೊಳಿಸಿ ಅರ್ಥ ಮಾಡಿಕೊಳ್ಳುವುದು ಕಷ್ಟ. ಲಿಪಿಶಾಸ್ತ್ರ ತಿಳಿಸಬೇಕು. ಇಂಥವರು ನಮ್ಮಲ್ಲಿ ಹಲವಾರು ಆಗಿ ಹೋಗಿದ್ದು, ಇಂಥವರೂ ಈಗಲೂ ಇದ್ದಾರೆ. ಶಾಸನ ಪತ್ತೆಹಚ್ಚಿ, ಪ್ರತಿಮಾಡಿ, ಭಾಷಾಂತರ ಮಾಡಿ ಮುದ್ರಿಸಿದ್ದಾರೆ. ಆದರೆ ಮುದ್ರಿತವಲ್ಲದ ಶಾಸನಗಳ ಪಡಿಯಚ್ಚನ್ನು ನೋಡಿ ಅರ್ಥಮಾಡಿಕೊಳ್ಳುವುದು ಬಹು ಮುಖ್ಯವಾದದ್ದು. ಶಾಸನಗಳನ್ನು ಪ್ರತಿ ಮಾಡಿ ಎಡಿಟ್ ಮಾಡುವವರು ಪತ್ತೆ ಮಾಡಿದವರು ಅದರ ಸತ್ಯ ಸಂಗತಿಯನ್ನು ಅರ್ಥಮಾಡಿಕೊಂಡು ಹೇಳಿರುತ್ತಾರೆ. ಶಾಸನಗಳಲ್ಲಿ ಕೂಟ ಶಾಸನ, ನೈಜ ಶಾಸನ ಎಂದು ಹೇಳುತ್ತಾರೆ. ಕೃತಕ ದಾಖಲೆಗಳು ಶಿಲಾ ಶಾಸನಗಳಲ್ಲಿ ಕಡಿಮೆ. ತಾಮ್ರ ಶಾಸನಗಳಲ್ಲಿ ಹೆಚ್ಚು. ಆದರೆ ಕೂಟ ಶಾಸನಕ್ಕೂ ಬೆಲೆ ಇರುತ್ತದೆ. ಇಂಥ ಶಾಸನಗಳಲ್ಲಿ ಕೆಲವೊಂದು ಸತ್ಯಾಂಶಗಳು ಇರುತ್ತದೆ. ಈ ಸತ್ಯ ಅನುಭವದಿಂದ ತಿಳಿಯಬೇಕಾದದ್ದು. ದೇವಸ್ಥಾನದ ಗೋಡೆ ಮೇಲೆ ಶಾಸನಗಳು ಇರುತ್ತದೆ. ಆಲಯವನ್ನು ಕೆಡಹುವ ಪ್ರಸಂಗ ಬರುತ್ತದೆ. ಆಗ ಅದನ್ನು ಇನ್ನೊಂದು ಚಪ್ಪಡಿ ಕಲ್ಲಿನಲ್ಲಿ ಪ್ರತಿಮಾಡಿ ಇಡುತ್ತಾರೆ. 7ನೇ ಶತಮಾನದ ಶಾಸನವನ್ನು 10ನೇ ಶತಮಾನದಲ್ಲಿ ಪ್ರತಿ ಮಾಡುವಾಗ ತಪ್ಪಾಗಿದ್ದರೆ ಅದನ್ನು ಕೂಟ ಶಾಸನ ಎಂದು ಹೇಳಲು ಬರುವುದಿಲ್ಲ. ಕೆಲವು ಶಾಸನಗಳ ತಾಮ್ರ ಪಟ್ಟಗಳನ್ನು ಕಾಗದದಲ್ಲಿ ಪ್ರತಿ ಮಾಡಿದ್ದೂ ಇದೆ. ಕಡತದಲ್ಲಿ ಪ್ರತಿ ಮಾಡಿದ್ದೂ ಇದೆ. ಆದ್ದರಿಂದ

ನಿಮಗೆ ಸತ್ಯದ ಚೌಕಟ್ಟು ಸ್ವಲ್ಪ ಗೊತ್ತಿರಬೇಕು. ಈ ಚೌಕಟ್ಟು ಗೊತ್ತಿಲ್ಲದಿದ್ದರೆ ಅದರಿಂದ ಸತ್ಯ ವಿಚಾರ ಸಂಗ್ರಹ ಮಾಡಲು ಸಾಧ್ಯವಿಲ್ಲ. ಒಂದು ವಿಷಯದ ಬಗ್ಗೆ 10 ಅಥವಾ 20 ಶಾಸನಗಳನ್ನು ಅಧ್ಯಯನ ಮಾಡಿದರೆ ನಿಮ್ಮ ಮನಸ್ಸಿಗೆ ಅದರ ಒಳಗಣ ಚೌಕಟ್ಟು ಮನಸ್ಸಿನಲ್ಲಿ ಮೂಡುತ್ತದೆ. ಕದಂಬರ ಇತಿಹಾಸ ಏನೂ ಗೊತ್ತಿಲ್ಲ ದಿದ್ದರೆ ಅವರ ಎಲ್ಲಾ ಶಾಸನಗಳನ್ನು ಓದಿ ಒಂದು ಇತಿಹಾಸ ರೂಪಿಸಬಹುದು. ಆದರೆ ಈಗಾಗಲೆ ರೂಪಿಸಿರುವ ಇತಿಹಾಸವನ್ನು ಅಭ್ಯಸಿಸಿ ಶೋಧನೆ ಮಾಡಿದಾಗ ಅದರಲ್ಲಿ ಎಷ್ಟು ನಿಜ, ಎಷ್ಟು ತಪ್ಪು ಎಂದು ವಿವೇಚನೆಯಿಂದ ನಿರ್ಣಯಿಸ ಬಹುದು.

ಸಂಶೋಧನೆಯಲ್ಲಿ ಎರಡು ಭಾಗ: ಒಂದು ಭಾಗ ದಾಖಲೆ. ಆ ಕಾಲದ್ದೇ ಎನ್ನುವುದು, ಅದರ ಭಾಷೆ, ಲಿಪಿ, ಕಾಗದವಾದರೆ ಬಳಸಿದ ಕಾಗದದ ಕಾಲ, ಅದರಲ್ಲಿ ರುವ ವಾಟರ್ ಮಾರ್ಕ್ ಇತ್ಯಾದಿಗಳ ಪರೀಕ್ಷೆ. ಇನ್ನೊಂದು ಬಾಹ್ಯ ವಿಮರ್ಶೆಗಳು. 'ವಿಕ್ರಮಾಂಕದೇವ ಚರಿತಂ' ಕಾವ್ಯದಲ್ಲಿ ಆರನೆಯ ವಿಕ್ರಮಾದಿತ್ಯ ತನ್ನ ಅಣ್ಣನನ್ನು ಬಂದಿಖಾನೆಯಲ್ಲಿಟ್ಟುಕೊಂಡು ಪಟ್ಟಕ್ಕೆ ಬಂದ ವಿಷಯ ಇದೆ. 'ಬಾಣನ ಹರ್ಷ ಚರಿತೆ'ಯಲ್ಲಿ ಕಾಣಲಾರದ ಸಂಗತಿಯಿದ್ದು ಅಣ್ಣ ರಾಜವರ್ಧನನ ನಂತರ ಹರ್ಷ ಪಟ್ಟಾಭಿಷಕ್ತನಾದ. ಆದರೆ ಅವನು ಅಣ್ಣನ ಮರಣಕ್ಕೆ ಕಾರಣನೆಂಬ ಊಹೆ ಇದೆ. ತಂಗಿಯ ಗಂಡನ ರಾಜ್ಯ ಅಪಹರಿಸಲು ಆವನ ಕೊಲೆಗೂ ಕಾರಣನಾದ ಎಂದು ಅಭಿಪ್ರಾಯವಿದೆ. ಆದರೆ ಬಾಣನ ಹರ್ಷ ಚರಿತದಿಂದ ಈ ಒಳಗುಟ್ಟು ಗೊತ್ತಾಗದು. ಕೆಳದಿ ಶಿವಪ್ಪನಾಯಕರ ಬಗ್ಗೆ ಮೈಸೂರಿನ ದಾಖಲೆಗಳು ಹೇಳುವ ಕೆಲ ಸಂಗತಿಗಳು. ರಾಜೇಂದ್ರನಾಮೆಯಲ್ಲಿ ಮೈಸೂರು ಕೆಳದಿ ಇತಿಹಾಸದ ಬಗ್ಗೆ ಬರುವ ಕೆಲವು ವಿವರ ಗಳು ಸುಳ್ಳು ಎಂದು ಹೇಳಲು ಸಾಧ್ಯವಾಗದು. ಮೈಸೂರಿನ ಖಂಡೇರಾಯ ಅಲ್ಲಿಯ ಮಹಾರಾಣಿ ಜೊತೆ ಸಂಬಂಧ ಹೊಂದಿದ್ದ ಎಂದು ರಾಜೇಂದ್ರನಾಮೆಯಲ್ಲಿ ಹೇಳಿದೆ. ಇದನ್ನೆಲ್ಲಾ ತಿರಸ್ಕರಿಸಲೂ ಕಷ್ಟವಾಗುತ್ತದೆ. ಇಲ್ಲಿ ಹೇಳಿದ್ದೆಲ್ಲಾ ಸತ್ಯವಲ್ಲ. ಹಾಗೆ ಹೇಳಿದುದರ ಉದ್ದೇಶವೇನು ? ಬರೆದ ವ್ಯಕ್ತಿ ಯಾರು ? ಎಂಬುದನ್ನೆಲ್ಲ ಪರಿಶೀಲಿಸಿ ವಿಮರ್ಶೆ ಮಾಡಬೇಕಾಗುತ್ತದೆ. ಇತಿಹಾಸ ಸಂಶೋಧನೆಯಲ್ಲಿ ಇದು ಬಹಳ ಮುಖ್ಯ.

ದೇವರಾಜ ಅರಸು ಅವರ ಆಡಳಿತದ ಬಗ್ಗೆ ವಿರೋಧ ಪಕ್ಷದ ನಾಯಕರಾದ ದೇವೇಗೌಡರು ಏನಾದರೂ ಬರೆದರೆ ಸತ್ಯಾಂಶ ಎಷ್ಟು ಅಂತ ಗಮನಿಸಬೇಕಾಗುತ್ತದೆ. ಮಿತ್ರನಾದವನು ತನ್ನ ಮಿತ್ರನ ಬಗ್ಗೆ ಎಲ್ಲ ಸತ್ಯವನ್ನು ಹೇಳದೆ ಇರಬಹುದು. ಶತ್ರು ಆದವನು ಶತ್ರು ವ್ಯಕ್ತಿಯ ಬಗ್ಗೆ ಅಪ್ರಿಯ ಘಟನೆಗಳ ವಿವರ ಹೇಳಬಹುದು. ಅವನು

ಹೇಳಿದ್ದು ಮತ್ಸರದಿಂದಲೋ ಅಥವಾ ನಿಜವಾದ ಕಾರಣದಿಂದಲೋ ಎಂಬುದನ್ನು ಇತಿಹಾಸ ಸಂಶೋಧಕ ಆಂತರಿಕವಾಗಿ ವಿಚಾರ ಮಾಡಬೇಕಾಗುತ್ತದೆ. ಬೆಂಗಳೂರನ್ನು ಚಿಕ್ಕದೇವರಾಜ ಒಡೆಯರು ಮೂರು ಲಕ್ಷ ರೂಪಾಯಿಗಳಿಗೆ ಮೊಗಲರಿಂದ ಖರೀದಿ ಮಾಡಿದರು. ಎಂದು ಮೈಸೂರಿನ ದಾಖಲೆಗಳು ಹೇಳುತ್ತಿವೆ. ಇತ್ತೀಚಿಗೆ ಮೊಗಲರ ಪರ್ಶಿಯನ್ ದಾಖಲೆಗಳಿಂದ ತಿಳಿದು ಬಂದದ್ದು. ಮೊಗಲರಿಂದ ಅವರ ಮಾಂಡಲಿಕತ್ವ ಸ್ವೀಕರಿಸಿ ಬೆಂಗಳೂರಿನ ಭಾಗವನ್ನು ತನಗೆ ಕೊಟ್ಟದ್ದಕ್ಕೆ ಅವರಿಗೆ ಕಂದಾಯ ಕೊಡುತ್ತೇವೆ ಎಂದು ಚಿಕ್ಕದೇವರಾಯರು ಒಪ್ಪಂದ ಮಾಡಿಕೊಂಡಿದ್ದರು. ಔರಂಗಜೇಬನು ಬೆಂಗಳೂರನ್ನು ಚಿಕ್ಕದೇವರಾಯನು ಮಾಂಡಲಿಕಗಿರಿಗೆ ಕೊಟ್ಟಿದ್ದು ಎಂದಾಗ ಮರಾಠರು ಕಂದಾಯ ವಸೂಲಿ ಮಾಡಲು ಏಕೆ ಬರುತ್ತಿದ್ದರು? ಎಂದು ಪ್ರಶ್ನೆ ಏಳುತ್ತದೆ. ಮೈಸೂರಿನ ಬರಹಗಾರರು ಮರಾಠರು ಸುಲಿಗೆ ಮಾಡಲು ಬರುತ್ತಿದ್ದರು ಎಂದಿದ್ದಾರೆ. ಆದರೆ ದಕ್ಷಿಣದಲ್ಲಿ ಚೌತ, ಸರದೇಶ್ ಮುಖಿ, ಸಂಗ್ರಹ ಮಾಡುವ ಅಧಿಕಾರ ಮರಾಠರಿಗೆ ಮೊಘಲರಿಂದ ಬಂದಿರುವುದನ್ನು ಇತಿಹಾಸ ಹೇಳುತ್ತದೆ.

ಹಾಗೆಯೇ ಕೆಳದಿ ಇತಿಹಾಸದಲ್ಲಿ ಚನ್ನಮ್ಮಾಜಿಗೆ ಪಟ್ಟವೇರಲು ಶಿವಾಜಿ ಸಹಾಯ ಮಾಡಿರುವುದು ಗೊತ್ತಾಗುವುದಿಲ್ಲ. ಚನ್ನಮ್ಮ ರಾಜರಾಮನಿಗೆ ರಕ್ಷಣೆ ಕೊಟ್ಟು ಮೊಗಲರ ಕೈಲಿ ಸೋತಿರುವುದು ದಾಖಲೆಯಾಗಿದೆ. ಹಾಗೆ ಸೋತಿಲ್ಲ ಎಂದು ಕೆಳದಿ ಇತಿಹಾಸ ಹೇಳುತ್ತದೆ. ಆದರೆ ಸೋತು ಮೊಗಲರಿಗೆ ಮೂರು ಕೋಟೆ ಬಿಟ್ಟು ಕೊಟ್ಟು ನಿಗದಿಯಾಗಿ ಪೊಗದಿ ಕೂಡ ಕೊಟ್ಟಳು ಎಂದು ಪೋರ್ಚುಗೀಸ್ ದಾಖಲೆಯಿಂದ ಗೊತ್ತಾಗುತ್ತದೆ.

ಅದೇ ರೀತಿ ಚೋಳರು ಕಲ್ಯಾಣ ಚಾಳುಕ್ಯರನ್ನು ಸೋಲಿಸಿದ್ದಾಗಿ ತಮ್ಮ ಶಾಸನಗಳಲ್ಲಿ ಹೇಳುತ್ತಾರೆ, ಚಾಳುಕ್ಯರು ಚೋಳರ ಮೇಲೆ ನಾವು ಗೆದ್ದೆವು ಎಂದು ಹೇಳಿಕೊಳ್ಳುತ್ತಾರೆ. ಆದರೆ ಅದನ್ನು ಸಂಶೋಧಕ ಸರಿಯಾಗಿ ಅಧ್ಯಯನ ಮಾಡಿ ತಿಳಿದುಕೊಳ್ಳಬೇಕಾಗುತ್ತದೆ. ಹೀಗೆ ಮೊದಲು ವಿಷಯಗ್ರಹಣ, ಸಂಗ್ರಹ ಮಾಡಿ ಅತಿಶಯೋಕ್ತಿಗೆ ಎಡೆಕೊಡದಂತೆ ನಿಷ್ಪಕ್ಷಪಾತ ಧೋರಣೆಯಿಂದ ಇತಿಹಾಸವನ್ನು ಪರಿಶೀಲಿಸಬೇಕಾಗುತ್ತದೆ. ಕನ್ನಡಿಗರಿಗೆ ಅಪಮಾನ ಆಗಬಾರದು ಎಂದು ಇತಿಹಾಸ ಬರೆಯುವುದಾದರೆ ನಾಡಿನ ಏಳುಬೀಳನ್ನು ನಿರಪೇಕ್ಷಾ ಭಾವದಿಂದ ಕಂಡಂತೆ ಆಗುವುದಿಲ್ಲ. ಸಂಶೋಧನೆಯಲ್ಲಿ ಯಾವತ್ತೂ ನಿರಪೇಕ್ಷ ಭಾವ ಇರಬೇಕು, ಭಾವೈಕ್ಯತೆ ಇರಲಾಗದು. ಮರಾಠರು ಹಾವಳಿ ಮಾಡಿದರು ಎಂದು ಮಾತ್ರ ಹೇಳಿ ಅದರ ಕಾರಣ ತಿಳಿದುಕೊಳ್ಳದಿದ್ದರೆ ಇತಿಹಾಸಕ್ಕೆ ಅಪಚಾರವೆಸಗಿದಂತೆ. ಔರಂಗಜೇಬನ ಬೆನ್ನು ಹತ್ತಿ ಮರಾಠರು ಬರದಿದ್ದರೆ ಕೆಳದಿ, ಮೈಸೂರುಗಳೂ ಸಹ ಬಿಜಾಪುರ, ಗೋಲ್ಕೊಂಡಗಳಂತೆ ಯಾವಾ

ಗಲೋ ಮೊಗಲರ ಕೈ ಸೇರುತ್ತಿದ್ದವು. ಆಗ ಈ ಪ್ರದೇಶ ಕೂಡ ಹೈದಾರಾಬಾದ್ ನಿಜಾಮನ ಕೈ ಸೇರುತ್ತಿತ್ತು, ಆದರೂ ಮರಾಠರು ಕರ್ನಾಟಕವನ್ನು ಸುಲಿದರೆಂಬು ದೇನೂ ಸುಳ್ಳಲ್ಲ.

1704ರಲ್ಲಿ ಚಿಕ್ಕದೇವರಾಯ ಒಡೆಯರ್ ತೀರಿಕೊಂಡಾಗ ಔರಂಗಜೇಬ ದಖನ್ನಿನಲ್ಲಿ ಇದ್ದು, ತಕ್ಷಣ ಶ್ರೀರಂಗಪಟ್ಟಣ ಲೂಟಿ ಮಾಡಿ ಅಲ್ಲಿರುವ ಸಂಪತ್ತು ತನ್ನಿ ಎಂದು ತನ್ನ ಸೈನಿಕರಿಗೆ ಅಜ್ಞೆ ಮಾಡಿದ್ದ. ಶ್ರೀರಂಗಪಟ್ಟಣದ ಕರಡಿ ಮೃತ್ಯುವಿನ ದವಡೆಗೆ ಸೇರಿತು ಎಂದು ಉದ್ಗರಿಸಿದ.ಚಿಕ್ಕದೇವರಾಯ ಒಡೆಯರು 'ನವಕೋಟಿ ನಾರಾ ಯಣ' ಎಂಬ ಪ್ರಸಿದ್ಧಿ ಪಡೆದಿದ್ದರು. ಈ ದಾಳಿಯನ್ನು ಮರಾಠರು ತಮ್ಮದೇ ಕಾರಣಕ್ಕಾಗಿ ತಡೆಗಟ್ಟಿದ್ದರು, ಇಲ್ಲವಾದರೆ ಮೈಸೂರು ಮುಂದೆ ನಿಜಾಮನ ರಾಜ್ಯ ಆಗುತ್ತಿತ್ತು. ಔರಂಗಜೇಬ ನಿಧನನಾದ ನಂತರ ಮರಾಠರು ಹಿಂದಕ್ಕೆ ಹೋದರು, ಮೈಸೂರು ಉಳಿಯಿತು. ಔರಂಗಜೇಬನಿಗೆ ಕೆಳದಿ ರಾಜ್ಯ ನುಂಗಬೇಕೆಂದೂ ಶ್ರೀರಂಗ ಪಟ್ಟಣ ಗೆಲ್ಲುವುದು ಸುಲಭವಲ್ಲ ಎಂದೂ ಗೊತ್ತಿತ್ತು. ಕಂಠೀರವ ನರಸರಾಜ ಒಡೆಯರು ಬಿಜಾಪುರದವರನ್ನು ಹೊಡೆದು ಓಡಿಸಿದ್ದರು. ಕರ್ನಾಟಕದಲ್ಲಿ ಕೆಲವ ರಾದರೂ ಮಿತ್ರರಾಗಿ ಇರಲಿ ಎಂದು ಔರಂಗಜೇಬನ ಇರಾದೆಯಾಗಿತ್ತು, ಔರಂಗಜೇಬನ ಸೈನ್ಯ ಈ ದಾಳಿಯಲ್ಲಿತ್ತು. ಕೆಲವು ಅನ್ನಾನಗತಿಕವಾಗಿ ಓಡಾಡಿತ್ತು. ಹಲವು ಲಕ್ಷಜನ ಯಾವುದೋ ಊರಿಗೆ ಹೋದರು. ಆ ಊರಿನ ಸರ್‌ದೇಶಮುಖ ಮಧ್ಯಾಹ್ನದ ಹೊತ್ತು ಕುಡಿಯುವ ನೀರಿಲ್ಲದ ಪ್ರಸಂಗದಲ್ಲಿ ನೀರು ಕೊಟ್ಟು ಊಟ ಹಾಕಿದ. ಖುಷಿ ಯಿಂದ ಔರಂಗಜೇಬ ಆ ಊರಿನ ದೇವಸ್ಥಾನಕ್ಕೆ 10.000 ಮೊಹರು ದಾನ ಕೊಟ್ಟ, ಹೀಗೆ ದಾನ ಕೊಟ್ಟ ಅನೇಕ ಉದಾಹರಣೆಗಳು ಸಿಕ್ಕುತ್ತವೆ. ಆತ 27 ವರ್ಷ ದಖನ್ನಿನಲ್ಲಿದ್ದ. ಇದರ ಸರಿಯಾದ ಅಧ್ಯಯನ ಈವರೆಗೆ ಆಗಿಲ್ಲ. ಕರ್ನಾಟಕದ ಮುಸಲರ ಒಡಂಬಡಿಕೆಯ ವಿವರ ಸಿಕ್ಕಿಲ್ಲ. ಈ ಬಗ್ಗೆ ನಯಿಂ ಅವರು ಬರೆದ ಒಂದು ಪುಸ್ತಕ ಇದೆ. ಅದರಲ್ಲಿ ಅವರು ಇಡೀ ಕರ್ನಾಟಕವನ್ನು ಮೊಗಲ್ ಸಾಮ್ರಾಜ್ಯದ ಭಾಗವಾಗಿ ತೋರಿಸಿ ಅದರಲ್ಲಿ ಯಾವ ಯಾವ ತಾಲ್ಲೂಕು ಇತ್ತು ಎಂಬುದನ್ನು ತೋರಿಸಿದ್ದಾರೆ. ಚಿಕ್ಕದೇವರಾಯರನ್ನು ಮೊಗಲ ದಾಖಲೆಗಳಲ್ಲಿ ರಾಜ ಎಂದು ಕರೆದಿಲ್ಲ, ಶ್ರೀರಂಗಪಟ್ಟಣದ ಜಮೀನ್ದಾರ ಎಂದು ಸಾಧಿಸಿದ್ದಾರೆ. ಕೆಳದಿ ಚನ್ನಮ್ಮ ನನ್ನು 'ಹೆಣ್ಣು ಕರಡಿ' ಎಂದು ಕರೆದಿದ್ದಾರೆ. ಕಾರಣ ತಿಳಿಯದು. ಈ ವಿವರಗಳನ್ನು ಒಳಗೊಂಡ ಡಾ|| ಸೇತುಮಾಧವರಾವ್ ಪಗಡಿಯವರ ಮೂರು ಲೇಖನಗಳು ಮಿಥಿಕ್ ಸೊಸೈಟಿಯ ಜರ್ನಲ್‌ನಲ್ಲಿ ಕೂಡ ಪ್ರಕಟವಾಗಿವೆ. ಸೋದೆ ಸದಾಶಿವ ನಾಯಕನನ್ನು ಮತಾಂತರ ಮಾಡಬೇಕೆಂದು ಔರಂಗಜೇಬ ನಿರ್ಣಯಿಸಿದ್ದನಂತೆ' ಅವನಿಗೆ ಯಾವ ಹೆಸರು ಕೊಡಬೇಕೆಂದು ನಿರ್ಣಯ ಆಗಿತ್ತಂತೆ. ಬೆಳವಡಿಅ

ಮಲ್ಲಮ್ಮನ ಸೋದರ ಈ ಸೋದೆ ಸದಾಶಿವ ನಾಯಕ, ಬ್ರಿಟೀಷರನ್ನು ತಡವಾಡದಿಂದ ಹೊರದೂಡಿದವನು. ಈ ಎಲ್ಲ ಅಸಂಗತಗಳನ್ನು ಸಂಗತಗೊಳಿಸುವುದು ಇತಿಹಾಸ ಕಾರನ ಕೆಲಸ. ಇದಕ್ಕಾಗಿ ಸಂಶೋಧನಾ ವಿಧಿ ವಿಧಾನಗಳನ್ನು ನಿಷ್ಠೆಯಿಂದ ಅನು ಸರಿಸಬೇಕು.

ಮಧ್ಯಯುಗದಲ್ಲಿ ಬರುವ ಕೋಟೆ, ಕೊತ್ತಲ, ಶಿಲ್ಪ, ಸಾಮಾಜಿಕ ಜೀವನ, ಅರ್ಥ ವ್ಯವಸ್ಥೆ, ಸಂಗೀತಾದಿ ವಿಷಯ ತಿಳಿದುಕೊಳ್ಳಲು 'ಮಾನಸೋಲ್ಲಾಸ'ದಲ್ಲಿ ಹೇಳಿರುವುದನ್ನು ಓದಿದರೆ ತಿಳಿಯಬಹುದು. ಇದು ಒಳ್ಳೆಯ ಕೃತಿ, ಸಂಸ್ಕೃತಿಯ ಬಗ್ಗೆ ಇದರಲ್ಲಿ ಅಪಾರ ವಿವರಗಳಿವೆ.

ಬಾದಾಮಿಯ ಜನಜೀವನ ಹೇಳೋದಾದರೆ ಬಾದಾಮಿಯ 3ನೇ ಗುಹೆಯಲ್ಲಿ ಬ್ರೋಕೇಡ್ ವಿಗ್ರಹ ಉಬ್ಬು ಶಿಲ್ಪ ನೋಡಬೇಕು. ಗಣ್ಯರಾದ ಇಬ್ಬರು, ಒಂದು ಗಂಡು ಮತ್ತೊಂದು ಹೆಂಗಸು ಚೆನ್ನಾಗಿ ಕುಡಿದಿದ್ದಾರೆ. ಯಾವುದೋ ಪಾರ್ಟಿಗೆ ಹೋಗಿ ಬಂದಿದ್ದಾರೆ. ಹೆಂಡತಿ ಹೆಚ್ಚು ಕುಡಿದು ಕುಸಿದು ಬೀಳುವಂತೆ ಇದ್ದಾಳೆ. ಗಂಡ, ಅವಳು ಬೀಳದಂತೆ ಆವಳ ಸೊಂಟ ಹಿಡಿದಿದ್ದಾನೆ. ಇದನ್ನು ಅಲ್ಲಿ ಬರೆದಿಲ್ಲ, ಶಿಲ್ಪವನ್ನು ನೋಡಿದಾಗ ತಿಳಿಯಬಹುದು. ಶಿಲ್ಪಿಯ ಚಾತುರ್ಯ ಮೆಚ್ಚಿ ಕನ್ನಡದಲ್ಲಿ ತೆಲುಗಿನಲ್ಲಿ ತಮಿಳಿನಲ್ಲಿ ಬರಹಗಳು ದಾಖಲೆಗಳು ಸಿಗುತ್ತವೆ. ಇಂಥವುಗಳ ಆಧಾರದಿಂದ ಆಯಾ ಕಾಲದ ಜನಜೀವನದ ಮೇಲೆ ಇತಿಹಾಸಕಾರರು ಬೆಳಕು ಚೆಲ್ಲ ಬೇಕಾಗುತ್ತದೆ.

ವಿಜಯನಗರದ ನಂತರದ ಕಾಲದಲ್ಲಿ ಶಾಸನಗಳು ಕಡಿಮೆ ಆಗಿ ಕಾಗದದ ಬಳಕೆ ಹೆಚ್ಚಾಯಿತು, ಮುಸ್ಲಿಮರ ಕಾಲದಲ್ಲಿ 'ತಾರೀಖ' ಎಂದು ಬರೆದಿಡುತ್ತಿದ್ದರು. ತಾರೀಖ ಎಂದರೆ ಇತಿಹಾಸ. ಮರಾಠರ ದಾಖಲೆಗಳಲ್ಲಿ 'ಅಂತಸ್ತು' ಎಂಬ ಶಬ್ದವಿದೆ. ಇದು ಲಂಚಕ್ಕೆ ಸಂಬಂಧಿಸಿದ್ದು. ಗದ್ಯದಲ್ಲಿ ಕೃತಿಗಳಿವೆ. ಹಾಗೆಯೇ ಪದ್ಯರೂಪದಲ್ಲಿ ಮಠ, ದೇವಸ್ಥಾನಗಳಲ್ಲಿ ದಾಖಲೆಗಳು ಸಿಕ್ಕುತ್ತವೆ. 1896ರ ಸುಮಾರಿಗೆ ಮೈಸೂರು ಅರಮನೆಗೆ ಬೆಂಕಿ ಬಿದ್ದಾಗ ಭಾರಿ ದಾಖಲೆಗಳು ಸುಟ್ಟುಹೋಗಿವೆ. ಅನಂತರದ ದಾಖಲೆಗಳು ಸಿಕ್ಕುತ್ತವೆ.

ಆಧುನಿಕ ಇತಿಹಾಸದ ಅಧ್ಯಯನ ಮಾಡಬೇಕಾದರೆ ಪರಭಾಷೆ ಜ್ಞಾನ ಬೇಕು. ಮರಾಠಿ ಡಚ್, ಪೋರ್ಚುಗೀಸ್ ಅಥವಾ ಪರ್ಷಿಯನ್ ಭಾಷೆಗಳಲ್ಲಿ ಒಂದಾದರೂ ಭಾಷೆ ತಿಳಿದಿರಬೇಕು. ಕನ್ನಡ ಮೋಡಿ, ಮರಾಠಿ ಮೋಡಿ ತಿಳಿದಿರಬೇಕು. ಪತ್ರಾಗಾರ ಗಳು, ಶೃಂಗೇರಿಯ ಮಠ, ಉಡುಪಿಮಠ, ಸೋದೆ ಸ್ವರ್ಣವಲ್ಲಿ ಮಠ, ಅನೇಕ ವೀರ

ಶೈವ ಮಠಗಳು, ಧರ್ಮಸ್ಥಳ, ಇಲ್ಲೆಲ್ಲ ಕಾಗದದ ದಾಖಲೆಗಳು ಇವೆ. ಇಂಥ ದಾಖಲೆಗಳನ್ನು ಸಂಶೋಧಕರು ಬಳಸಿಕೊಳ್ಳಬೇಕಾಗಿದೆ. ಇಂಥ ಸ್ಥಳ ಪತ್ತೆ ಹಚ್ಚಿ ಸಂಶೋಧಕರಿಗೆ ಇವು ಸಿಗುವಂತೆ ಮಾಡಬೇಕಾಗಿದೆ.

ಇತಿಹಾಸ ಸಂಶೋಧನೆ ಇತರ ಸಂಶೋಧನೆಗಳಿಗಿಂತ ಬೇರೆಯದೇ ಆದ ವಿಧಿ ವಿಧಾನಗಳನ್ನು ಹೊಂದಿರುತ್ತದೆ. ಪ್ರಧಾನವಾಗಿ ಕ್ಷೇತ್ರಕಾರ್ಯ ಇರುತ್ತದೆ. ಟೇಬಲ್‌ನಲ್ಲಿ ಕುಳಿತು ಮಾಡುವ ಸಂಶೋಧನೆ ಸರಿಯಾದ ಇತಿಹಾಸ ಸಂಶೋಧನೆಯಾಗಿರುವುದಿಲ್ಲ. ದಾಖಲೆಗಳನ್ನು ಸಂಗ್ರಹಿಸಿ, ಎಲ್ಲ ಮೂಲಗಳಿಂದಲೂ ಪರಿಶೀಲಿಸಿ, ವಸ್ತುನಿಷ್ಠವಾಗಿ ಹೇಳುವಂತಹ ನಿಷ್ಠೆ ಇತಿಹಾಸ ಸಂಶೋಧನೆಯ ಮುಖ್ಯ ಸಂಗತಿಯಾಗಿರುತ್ತದೆ.

ಧ್ವನಿ ಸಂಗ್ರಹ : ಶ್ರೀಮತಿ ಜಯಮ್ಮ ಕರಿಯಣ್ಣ

ರಾಜ್ಯಶಾಸ್ತ್ರದಲ್ಲಿ ಸಂಶೋಧನೆಯ ವಿಧಿವಿಧಾನಗಳು

ಡಾ. ಆರ್. ಎಲ್. ಎಂ. ಪಾಟೀಲ್

ಅಂತರ ಶಿಸ್ತೀಯ ಸಂಶೋಧನೆಯನ್ನು ಕುರಿತಂತೆ ರಾಜಕೀಯ ಶಾಸ್ತ್ರ, ಬೇರೆ ಶಿಸ್ತಿನ ಸಂಬಂಧವಿಲ್ಲದೆ ತಾನೆ ತಾನಾಗಿ ಸಂಶೋಧನೆ ನಡೆಸಲು ಸಾಧ್ಯವಿಲ್ಲ. ರಾಜ್ಯ ಶಾಸ್ತ್ರ ಸಂಶೋಧಕ ಬೇರೆ ಶಿಸ್ತಿನ ಸಹಾಯವನ್ನು ಪಡೆಯಬೇಕಾಗುತ್ತದೆ. ಅದು ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಇತಿಹಾಸ ಮತ್ತು ಇನ್ನಿತರ ಶಿಸ್ತಿನ ವಿಷಯಗಳನ್ನು ಬಳಸಿಕೊಳ್ಳ ಬೇಕಾಗುತ್ತದೆ. ಸಂಶೋಧನೆ ನಡೆಸುವಾಗ ಬೇರೆ ವಿಷಯಗಳ ವಿಭಜನೆಗೆ ಒಳಪಟ್ಟಿದೆ ಎಂದು ಭಾವಿಸಿದರೆ ಅದು ತಪ್ಪಾಗುವುದು. ಸಂಶೋಧನ ವಿಷಯದಲ್ಲಿ ಎಲ್ಲಾ ವಿಷಯಗಳಿಗೆ ಒಂದು ತರಹದ ಸಂಬಂಧವಿರುವುದು. ಒಬ್ಬ ರಾಜ್ಯಶಾಸ್ತ್ರಜ್ಞ ಆರ್ಥಿಕ ವಿಷಯವನ್ನು ಹೆಚ್ಚಿನ ಮಟ್ಟಿಗೆ ಬಳಸಿಕೊಳ್ಳುವನು. ಅದೇ ತರಹ ಒಬ್ಬ ಸಮಾಜಶಾಸ್ತ್ರ ಸಂಶೋಧಕ ಸಮಾಜಕ್ಕೆ ಸಂಬಂಧಪಟ್ಟ ಆರ್ಥಿಕ, ರಾಜಕೀಯ ಮತ್ತು ಬೇರೆ ವಿಷಯಗಳನ್ನು ಉಪಯೋಗಿಸಿಕೊಳ್ಳುವನು. ಸಂಶೋಧನಾ ಕ್ಷೇತ್ರದಲ್ಲಿ ವಿಷಯಗಳ ವಿಭಜನೆ ಸರಿಯಲ್ಲ. ಒಂದಕ್ಕೊಂದು ನಿಕಟಸಂಬಂಧ ಪಡೆದಿರುತ್ತದೆ. ರಾಜ್ಯಶಾಸ್ತ್ರ ಅರ್ಥಶಾಸ್ತ್ರ ಬೇರೆ ಬೇರೆ ಅಲ್ಲ. ಜಾತಿ ಪದ್ಧತಿಯು ಸಾಮಾಜಿಕ ಸಮಸ್ಯೆಯೊಂದೇ ಆಗಿರುವುದಲ್ಲ. ಅದು ರಾಜಕೀಯ ಸಮಸ್ಯೆಯೂ ಆಗಿರುತ್ತದೆ. ಒಬ್ಬ ವ್ಯಕ್ತಿಯನ್ನು ಕುರಿತು ಸಂಶೋಧನೆ ಮಾಡುವಾಗ ವಿಷಯ ಬೇರೆ ಆದರೂ ಅದು ಸಮಾಜದ ವ್ಯಕ್ತಿಗೆ ಸಂಬಂಧಪಟ್ಟಿದ್ದಾಗಿರುತ್ತದೆ. ಆದ್ದರಿಂದ ಶಿಸ್ತಿನ ವಿಭಜನೆ ಅಷ್ಟು ಸರಿಯಲ್ಲ. ಅಂತರಶಿಸ್ತೇ ನಿಜವಾದ ಶಿಸ್ತು.

ಜಾತಿಪದ್ಧತಿ, ಗುಲಾಮಗಿರಿ, ಸಮಾಜಕ್ಕೆ ಸಂಬಂಧಪಟ್ಟ ಸಮಸ್ಯೆಯಾದರೂ ಅದು ಆರ್ಥಿಕ ವಿಷಯಕ್ಕೆ ಸಹ ಸಂಬಂಧಪಟ್ಟಿರುತ್ತದೆ. ಒಂದು ಸಮಸ್ಯೆಗೆ ಕಾರಣ ಹುಡುಕುವಾಗ ಅದನ್ನು ಬಗೆಹರಿಸಲು ಅನೇಕ ಕ್ಷೇತ್ರಗಳನ್ನು ಹಾದು ಹೋಗಬೇಕಾಗುತ್ತದೆ. ಆಗಲೇ ನಿಜವಾದ ಕಾರಣ ಮತ್ತು ಸಮಸ್ಯೆಯನ್ನು ತಿಳಿಯಲು ಸಾಧ್ಯ– No one Decipline will have Solution to Problem (ಕನ್ನಡಕ್ಕೆ ಅನುವಾದಿತ)ಬೇರೆ ಶಿಸ್ತಿನ ಸಹಾಯ ಪಡೆದರೆ ನಮ್ಮ ಜ್ಞಾನ ಹೆಚ್ಚುವುದು ಮತ್ತು ಸಮಸ್ಯೆಯನ್ನು ಸರಿಯಾಗಿ ತಿಳಿಯಲು ಅನುಕೂಲವಾಗುವುದು, ಉದಾಹರಣೆಗೆ 1856 ರಲ್ಲಿ ಪುಣೆಯಲ್ಲಿ ಹತ್ತಿ ಬೆಳೆ ಬೆಳೆಯ ತಕ್ಕಂತಹ ಮರಾಠಿ ರೈತ ಮತ್ತು ಹೊರಗಿ

ನಿಂದ ಬಂದ ಮಾರವಾಡಿಗಳ ಮಧ್ಯೆ ಘರ್ಷಣೆ ನಡೆದು ಮಾರವಾಡಿಗಳನ್ನು ಅಲ್ಲಿಂದ ಸ್ಥಳಾಂತರಿಸಿದರು. ಈ ಘರ್ಷಣೆಯನ್ನು ಕುರಿತು ಅಧ್ಯಯನ ಮಾಡಿದ ಒಬ್ಬ ಇತಿಹಾಸಜ್ಞ ಇದು "ಕೋಮು ಗಲಭೆ" ಎಂದು ವಿವರಿಸುತ್ತಾನೆ, ಇದೇ ವಿಷಯ ಒಬ್ಬ ಅರ್ಥಶಾಸ್ತ್ರಜ್ಞನ ದೃಷ್ಟಿಯಲ್ಲಿ ಬೇರೆ ರೂಪ ತಾಳುತ್ತದೆ. ಅದೇನೆಂದರೆ ಅದೇ ವರ್ಷದಲ್ಲಿ ದಕ್ಷಿಣ ಅಮೇರಿಕಾದಲ್ಲಿ ಹತ್ತಿ ಉತ್ಪಾದನೆ ಕಡಿಮೆಯಾಗಿದ್ದು ಅದು ಉತ್ತರ ಅಮೇರಿಕಾ ಮತ್ತು ಯೂರೋಪ ಕಡೆಗೆ ಹತ್ತಿಯು ಹೋಗದಂತಾಯಿತು. ಆದ ಕಾರಣ ಭಾರತದ ಹತ್ತಿಗೆ ಭಾರಿ ಬೆಲೆ ಬಂತು. ಆಗ ಮರಾಠ ರೈತನಿಗೆ ಹೆಚ್ಚಿನ ಲಾಭ ಬಂದು ದುಂದು ವೆಚ್ಚಕ್ಕೆ ಇಳಿಯುತ್ತಾನೆ. ಆಗ ಹಣ ಸಾಲದೆ ಮಾರವಾಡಿಯಿಂದ ಸಾಲವನ್ನು ಪಡೆಯುತ್ತಾರೆ. ಅದೇ ಮರುವರ್ಷದಲ್ಲಿ ಅಮೇರಿಕಾದ ಹತ್ತಿ ಸಮಸ್ಯೆಯು ಬಗೆಹರಿದಿದ್ದು ಹತ್ತಿ ಉತ್ತರ ಅಮೇರಿಕಾ ಮತ್ತು ಯೂರೋಪ್‌ನಲ್ಲಿ ದಂಡಿಯಾಗಿ ದೊರೆಯುತ್ತದೆ. ಇದರ ಪರಿಣಾಮ ಭಾರತದ ಹತ್ತಿಗೆ ಬೇಡಿಕೆ ಇಲ್ಲದಂತಾಗಿ ಹಣಕಾಸಿನ ಸಮಸ್ಯೆ. ಒಬ್ಬ ಮರಾಠಿ ರೈತನು ಸಾಲದ ಹಣವನ್ನು ಮರುಪಾವತಿ ಮಾಡಲು ಕಂಗಾಲಾದಾಗ ಅವನು ಮಾರವಾಡಿಗಳ ಜೊತೆಗೆ ಘರ್ಷಣೆಗೆ ಇಳಿದು ಅವರನ್ನು ಅಲ್ಲಿಂದ ಓಡಿಸಲು ಕಾರಣವಾಗುತ್ತದೆ. ಈ ಉದಾಹರಣೆಯ ಪ್ರಕಾರ ಒಂದು ಸಮಸ್ಯೆ ಸಾಮಾಜಿಕ, ಆರ್ಥಿಕ ಮತ್ತು ಐತಿಹಾಸಿಕ ಆಯಾಮವನ್ನು ಪಡೆದಿರುತ್ತದೆ. ಇದು ಒಂದು ಸಮಸ್ಯೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಬರುವ ನೈಜ ಅಂಶವಾಗಿರುತ್ತದೆ. ಇದು ಅಂತರಶಿಸ್ತಿನ ಸಂಶೋಧನೆ ಮತ್ತು ಚರ್ಚೆಯ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತದೆ.

ಸಮಾಜ ಶಾಸ್ತ್ರದ ವಿಷಯದ ವಿಭಜನೆ ಎಂದಿಗೂ ಸಾಧ್ಯವಿಲ್ಲ. ರಾಜನೀತಿ ಶಾಸ್ತ್ರ, ಅರ್ಥಶಾಸ್ತ್ರ, ಮನಃಶಾಸ್ತ್ರ ಎಂಬ ವಿಭಜನೆ ಏನಿದೆ ಅದು ನಮ್ಮ ಒಂದು ಅನುಕೂಲಕ್ಕೆ ಮಾಡಿದ ವಿಭಜನೆ ಆಗಿರುತ್ತದೆ. ಜಾತಿ ಸಮಸ್ಯೆ, ನಾಗರೀಕರಣ, ಚುನಾವಣೆ, ನದಿ ವಿವಾದ, ಶಿಕ್ಷಣ ಸಮಸ್ಯೆ ಎಲ್ಲವೂ ವಿಭಿನ್ನ ಸಮಸ್ಯೆಗಳಾಗಿದ್ದರೂ ಅವುಗಳ ಸಂಶೋಧನ ರೀತಿ ಒಂದೇ ಆಗಿರುತ್ತದೆ, ಅನೇಕ ತರಹದ ತಾಂತ್ರಿಕತೆಯನ್ನು ಬಳಸಿದ್ದರೂ ಧ್ಯೇಯ ಒಂದೇ ಆಗಿರುತ್ತದೆ.

ಸಂಶೋಧನೆ ಎಂದರೇನು ?

ಈಗ ಬೇರೆ ವಿಷಯಕ್ಕೆ ಹೋಗುವ ಮುಂಚೆ ಸಂಶೋಧನೆ ಎಂದರೇನು ಎಂದು ತಿಳಿಯಬೇಕಾಗುತ್ತದೆ. ಸಂಶೋಧನೆ ಎಂದರೆ ನನ್ನ ಪ್ರಕಾರ 1) ನಿಜಾಂಶ ವಿಷಯಗಳ ಸಂಗ್ರಹಣೆ : ಅದು ಅನುಭವ, ಅಂಕಿ ಅಂಶಗಳನ್ನೂ ಸಹ ಒಳಗೊಂಡಿರುತ್ತದೆ. ಸಂಶೋಧನೆ ನಿಜಾಂಶ ಸಂಗತಿಗೆ ಸಂಬಂಧಪಟ್ಟಿರಬೇಕು. ನಮ್ಮ ಅನಿಸಿಕೆಗಳು ನಿಜಾಂಶ ಆಗಿರುವುದಿಲ್ಲ. ಉದಾಹರಣೆಗೆ ಪ್ರಧಾನಮಂತ್ರಿಗಳು ಮೂರ್ಖ ಎಂದರೆ

ಅದು ನನ್ನ ಅನಿಸಿಕೆ ಆಗುವುದು, ಉತ್ಪ್ರೇಕ್ಷೆಗೆ ಆಸ್ಪದ ಕೊಡಬಾರದು. Facts ಇಲ್ಲವೆ ಸಂಶೋಧನೆ ಮಾಡುವುದಕ್ಕೆ ಆಗುವುದಿಲ್ಲ. (ಸಮಾಜ ಶಾಸ್ತ್ರದ ವಿಷಯ ಗಳಲ್ಲಿ ಕನ್ನಡದ ಮುಖಾಂತರ ಸಂಶೋಧನೆ ಮಾಡಲು ಸಾಧ್ಯವಾಗುವುದಿಲ್ಲ. ಏಕೆಂದರೆ ಕನ್ನಡದಲ್ಲಿ ಸಿಗುವುದಿಲ್ಲ. ಕನ್ನಡದಲ್ಲಿ ಸಮಾಜಕ್ಕೆ ಸಂಬಂಧಪಟ್ಟಂತೆFactsಅನ್ನು ಸಂಗ್ರಹಣೆ ಮಾಡಲು ತುಂಬಾ ಕಷ್ಟಕರವಾಗಿರುತ್ತದೆ. ಕನ್ನಡದಲ್ಲಿ ರಾಜ್ಯ ಶಾಸ್ತ್ರ, ಸಮಾಜ ಶಾಸ್ತ್ರದ ವಿಷಯಕ್ಕೆ ಸಂಬಂಧಪಟ್ಟಂತೆ ಸಂಶೋಧನೆ ಮಾಡಬೇಕಾದ Factsನ ಕೊರತೆಯಿರುತ್ತದೆ. ಆದರೆ ಬೇರೆ ಭಾಷೆಯ ಮರೆಹೋಗಬೇಕಾಗು ತ್ತದೆ. ಇದು ಒಬ್ಬ ಸಂಶೋಧಕ ಗಮನದಲ್ಲಿಟ್ಟುಕೊಳ್ಳಬೇಕಾದ ವಿಷಯ ವಾಗಿರುತ್ತದೆ.

ತಾರ್ಕಿಕ ವಿಶ್ಲೇಷಣೆ :

ನಿಜಾಂಶದ (facts) ತಾರ್ಕಿಕ ವಿಶ್ಲೇಷಣೆ ತುಂಬಾ ಪ್ರಾಮುಖ್ಯ. ಬರೀ ಇಟ್ಟಿಗೆಗಳು ಮಾತ್ರ ಗೋಡೆಯಾಗುವುದಿಲ್ಲ. ಇಟ್ಟಿಗೆಗಳನ್ನು ಸರಿಯಾಗಿ ಜೋಡಿಸಿ ಅವನ್ನು ಸರಿಯಾಗಿ ಕಟ್ಟಿದಾಗ ಒಂದು ಸುಂದರ ಗೋಡೆಯಾಗುತ್ತದೆ. ತಾರ್ಕಿಕ ವಿಶ್ಲೇಷಣೆ (logical articulation) ಸಂಶೋಧನೆಯ ಎರಡನೆಯ ಘಟ್ಟ ವಾಗಿರುತ್ತದೆ.

ನಿರ್ಣಯ : ಯಾವುದೇ ಸಂಶೋಧನೆಯಲ್ಲಿ ನಿರ್ಣಯಕ್ಕೆ ಪ್ರಾಶಸ್ತ್ಯ ಕೊಡಬೇಕಾಗುತ್ತದೆ. ಇಡೀ ಸಂಶೋಧನೆಗೆ ನಿರ್ಣಯ ಅಗತ್ಯ. ನಿರ್ಣಯ ಒಂದು ಅಭಿಪ್ರಾಯವಾಗಿರಬಹುದು. ಸಂಶೋಧಕ ಏನು ಹೇಳ ಬಯಸುತ್ತಾನೆ, ಏನು ಹೇಳ ಬೇಕು ಎಂಬುದು ನಿರ್ಣಯದಲ್ಲಿ ಅಡಗಿರುತ್ತದೆ. ಸಂಶೋಧಕನ ಅಭಿಪ್ರಾಯ ಎಲ್ಲರಿಗೂ ಒಪ್ಪಿಗೆ ಆಗಲೇಬೇಕು ಎಂಬುದೇನೂ ಇಲ್ಲ.

ಕೊನೆಗೆ ಸಂಶೋಧನೆಯಿಂದ ಏನು ತಿಳಿದಿದ್ದೇನೆ, ಏನು ಸಮಸ್ಯೆ, ಸಮಸ್ಯೆಗೆ ಏನು ಕಾರಣ ಎಂದು ಸಂಶೋಧಕ ತಿಳಿದುಕೊಂಡು ಬೇರೆಯವರಿಗೆ ತಿಳಿಸಿಕೊಡಬೇಕು. ಸ್ವಅಭಿಪ್ರಾಯವನ್ನು ತಿಳಿಸಬೇಕು. ಸಮಾಜ ವಿಜ್ಞಾನ ಸಂಶೋಧನೆಯ ಈ ಮೂರು ಅಂಶಗಳನ್ನು ಸಂಶೋಧಕ ಗಮನದಲ್ಲಿಟ್ಟುಕೊಳ್ಳಬೇಕು.

ಬಹು ಶಿಸ್ತೀಯ ಸಂಶೋಧನೆ ಎಂದರೇನು ?

ಈ ಮೇಲಿನ ವಿಷಯವನ್ನು ಕೆಲವು ಉದಾಹರಣೆಗಳ ಸಹಾಯದಿಂದ ಅರ್ಥೈ ಸಲು ನಾನು ಪ್ರಯತ್ನ ಪಡುತ್ತೇನೆ. ಮೊದಲಿಗೆ Election (ಚುನಾವಣೆಗಳು) ಚುನಾವಣೆ ಎನ್ನುವುದು ರಾಜ್ಯ ಶಾಸ್ತ್ರದ ವಿಷಯವಾಗಿರುತ್ತದೆ. ಆದರೆ ಇದು ಮನಃಶಾಸ್ತ್ರಕ್ಕೆ ಸಂಬಂಧಪಟ್ಟ ವಿಷಯವೂ ಆಗಿರುತ್ತದೆ. ಮತಗಳನ್ನು ಹೇಗೆ

ಪಡೆಯುವುದು. ಮತದಾರರ ಮನಸ್ಸು ಮತ್ತು ಹೃದಯವನ್ನು ಹೇಗೆ ಒಲಿಸುವುದು ? ಅದು ಆಶ್ವಾಸನೆಯ ಮುಖಾಂತರವಾಗಿರಬಹುದು. ಭಯದ ಮುಖಾಂತರವಾಗಿರ ಬಹುದು. ಹೇಗೆ ಜನಗಳ ಅಭಿಪ್ರಾಯವನ್ನು ಮತಕ್ಕೆ ಪರಿವರ್ತಿಸುವುದು ? ಯಾವ ಸಾಧನ ಉಪಕರಣಗಳನ್ನು ಬಳಸುವುದು (ಹೇಗೆ ಸಂವಹನ Communication ಮಾಡುವುದು) ಯಾವ ಮಾಧ್ಯಮದ ಸಹಾಯ ಪಡೆಯುವುದು ಎಂಬ ಅಭಿಪ್ರಾಯ ಗಳು ಇಲ್ಲಿ ಉದ್ಭವಿಸುವುದು. ಈಗ ಚುನಾವಣೆ ರಾಜ್ಯ ಶಾಸ್ತ್ರದ ವಿಷಯವಾದರೂ ಅದು ಮನಃಶಾಸ್ತ್ರ ಮತ್ತು ಸಂವಹನ ಸಹಾಯ ಪಡೆಯಬೇಕಾಗುತ್ತದೆ. ಅಥವಾ ಅದನ್ನು ಬಳಸಿಕೊಳ್ಳಬೇಕಾಗುತ್ತದೆ. ಮತಗಳನ್ನು ಗಳಿಸಬೇಕಾದರೆ ಸಮಾಜದ ವಿಭಿನ್ನ ಜಾತಿ, ಮತ, ಧರ್ಮದ ಅರಿವು ಇರಬೇಕಾಗುತ್ತದೆ. ಯಾವ ಯಾವ ಕೋಮು ಗಳು ಪ್ರಬಲವಾಗಿವೆ, ಆ ಕೋಮಿನ (ಲಿಂಗಾಯಿತ, ಗೌಡ, ಮುಸಲ್ಮಾನ, ಕ್ರೈಸ್ತ) ಮತದಾರರನ್ನು ಹೇಗೆ ಒಲಿಸುವುದು ಮತ್ತು ಅವನಿಂದ ಹೇಗೆ ಮತ ಪಡೆಯುವುದು. ಎಂಬ ವಿಷಯ ಪ್ರಾಮುಖ್ಯವಾಗುತ್ತದೆ. ಆಗ ಸಮಾಜ ಶಾಸ್ತ್ರವನ್ನು ಮರೆಹೋಗ ಬೇಕಾಗುತ್ತದೆ ಮತ್ತು ಅಂಕಿ ಅಂಶಗಳ ಸಹಾಯವನ್ನು ಪಡೆಯಬೇಕಾಗುತ್ತದೆ. ಜನನಾಯಕ ಆಗಬೇಕಾದರೆ ಮನಃ ಶಾಸ್ತ್ರದ ಅರಿವು ಇರಲೇಬೇಕಾಗುತ್ತದೆ.

ಎರಡನೆ ಉದಾಹರಣೆಯಾಗಿ ಯುದ್ಧ (War) :

ಪ್ರಾಚೀನ ಕಾಲದಲ್ಲಿ ಯುದ್ಧ ಎನ್ನುವುದು ಒಂದು ಕ್ರೀಡೆಯಾಗಿತ್ತು. ಆದರೆ 19ನೇ ಶತಮಾನದ ಪೂರ್ವದಲ್ಲಿ ಯುದ್ಧ ಅಮಾನವೀಯವಾಗಿದೆ. ಯುದ್ಧ ಮಾಡುವು ದಕ್ಕೆ ರಾಜಕೀಯ ದೃಢತೆ ಮತ್ತು ಮಾನಸಿಕ ದೃಢತೆ ಎರಡೂ ಬೇಕಾಗುತ್ತದೆ. 'Quincy Wright' ಎಂಬ ಅಮೆರಿಕನ್ ರಾಜ್ಯಶಾಸ್ತ್ರಜ್ಞನ ಪುಸ್ತಕ "Study of War"ನಲ್ಲಿ ಯುದ್ಧ ಹೇಗೆ ಸಾಮಾಜಿಕ, ಆರ್ಥಿಕ, ಮಾನಸಿಕ, ಐತಿಹಾಸಿಕ ಕಾರಣಗಳಿಂದ ನಡೆಯುವುದು ಎಂದು ವಿವರಿಸಲ್ಪಟ್ಟಿದೆ. ಯುದ್ಧ ಎರಡು ಮತ್ತು ಮೂರು ಸೇನೆಗಳ ಮಧ್ಯೆ ನಡೆದರೂ ಅದಕ್ಕೆ ಕಾರಣ ರಾಜಕೀಯ ನಾಯಕ ಅಥವಾ ರಾಜ ಕಾರಣವಾಗಿರುತ್ತಾನೆ. ಒಂದು ಯುದ್ಧವನ್ನು ಒಂದು ಆಟಕ್ಕೆ ಪರಿವರ್ತಿಸ ಬಹುದು. ಆ ಆಟವನ್ನು ಚರ್ಚೆಗೆ ಮತ್ತೆ ಪರಿವರ್ತಿಸಬಹುದು. ಯುದ್ಧವನ್ನು ತಡೆ ಗಟ್ಟುವುದರಲ್ಲಿ ಒಬ್ಬ ರಾಜ್ಯಶಾಸ್ತ್ರಜ್ಞನ ಸಲಹೆ ಮತ್ತು ಮಾರ್ಗದರ್ಶನ ಅಡಗಿರುತ್ತದೆ. ಹೀಗೆ ಯುದ್ಧ ಅಂತರ ಶಿಸ್ತಿನ ಅಧ್ಯಯನದ ವ್ಯಾಪ್ತಿಗೆ ಬರುತ್ತದೆ.

ಮೂರನೆಯದಾಗಿ ಕೋಮು ಗಲಭೆ : ಕೋಮು ಗಲಭೆಗಳು ಆಗಿಂದಾಗ್ಗೆ ತಲೆದೋರುತ್ತವೆ. ಮುಖ್ಯವಾಗಿ ಅದು ಎರಡು ಜಾತಿಯ ಜನರ ನಡುವೆ ಆಗುವ ಘರ್ಷಣೆ ಆಗಿರುತ್ತದೆ. ಈ ಕೋಮು ಗಲಭೆಗಳಿಗೆ ಕಾರಣ ಆ ಜಾತಿ, ದೇವರು ಇತ್ಯಾದಿ ವಿಷಯಗಳಿಗಲ್ಲ, ಅದು ಹೆಚ್ಚಾಗಿ ಬೆಳಕಿಗೆ ಬಾರದ ರಾಜಕೀಯ, ಆರ್ಥಿಕ,

ಸಾಮಾಜಿಕ ಮತ್ತು ಚುನಾವಣೆಗೆ ಸಂಬಂಧಪಟ್ಟ ವಿಷಯದ ಮೇಲೆ ಆಗಿರುತ್ತದೆ. ಕೋಮು ಗಲಭೆಯನ್ನು ರಾಜಕೀಯ ಗಲಭೆ ಎಂದರೆ ತಪ್ಪಾಗಲಾರದು. ಕೋಮು ಗಲಭೆಗೆ ಕಾರಣ ಕಂಡುಹಿಡಿಯಬೇಕಾದರೆ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಐತಿಹಾಸಿಕ ದೃಷ್ಟಿಯಿಂದ ನೋಡಿದಾಗ ಮಾತ್ರ ನಿಜವಾದ ಕಾರಣ ತಿಳಿದು ಬರುತ್ತದೆ. ಕೋಮು ಗಲಭೆ ಬರೀ ಎರಡು ಕೋಮುಗಳ ನಡುವೆ ಘರ್ಷಣೆ ಎಂದರೆ ತಪ್ಪಾಗುವುದು. ಉದಾ : ಹುಬ್ಬಳ್ಳಿಯಲ್ಲಿ ನಡೆದಂತಹ ಕೋಮು ಗಲಭೆಗೆ ಎರಡು ವರ್ಗದ ಸಾಮಾನ್ಯ ಜನರು ಕಾರಣರಲ್ಲ. ಅದು ಒಂದು ಸ್ವತ್ತಿನ ಮೇಲೆ ಯಾರು ಹತೋಟಿ ಹೊಂದುವುದು ಎಂಬುದರ ಮೇಲೆ ಆಗಿದ್ದು ಅದು ಮೇಲ್ನೋಟಕ್ಕೆ ಕೋಮು ಗಲಭೆ ರೂಪ ತಾಳುತ್ತದೆ.

ಭ್ರಷ್ಟಾಚಾರ ಒಂದು ಪಿಡುಗಾಗಿದೆ. ಯುದ್ಧ, ಕೋಮು ಗಲಭೆ, ನದಿ ವಿವಾದ ಇತ್ಯಾದಿಗಳ ತರಹ ಭ್ರಷ್ಟಾಚಾರವೂ ಒಂದು ದೊಡ್ಡ ಸಮಸ್ಯೆಯಾಗಿದೆ. ಆದರ ಕುತೂಹಲದ ಸಂಗತಿಯೇನೆಂದರೆ ಇವೆಲ್ಲ ಏತಕ್ಕೆ ಆಗುತ್ತಿವೆ ಮತ್ತು ಹೇಗೆ ಬಗೆಹರಿಸುವುದು ಎಂದು ಚಿಂತಿಸಿದಾಗ ದೊಡ್ಡ ಸಮಸ್ಯೆ ಎದುರೇಳುತ್ತದೆ. ಯಾವುದೇ ವಿಷಯವನ್ನು ಗಂಭೀರವಾಗಿ ತಿಳಿಯಬೇಕಾದರೆ ಆದರ ಮೂಲಕ್ಕೆ ಹೋಗ ಬೇಕಾಗುತ್ತದೆ. ಆಗ ಮಾತ್ರ ನಿಜಾಂಶ ಹೊರಗೆ ಬೀಳುತ್ತದೆ. ಆದರೆ ನಮ್ಮಲ್ಲಿ ವೈಚಾರಿಕ ಕೊರತೆ ಇರುವುದರಿಂದ ಯಾವುದೇ ಸಮಸ್ಯೆಯನ್ನು ಆಳವಾಗಿ ಅಧ್ಯಯನ ಮಾಡಿ ಅದಕ್ಕೆ ಪರಿಹಾರ ಕಂಡು ಹಿಡಿಯುವ ಪ್ರಯತ್ನ ನಡೆಯುತ್ತಿಲ್ಲ. ಅನೇಕ ವೈಯಕ್ತಿಕ ರಾಜಕೀಯ ಮತ್ತು ಸಾಮಾಜಿಕ ಅಡಚಣೆಗಳಿಂದ ಇದು ಸರಿಯಾಗಿ ನಡೆಯುತ್ತಿಲ್ಲ. ಆದ್ದರಿಂದ ಆಳವಾದ ಅಧ್ಯಯನ ಮತ್ತು ಸಂಶೋಧನೆ ವಿವಿಧ ಕೋನಗಳಿಂದ ನಡೆದಾಗ ಕೆಲವು ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗುವುದು.

ಮದ್ಯಪಾನ ನಮ್ಮ ದೇಶವನ್ನು ಕಾಡುತ್ತಿರುವ ಇನ್ನೊಂದು ಸಮಸ್ಯೆ. ಮದ್ಯಪಾನ ನಿಷೇಧವನ್ನು ಕೆಲವು ರಾಜ್ಯಗಳು ಪಾಲಿಸಿದುದುಂಟು. ಆದರೆ ಇದು ಅಷ್ಟು ಯಶಸ್ಸನ್ನು ಕಂಡಿಲ್ಲ. ಮದ್ಯಪಾನ ನಿಷೇಧ ಕಾನೂನಿಗೆ ಸಂಬಂಧಪಟ್ಟಿದೆ. ಮದ್ಯಪಾನ ನಿಷೇಧಿತ ರಾಜ್ಯದಲ್ಲಿ ಮದ್ಯಪಾನ ಮಾಡುವುದು ಒಂದು ಅಪರಾಧವಾಗಿರುತ್ತದೆ. ಆದರೆ ಕಾನೂನು ಮದ್ಯಪಾನ ಮಾಡುವುದನ್ನು ಸಂಪೂರ್ಣವಾಗಿ ತಡೆಗಟ್ಟುವುದು ಸುಲಭ ಸಾಧ್ಯವಲ್ಲ, ಅದು ಒಂದು ವ್ಯಕ್ತಿಯ ಖಾಸಗಿ ಬದುಕಿಗೆ ಸಂಬಂಧಪಟ್ಟಿರುತ್ತದೆ. ಇದನ್ನು ನೈತಿಕವಾಗಿ ಮತ್ತು ಸಾಮಾಜಿಕವಾಗಿ ಬಗೆಹರಿಸಬೇಕಾಗುತ್ತದೆ. ಬರೀ ಕಾನೂನಿನ ಮೂಲಕ ಇದನ್ನು ಬಗೆಹರಿಸುವುದು ಸಾಧ್ಯವಾಗುವುದಿಲ್ಲ. ಇದಕ್ಕೆ ಸಂಬಂಧಪಟ್ಟ ಕಾನೂನನ್ನು ಅನೇಕ ರೀತಿಯಲ್ಲಿ ಉಲ್ಲಂಘಿಸಬಹುದು. ಆದ್ದರಿಂದ ಮದ್ಯ ಸೇವಿಸುವ ನಿಷೇಧವನ್ನು ಕುರಿತು ಕಾನೂನು ಮಾಡಿದರೆ ಆದರಿಂದ ಏನೂ

ಉಪಯೋಗವಾಗಲಾರದು, ಮದ್ಯಪಾನದ ತಯಾರಿಕೆಯನ್ನೆ ನಿಷೇಧಿಸುವಂತಹ ಒಂದು ಕಾನೂನು ಅಗತ್ಯವಾಗುತ್ತದೆ. ಮದ್ಯವನ್ನು ತಯಾರಿಸಿ ಅದನ್ನು ಸೇವಿಸ ಬೇಡಿ ಎಂದರೆ ಅದು ದ್ವಂದ್ವ ನೀತಿಯಾಗುತ್ತದೆ.

ಈ ಮೇಲೆ ಹೇಳಿರುವ ಸಮಸ್ಯೆಗಳಂತೆ ಭಾರತ ಪಾಕಿಸ್ತಾನಗಳ ನಡುವೆ, ಕಾಶ್ಮೀರ ಕುರಿತು ನಡೆಯುತ್ತಿರುವ ವಿವಾದ ಇನ್ನೊಂದು ಉದಾಹರಣೆಯಾಗುತ್ತದೆ. ಈ ಸಮಸ್ಯೆಯನ್ನು ಸಂಪೂರ್ಣವಾಗಿ ತಿಳಿದು ಅದನ್ನು ಬಗೆಹರಿಸಬೇಕಾದರೆ ಅದರ ಮೂಲ ವಿಷಯಕ್ಕೆ ಹೋಗಬೇಕಾಗುತ್ತದೆ. ಇಲ್ಲಿಯವರೆಗೂ ಈ ಎರಡು ಸರ್ಕಾರಗಳು ಇದರ ಬಗ್ಗೆ ಯಾವ ಪ್ರಯತ್ನವನ್ನೂ ಮಾಡಿಲ್ಲ. ಇದು ಒಂದು ರಾಜಕೀಯ ಸಮಸ್ಯೆ ಯಾದರೂ ಇದರಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಉತ್ಪ್ರೇಕ್ಷೆಯ ಕಾರಣಗಳು ಅಡಗಿವೆ. ಈ ಬಿಕ್ಕಟ್ಟನ್ನು ತಿಳಿದು ಪರಿಹರಿಸಬೇಕಾದರೆ ಒಂದು ಅಂತರ ಶಿಸ್ತೀಯ ಅಧ್ಯಯನ ನಡೆಯಬೇಕಾಗುತ್ತದೆ.

ಭ್ರಷ್ಟಾಚಾರ, ಕೋಮು ಗಲಭೆ, ಯುದ್ಧ, ಚುನಾವಣೆ, ಮದ್ಯಪಾನ ನಿಷೇಧ, ಕಾವೇರಿ ನದೀ ವಿವಾದ, ಭಾರತ ಪಾಕಿಸ್ತಾನ ಗಡಿ ವಿವಾದ ಈ ಎಲ್ಲಾ ಸಮಸ್ಯೆಯನ್ನು ವಿವಿಧ ದೃಷ್ಟಿಯಿಂದ ಮತ್ತು ಬೇರೆ ವಿಷಯದ ಸಹಾಯದಿಂದ ಅಧ್ಯಯನ ಮತ್ತು ಸಂಶೋಧನೆ ಮಾಡಿದಾಗ ಇವಕ್ಕೆಲ್ಲ ಪರಿಹಾರ ಸಿಗಬಹುದು.

ಯಾವುದೇ ಸಂಶೋಧಕ ಸಂಶೋಧನೆ ಮಾಡುವಾಗ ತನಗೆಲ್ಲ ಗೊತ್ತಿದೆ ಎಂದು ಹೊರಟಾಗ ಆತ ತೊಂದರೆಯಲ್ಲಿ ಸಿಲುಕುತ್ತಾನೆ. ನನಗೇನು ಗೊತ್ತಿಲ್ಲವೆಂದು ಪ್ರವೇಶ ಮಾಡಿದಾಗ ಇಡೀ ಸಾಗರದಷ್ಟು ಅನುಭವದ ಅರಿವು ಉಂಟಾಗುತ್ತದೆ. ಯಾವುದೇ ವಿಷಯಕ್ಕೆ ಬಂದಾಗ ಒಂದು ಸಣ್ಣದು ಅದಕ್ಕಿಂತಲೂ ಸಣ್ಣದು ಹೀಗೆ ಸಣ್ಣ ವಿಷಯ ದಲ್ಲಿ ಎಷ್ಟೊಂದು ವಿಷಯ ಅಡಗಿರುತ್ತದೆ. ಇದಕ್ಕೆ ವಿನಯ ಭಾವನೆ ಮುಖ್ಯ.

ಧ್ವನಿಸಂಗ್ರಹ : ಪಿ. ಈ. ಸೋಮಯ್ಯ

1. ಟೀಕೆ ಟಿಪ್ಪಣಿ

೧. ಕ್ರಿಯಾಸಮಾಸ : ಪ್ರತಿಕ್ರಿಯೆ

ಕ್ರಿಯಾ ಸಮಾಸ ವಿಚಾರವಾಗಿ ಡಾ|| ಎಂ. ಜಿ. ವಾರಿಯವರ ಲೇಖನಕ್ಕೆ ನನ್ನ ಪ್ರತಿಕ್ರಿಯೆ ಜೂನ್, 1997 ಸಂಚಿಕೆಯಲ್ಲಿ ಪ್ರಕಟವಾಗಿದೆ. ಅದಕ್ಕೆ ಅವರು ನೀಡಿದ ಉತ್ತರದಲ್ಲಿ ಕೇಶಿರಾಜನಿಗೆ ಮತ್ತು ಅವನನ್ನು ಸಮರ್ಥಿಸಿದ ನನಗೆ ಒಂದೆರಡು ಸೊಣೆ ಮಾತುಗಳಲ್ಲದೆ, ವಿಚಾರ ಪರಿಪುಷ್ಟಿಯಿಲ್ಲದುದರಿಂದ, ಅದನ್ನು ಪ್ರಕಟಿಸುವುದು ಬೇಡವೆನಿಸಿದ್ದರೂ ಅದನ್ನು ಡಿಸೆಂಬರ್, 1997ರ ಸಂಚಿಕೆಯಲ್ಲಿ ಪ್ರಕಟಿಸಲಾಯಿತು. ಆದುದರಿಂದ ಈಗ ನನ್ನ ಪ್ರತ್ಯುತ್ತರ ಅನಿವಾರ್ಯವೆನಿಸಿದೆ. ಅಲ್ಲಿ ನಾನೆಂದಿರುವುದನ್ನು ಪ್ರಸ್ತಾವಿಸಿ–"ಈ ಮಾತುಗಳೆಲ್ಲ ಅವರ ಭಾಷಾಧ್ಯಯನ ಕ್ಷೇತ್ರದ ಚಂದ್ರ ಕುಳಿಯಂತೆ ಕಾಣುತ್ತವೆ ಎಂದು ಮಾತ್ರ ಹೇಳಬಲ್ಲೆ" ಎಂದಿದ್ದಾರೆ. ಹಾಗೆಂದಿರುವ ಶ್ರೀವಾರಿಯವರ ನಿರೂಪಣೆಗಳು ವ್ಯಾಕರಣಾಧ್ಯಯನದಲ್ಲಿ 'ಪೂರ್ಣ ಚಂದ್ರಗ್ರಹಣ'ವೆಂದರೆ ತಪ್ಪಲ್ಲ. ಚಂದ್ರನಲ್ಲಿ ಕುಳಿ(ಚಂದ್ರಕುಳಿ–ಎಂಬುದು ಅರಿಸಮಾಸಪದವಾಗಿದ್ದು ವ್ಯಾಕರಣ ತಿಳಿಯದವರ ಪ್ರಯೋಗ) ಇದ್ದರೂ ಬೆಳ್ದಿಂಗಳಿರುತ್ತದೆ. ಪೂರ್ಣಗ್ರಹಣದಲ್ಲಿ ಬೆಳಕೇನೂ ಇರುವುದಿಲ್ಲವಷ್ಟೆ ?

ಡಾ|| ವಾರಿಯವರ ಉತ್ತರದಲ್ಲಿ–ಚಂದ್ರಕುಳಿ, ಪರಿಭಾಷಾ ಚೌಕಟ್ಟು, ಅಸ್ಪಷ್ಟ ಸುಳಿವು, ಮರುಗಮನಿಕೆ, ಆಡು ಭಾಷೆ, ಅಲ್ಪಮಟ್ಟನ, ತೃಪ್ತಿಕರದೆಸೆ–ಇತ್ಯಾದಿ ಅರಿಸಮಾಸ ದೋಷಗಳು ಅಲಕ್ಷಿತವಾಗಿವೆ ! ಇರಲಿ. ಶ್ರೀಯುತರು ಸಂಸ್ಕೃತ ಭಾಷಾ ಮೋಹಿತರನ್ನು ಖಂಡಿಸಿರುವ ಒಂದು ವಾಕ್ಯ ಹೀಗಿದೆ—

"ಕನ್ನಡ (ಶಿಷ್ಟ) ಭಾಷಾ ಪ್ರತಿನಿಧಿಗಳೆನಿಸಿದ ವಿದ್ವಾಂಸರನೇಕರು ಆರಂಭದಿಂದಲೂ ಸಂಸ್ಕೃತ ಭಾಷಾ ವ್ಯಾಮೋಹಿತರಾಗಿಯೋ ಅಥವಾ ಅಪ್ರಜ್ಞಾಪೂರ್ವಕವಾಗಿ ಅಂಥವರನ್ನು ಅನುಸರಿಸಿಯೋ ಇಲ್ಲವೆ ಅಳವಡಿಸಿಕೊಂಡ ಪರಿಭಾಷಾ ಚೌಕಟ್ಟಿನ ನಡಿಗೆಯಲ್ಲಿಯೋ ಸಾಗಿದರು." ಈ ಒಂದು ವಾಕ್ಯದಲ್ಲಿ ಕನ್ನಡ ಪದಗಳಿರುವುದು ಆರು ಮಾತ್ರ ; ಸಂಸ್ಕೃತ ಶಬ್ದಗಳು ಹದಿಮೂರಿವೆ. ಆದುದರಿಂದ ಮೇಲಿನ ಅವರ ದೋಷಾರೋಪಣೆ ಅವರಿಗೇ ಸಲ್ಲುವುದಲ್ಲವೆ ?

ವ್ಯಾಕರಣವೆಂಬುದು ಭಾಷೆಗೆ ಸಿದ್ಧಪಡಿಸಲಾದ ರಾಯಬೀದಿ. ಹೀಗಿರುವಾಗ ಶ್ರೀ ವಾರಿಯವರ ವಾದಸರಣಿ ಅದನ್ನುಳಿದು ಕಲ್ಲು ಮುಳ್ಳಿನ ಏರುತಗ್ಗಿನ ಕೊರಕಲು ಹುಳುದಾರಿಯೇ ಸರಿದಾರಿ ಎಂಬಂತಿದೆ. ವ್ಯಾಕರಣವನ್ನು ಅವರು ಹೀಗೆ ದಾರಿ ತಪ್ಪಿಸುವುದು ಕಂಡು ಬರುತ್ತದೆ—ಎಂಬುದಕ್ಕೆ ಅವರ ಕ್ರಿಯಾ ಸಮಾಸ ವಿಚಾರವೇ ಸಾಕ್ಷಿ.

ಕ್ರಿಯಾ ಸಮಾಸಕ್ಕೆ ಅವರು ಒಂದು ನವೀನ ಲಕ್ಷಣವನ್ನು ಸೃಷ್ಟಿಸಿದ್ದಾರೆ— "ಭೂತನ್ಯೂನದ ಕ್ರಿಯಾವಾಚಿ ಪದ ಮತ್ತು ಕ್ರಿಯಾ ಪ್ರಕೃತಿ ಸೇರಿ ಉದಿಸಿದ ಏಕಾರ್ಥ ಸ್ವರೂಪದ ಕ್ರಿಯಾವಾಚಿ ಘಟಕವೂ ಕ್ರಿಯಾ ಸಮಾಸವಾಗುವುದು." ಅವರ ಉದಾಹರಣೆಗಳಲ್ಲಿ ಮರೆದು+ಸುಂದು—ಮರೆಸುಂದು, ಓಲುತ್ತ+ಆಡು—ಓಲಾಡು, ಬೇಡುತ್ತ+ಕೊಳ್—ಬೇಡಿಕೊಳ್ ಎಂಬಿವು ಬಂದಿವೆ. ಓಲುತ್ತ, ಬೇಡುತ್ತ-ಎಂಬವು ಭೂತನ್ಯೂನ ಕ್ರಿಯಾವಾಚಿಗಳೆ? ಅವು ತಾತ್ಕಾಲಿಕ ವರ್ತಮಾನ (Present Continuous tense) ರೂಪಗಳಲ್ಲವೆ? ಆದುದರಿಂದ ತಮ್ಮ ಸೂತ್ರವನ್ನವರು ತಿದ್ದಿಕೊಳ್ಳಬೇಕಲ್ಲವೆ?

ಹಾಗೆ ತಿದ್ದಿಕೊಂಡ ಮೇಲೆಯೂ ಉಳಿಯತಕ್ಕವಿವೆ—ಹೇಳಲು+ತೊಡಗು—ಹೇಳತೊಡಗು, ನೋಡಲಿಕ್ಕೆ+ಆಗಿ—ನೋಡಲಿಕ್ಕಾಗಿ—ಇವೂ ಕ್ರಿಯಾಸಮಾಸಗಳಾಗವೆ? ಹೀಗೆ ನವೀನ ಆವಿಷ್ಕಾರ ಮಾಡುತ್ತ ದ್ವಂದ್ವ ಸಮಾಸವನ್ನೂ ವಿಸ್ತರಿಸಬಹುದಲ್ಲವೆ? ಉದಾ: ಒಟ್ಟಿಗೆ+ಒಟ್ಟಿಗೆ—ಒಟ್ಟೊಟ್ಟಿಗೆ, ಇದರಂತೆ—ಮೆಲ್ಲ ಮೆಲ್ಲನೆ, ಮೊದ ಮೊದಲು, ನುಡಿ ನುಡಿದು—ಇವನ್ನು ದ್ವಂದ್ವ ಸಮಾಸವೆನ್ನಬಹುದಲ್ಲವೆ? ಬಹುಶಃ ಮುಂದೆ ಅವರು ಹೀಗೂ ಎನ್ನಬಹುದು! ಅಂತೂ ಹೀಗೆಲ್ಲ ಸೃಷ್ಟಿಸಿಕೊಳ್ಳುವುದರಿಂದ ಅದೊಂದು ಬಗೆಯಲ್ಲಿ ವ್ಯಾಕರಣದ ಬಂಡಾಯವೆನಿಸಬಹುದೋ ಏನೋ! ನನ್ನ ಪ್ರತಿಪಾದನೆಯ ತಾತ್ಪರ್ಯವಿದು—ಇರುವ ವ್ಯಾಕರಣವನ್ನು ಪ್ರಯೋಗ ಸಹಿತ ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ವ್ಯಾಕರಣವನ್ನು ದಾರಿ ತಪ್ಪಿಸುವುದೆಂದರೆ-ಭಾಷೆಯನ್ನು ಕೊಲೆ ಮಾಡಿದಂತಾಗುವುದು; ಆದುದರಿಂದ ಯೋಗ್ಯವಲ್ಲ.

ಟಿ. ಕೇಶವ ಭಟ್ಟ

೨. ಲಕ್ಷ್ಮೀಶ ಕವಿಯ ಒಂದು ಉಲ್ಲೇಖದ ಅರ್ಥ ಸಮಸ್ಯೆ

ವಿದ್ವತ್ಸಭಾವಲಯದೊಳ್ "ಕವಿ ಚೂತವನಚೈತ್ರ"ನೆಂಬ ಬಿರುದಾಂಕಿತ ಭಾಗವತ ಶಿರೋಮಣಿ ಮಹಾಕವಿ ಲಕ್ಷ್ಮೀಶನ ಕಾವ್ಯದ ಮೂಲಕ ಶ್ರೀ ಕೃಷ್ಣ ಪರಮಾತ್ಮನನ್ನೂ, ಜೊತೆಗೆ ಕವಿಯ ವಿದ್ವತ್ಪೂರ್ಣ ಕಾವ್ಯ ಲಹರಿಯನ್ನೂ ಕೊಂಡಾಡುವುದು ಒಂದು ಸುಕೃತ ವಿಶೇಷ.

ಈ ದೃಷ್ಟಿಯಲ್ಲಿ ಕನ್ನಡ ಜೈಮಿನಿ ಭಾರತವು ನನ್ನ ಮನಸ್ಸನ್ನು ಸೆರೆ ಹಿಡಿದು ಸಂತುಷ್ಟಿಗೊಳಿಸಿದರೂ ಕೊನೆಗೊಂದು ಗೊಂದಲವು ಆತಂಕಕ್ಕೀಡುಮಾಡಿತು. ಆ ಬಗ್ಗೆಯೇ ಈ ಲೇಖನ ಬರೆವ ಉದ್ದೇಶವಾಯಿತು.

ಜೈಮಿನಿಭಾರತ (ಸಂ|| ಪ್ರ|| ಯೋಜನೆಯ)ದ ಮುನ್ನುಡಿ ವಿವರಣೆಯ XXXIನೇ ಪುಟದಲ್ಲಿ ವಿಚಾರ ಮಾಡಿರುವ "ಗೋವರ್ಧನಂಗೆ ಮೊಲೆಗೊಟ್ಟ ಪೂತನಿವೊಲಾಯ್ತು" ರಾಮ, ನಿನ್ನ ಪಕ್ಷದ ಸೈನ್ಯ ಸ್ಥಿತಿ, ಎಂದು ದೂತರು ಯಜ್ಞ ದೀಕ್ಷಿತ ಶ್ರೀ ರಾಮನಿಗೆ ತಿಳಿಸಿದ ಪ್ರಸಿದ್ಧ ವಿಷಯ ಸಂಗತಿ.

ಕವಿಗಳು "ರಸಾವೇಶಮರಹಾಲಸ್ಯ"ಗಳಿಂದ ಒಮ್ಮೊಮ್ಮೆ ತಪ್ಪು ಮಾಡಬಹು ದೇನೋ ಎಂಬಂತೆ, ಲಕ್ಷ್ಮೀಶನೂ ದ್ವಾಪರಯುಗದಲ್ಲಿ ಮುಂದೆಂದೋ ನಡೆಯಬಹು ದಾದ ತನಗೆ ಗೊತ್ತಿರುವ ಕಥಾ ಸಂದರ್ಭವನ್ನು ತ್ರೇತಾಯುಗದಲ್ಲೇ ಅದೂ ಕಥಾ ನಾಯಕನಿಗೆ ಪ್ರತ್ಯಕ್ಷವಾಗಿ ಅವನ ದೂತರಿಂದಲೇ ಉದ್ಧರಿಸುವ ಉಪಮೆಯಾಗಿ ವರ್ಣಿಸಿದ್ದಾನಲ್ಲಾ, ಇಂದೆಂಥ ವಿಪರ್ಯಾಸ ! ಎಂಬ ಆಕ್ಷೇಪವನ್ನು ಕವಿಯ ಮೈಮರವೆ ಯೆಂದು ಗಣಿಸಲಾಗಿದೆ.

ಆ ಗ್ರಂಥವನ್ನು ಆಗಾಗ್ಗೆ ಸವಿಯುತ್ತಾ ಆ ಕವಿಯ ವಾಕ್‌ವೈಚಿತ್ರ್ಯಗಳನ್ನೂ ಪದ ಪುಂಜಗಳ ನಾನಾರ್ಥ ಪ್ರಯೋಗ ಸಂಘಟನೆಗಳ ಚಮತ್ಕಾರವನ್ನೂ ಚಿಂತಿಸಿ ಇಂಥ ಒಂದೇ ಒಂದು ಆಕ್ಷೇಪ ಅಪವಾದ ವಾದೀತೆಂದು ನನ್ನ ಮನಸ್ಸು ವ್ಯಥಿಸಿತು. ಆ ವಿಷ್ಣುಭಕ್ತನಿಗೆ ಇಂಥ ಮೈಮರವೆ ಎಂದೂ ಒದಗದು, ಅವನ ಕಾವ್ಯದಲ್ಲೇ ಕಾಣುವ ಕೆಲವು ಸೂಚನೆಯಂತೆ ನಿಗೂಢವಾದ ಒಂದು ಪಾಂಡಿತ್ಯಪೂರ್ಣ ಒಗಟಿನ ಅರ್ಥವಿರ ಬಹುದೆಂದೂ ಇದೊಂದು "ವಿರೋಧಾಭಾಸ" ವರ್ಣನೆಯಾಗಿ ಮೇಲ್ಮಟ್ಟಕ್ಕೆ ಪ್ರಸಿದ್ಧ ವಿಷಯವಾಗಿ ವ್ಯಕ್ತಪಟ್ಟಿದೆ ಎಂಬ ಅರಿವಾಗಿ ಆಶ್ಚರ್ಯವಾಯಿತು.

ಈ ತೊಳಲಾಟದಲ್ಲಿ ನನ್ನ ಮನಸ್ಸು ಹೀಗೆ ಮಿಡುಕಿತು ; "ಗೋವರ್ಧನ" ಶಬ್ದಕ್ಕೂ, "ಪೂತನಿ" ಶಬ್ದಕ್ಕೂ ಬೇರೆ ಬೇರೆ ಅರ್ಥ ಹುಡುಕುವ ಪ್ರಯತ್ನ ಸಾಗಿತು. "ಗೋವರ್ಧನ" ಎಂಬುದೊಂದು ಬೆಟ್ಟ. ಗೋಕುಲದಲ್ಲಿ ಗೋವುಗಳಿಗೆ ಪುಷ್ಕಳ ಮೇವನ್ನು ವರ್ಧಿಸಿದ ಗಿರಿ ಅದು. ಅದನ್ನು ಬೆರಳಲ್ಲೆತ್ತಿ ಸತತ ವರ್ಷಧಾರೆಯಿಂದ ಆಶ್ರಿತರನ್ನು ರಕ್ಷಿಸಿದ ಮೇಲೆ ಶ್ರೀಕೃಷ್ಣನು ಗೋವರ್ಧನಧರನೂ, ಗೋವರ್ಧನಗಿರಿ ಧಾರಿಯೂ ಎನಿಸಿದನು. ಪ್ರಕೃತ ಉಪಮೆಯಲ್ಲಿ ಪೂತನಿಯನ್ನು ಕೊಂದ ಸಾಹಚರ್ಯ ದಿಂದ ಶಿಶು ಕೃಷ್ಣನಿಗೆ "ಗೋವರ್ಧನ" ಎಂದು ಅನ್ವಯಿಸಬೇಕಾಗಿದೆ. ಪೂತನಿಯ ನಿಗ್ರಹದಲ್ಲಿ ಅವನಿನ್ನೂ (ಏಳು ದಿನದ ಶಿಶುವೇನೊ) ಗೋವರ್ಧನನಲ್ಲ.

ಕವಿಯ ದೃಷ್ಟಿಯಲ್ಲಿ ಗೋವರ್ಧನ=ಸೂರ್ಯ, ಗೋ=ಕಿರಣ, ಕಿರಣ(ಗೋ) ಗಳನ್ನು ಪ್ರವರ್ಧಿಸುವವನು ಯಾವನೋ ಅವನು ಗೋವರ್ಧನ=ಭಾನು. (ಗೋ ಶಬ್ದಕ್ಕೆ ಅನೇಕಾರ್ಥಗಳಿವೆ). ಇನ್ನು ಪೂತನಿ ಶಬ್ದಕ್ಕೆ ಯಾವ ಕೋಶದಲ್ಲಿಯೂ ಬೇರೆ ಅರ್ಥ ದೊರೆಯದಿದ್ದರೂ ಪೂ+ತನಿ ಎಂದು ವಿಂಗಡಿಸಿ, ಪೂವೊಲ್ ತನಿ= ಪೂತನಿ ಎಂದು ಉಪಮಾನಪೂರ್ವಪದ ಕರ್ಮಧಾರಯ ಸಮಾಸ (ಗಜಗಮನೆ ಎಂಬುದರಂತೆ) ಮಾಡಿದಾಗ ಹೂವಿನಂತೆ ಮೃದುವಾಗಿ ತನಿಯೆರೆಯುವ (ತಂ ಪೆರೆ ಯುವ) ಒಂದು ಸುಂದರ ಸೃಷ್ಟಿಯಾಗಿ "ಗೋಚರಿಸುವ ಕವಿ ಕಲ್ಪನೆ ಬಹು ಮನೋಜ್ಞವಾಗಿದೆ ಪೂತನಿಗೆ ಇಲ್ಲಿ ತಾತ್ಪರ್ಯಾರ್ಥ ಮಂಜು, ಇಬ್ಬನಿ, ಕಾವಳ ; ಹೀಗೆ ಅರ್ಥೈಸಬೇಕು.

ಮುಂದೆ "ಮೊಲೆಗೊಟ್ಟವೊಲ್"- ಈ ಶಬ್ದಕ್ಕೆ ಈ ಪೂತನಿ ಸೂರ್ಯರಿಗೆ ಅನ್ವಯಿಸುವುದು ಹೀಗೆ ; ಮೊಲೆ ಹಾಲು=ಎದೆ ಹಾಲು ಇವೆರಡೂ ಒಂದೇ ವಸ್ತು ವಲ್ಲವೆ ! ಆದರೆ ಇಲ್ಲಿ ಮೊಲೆಗೊಟ್ಟ=ಎದೆಗೊಟ್ಟ (ಪ್ರತಿಭಟಿಸಿದ) ಎಂದು ಪ್ರಕೃತಾರ್ಥಕ್ಕೆ ಆಕಾಂಕ್ಷಿಸಿದಾಗ, ಪ್ರಕರಕಿರಣ ಪ್ರವರ್ಧಕನಾದ ಸೂರ್ಯನನ್ನು ಪ್ರತಿಭಟಿಸುವ ಮಂಜು-ಕಾವಳ-ಇಬ್ಬನಿಗಳಂತೆ ಕುಶನಿಗೆ ಎದೆಗೊಟ್ಟು ನಿಂತ ನಿಮ್ಮ ಸೈನ್ಯ ನಿಶ್ಶೇಷವಾಯ್ತು ಎಂಬುದಾಗಿದೆ. ಈ ವರ್ಣನೆಯು ಆಭಾಸಕ್ಕೆ, ವಿರೋಧಾಭಾಸಾಲಂಕಾರ ಲೇಪಿತ ಉಪಮಾಲಂಕಾರವಾಗಿದೆ ಎಂಬ ಚಮತ್ಕಾರ ನನಗೆ ತೃಪ್ತಿ ತಂದಿತು. ಅಲ್ಲಿ ಕುಶ-ಕೃಷ ಸೈನ್ಯ-ಪೂತನಿ, ಪೂತನಿ ಏಕವಚನ ವ್ಯಕ್ತಿ ಸೈನ್ಯ, ಜಾತ್ಯೇಕ ವಚನದ ಬಹು ವ್ಯಕ್ತಿ ಸಮೂಹವಾಗಿ ಅಸಮಾನತೆಯಾಯ್ತು ನಿಗೂಢಾರ್ಥ ದಲ್ಲಿ ಮಂಜು ಇಬ್ಬನಿ ಸಾಮೂಹಿಕ-ಸೈನ್ಯವೂ ಸಾಮೂಹಿಕ ಇದರಿಂದ ನಿಗೂಢಾರ್ಥದ ಉಪಮೆ ಪೂರ್ಣೋಪಮೆ ಇದು ಪ್ರಕಟ.

ಈ ಕವಿ ಇದೇ 18ನೇ ಸಂಧಿಯ 43-44 ಪದ್ಯಗಳಲ್ಲಿ "ತರಣಿಯಂ ಕಾವಳಂ ಮುಸುಕಲೇನಹುದು" ಎಂದು ದೂತನಿಂದಲೂ, ಭಾನುವಂ ಕಾವಳಂ ಮುತ್ತಲೇನಹು ದೆಂದೆನಲು ರಾಮನು ಅದೇ ಮಾತಿನಲ್ಲಿ ಏನೋ ಕಳಂಕ ಶಂಕಿಸಿ ಅದನ್ನು ತನ್ನಾಣೆ ತಿಳಿಸೆಂದು ಕೇಳುವ ಸೂಚನೆಗಳಿವೆ. ಇದೇ ಭಾವವನ್ನು ಪುನರುಕ್ತಿಸದೆ ಕವಿ ಮುಂದೆ ಒಗಟಾಗಿ ಸಂದರ್ಭಕ್ಕೆ ಅನುಗುಣವಾಗಿ ಮಗುಚಿ, ಗೋವರ್ಧನಂಗೆ (ಸೂರ್ಯನಿಗೆ) (ಮೊಲೆಗೊಟ್ಟ) ಎದುರಾದ (ಪೂತನಿಯು) (ಇಬ್ಬನಿ=ಕಾವಳದ) ವೊಲಾಯ್ತು ಎಂದು ಸುಂದರ ಸೃಷ್ಟಿಯ ಹೋಲಿಕೆಯಾಗಿಸಿದ್ದಾನೆಂದು ಪ್ರಾಜ್ಞರು ಮೆಚ್ಚಿದರೆ ಕವಿಯ ಮೇಲಿನ ಆಕ್ಷೇಪಣೆಯೂ ನಿವಾರಣೆಯಾದೀತೆಂಬುದು ನನ್ನ ನಿಲುವು. ಕಾವ್ಯಾಲಂಕಾರಪ್ರಿಯ ಲಕ್ಷ್ಮೀಶನೂ ಮುಕ್ತಾಪವಾದಿಯಾದಾನು.

ಶ್ಲೇಷಾಲಂಕಾರದಿಂದ ಕವಿಯ ಹಲವು ಪ್ರಯೋಗಗಳು ಹೀಗೆಯೇ ಸಮರ್ಥಿಕ

ವಾಗಿವೆ ; ಕುಶಾಸ್ತ್ರನಿಕರ (ಕುಶನ ಅಸ್ತ್ರ × ಕುಹಕ ಶಾಸ್ತ್ರನಿಕರ)/ಹಾರ + ವಲಯ × ಹಾರವ + ಲಯ/ಅಹಿ + ತತ್ವ × ಅ + ಹಿತತ್ವ/ಕಲಹಂಸ + ಮಯ × ಕಲಹಂ + ಸಮಯ/ಮಹಾ + ಅಶೋಕ × ಮಹಾ + ಶೋಕ ಹೀಗೆಯೇ ಪೂತನಿಯನೂ ಪೂ + ತನಿ ಎಂದು ವಿಂಗಡಿಸಿ ಅರ್ಥವನ್ನು ಆಕಾಂಕ್ಷಿಸಬೇಕು. ಹೀಗೆ ಹುಡುಕಲು, “ತರಣಿಕಾವಳ”, “ಭಾನುವಂ ಕಾವಳಂ” ಇವು ಪುಷ್ಟಿ ಕೊಟ್ಟುವು. ಸಾಮಾನ್ಯರು–ಕೃಷ್ಣ–ಪೂತನಿ ವೃತ್ತಾಂತದಿಂದಲೇ ಸವಿಯಲಿ, ಆದರೆ ವಿಮರ್ಶಕರು ಹೀಗೆ ಅಬಾಧಿತ ಅರ್ಥದಿಂದ ತೃಪ್ತಿ ಪಡಬಹುದೆನ್ನಿಸಿತು.

ಈ ಅರ್ಥವನ್ನು ಕೆಲವೆಡೆ ವಿಶದಪಡಿಸಿ ಒಪ್ಪಿಸಿದ್ದೇನೆ. ಇಂಥ ಮನೋಜ್ಞವಾದ ಹಾಗೂ ಒಗಟಾದ ಕಾವ್ಯರಂಜನೆಯು ಜೈಮಿನಿಭಾರತದ ವಾಚಕರಾದ ಭಾವುಕರಿಗೆ ಪ್ರಿಯವಾದರೆ ನನ್ನ ಪ್ರಯತ್ನ ಸುಖದಾಯಕ ಹಾಗೂ ಸಾರ್ಥಕ.

“ಕುಶನಿಗೆ ಎದೆಗೊಟ್ಟು ನಿಂತ ನಮ್ಮ ಸಕಲ ಸೈನ್ಯವೂ ಸೂರ್ಯನಿಗೆ ದಟ್ಟಿಸಿ ನಿಂತಿದ್ದ ಪೂವನಿಯ ಮಂಜಿನಂತೆ ನಿಶ್ಶೇಷವಾಯ್ತೆಂಬುದೇ ಲಕ್ಷ್ಮೀಶ ಕವಿಯ ನಿಗೂಢಾರ್ಥವು. ಇಂತು ಸಜ್ಜನ ವಿಧೇಯ.

ಎಂ. ಆರ್. ಅನಂತರಾಮಯ್ಯ

ಗ್ರಂಥಾವಲೋಕನ

(1) ಕುಮಾರವ್ಯಾಸ ಮತ್ತು ಜಾನಪದ

ಇದೀಗ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿಯು ಶಿಷ್ಟ ಸಾಹಿತ್ಯವನ್ನು 'ಜಾನಪದೀಯ ದೃಷ್ಟಿಯಿಂದ ಕಾಲ್ಪನಿಕವಾಗಿ ಅಧ್ಯಯನಕ್ಕೆ ಒಳಪಡಿಸುವ' ಪ್ರಯತ್ನ ಮಾಡಿದೆ. ನಮ್ಮ ಶಿಷ್ಟಸಾಹಿತ್ಯವು 'ಎಷ್ಟು ಮತ್ತು ಹೇಗೆ ಜಾನಪದ ಸಂವೇದನೆಯನ್ನು ಕಲಾಪೂರ್ಣವಾಗಿ ಪ್ರಕಟಿಸಿದೆ' ಎಂಬುದನ್ನು ಪರೀಕ್ಷಿಸುವುದು ಇಲ್ಲಿನ ಉದ್ದೇಶವಾಗಿದೆ. "ಶಿಷ್ಟಸಾಹಿತ್ಯ ಮತ್ತು ಜಾನಪದ ಸಂವೇದನೆ" ಎಂಬ ಹೆಸರಿನಲ್ಲಿ ಈ ಉದ್ದೇಶಕ್ಕಾಗಿ ಹೊರತರಲಾಗುತ್ತಿರುವ ಪುಸ್ತಕ ಮಾಲೆಯ ಅಧ್ವರ್ಯುಗಳು ಜಾನಪದ ತಜ್ಞರಾದ ಡಾ|| ಎಚ್. ಜೆ. ಲಕ್ಕಪ್ಪಗೌಡ ಮತ್ತು ಪ್ರಾ|| ಹಂಪನಾ ಅವರು ಎಂಬುದು ಈ ಯೋಜನೆಯ ಬಗೆಗೆ ಆಶಾವಾದಿಗಳಾಗಲು ಇಂಬು ನೀಡುತ್ತದೆ.

ವಾಸ್ತವವಾಗಿ, "ಶಿಷ್ಟ ಸಾಹಿತ್ಯ ಪ್ರಕಾರದ ತವ ನಿಧಿಯೊಳಗೆ ಕುಳಿತ ಜಾನಪದ ನಿಧಿಯನ್ನು ತನಿಯಾಗಿ ತೆಗೆದು ತೋರಿಸುವ" ಕೆಲಸ ಕತ್ತಿಯ ಮೇಲಿನ ನಡಿಗೆಯೇ ಸರಿ. ಜಾನಪದ ಮತ್ತು ಶಿಷ್ಟದ ನಡುವೆ ಇರಬಹುದಾದ ಗೆರೆ ಬಹಳ ಸೂಕ್ಷ್ಮವಾದುದು. ಆದ್ದರಿಂದಲೇ, ಜಾನಪದಾಂಶಗಳು ಪ್ರಾಚೀನ ಕಾವ್ಯದಲ್ಲಿ ಹೆಚ್ಚು ಸೇರಿವೆಯೋ ಆಧುನಿಕ ಸಾಹಿತ್ಯದಲ್ಲಿಯೋ ಎಂಬುದು ಭಿನ್ನಾಭಿಪ್ರಾಯವನ್ನು ತೋರಿಸುವುದಿಲ್ಲ, ಸಾಹಿತ್ಯ ನಿರ್ಮಿತಿಯ ತಾಂತ್ರಿಕ ಪರಿಣತಿಯತ್ತ ಬೆರಳು ಮಾಡುತ್ತದೆ.

ಪರಿಣಾಮದಲ್ಲಿ ಸಾಹಿತ್ಯವೆನ್ನುವುದು ಒಂದೇ. ಆದರೆ ಸಾಹಿತ್ಯಾಭ್ಯಾಸಿಗಳಿಗೆ ಕ್ರಮಬದ್ಧವಾದ ಅಧ್ಯಯನದ ಶಿಸ್ತು ದೊರೆಯುವುದು ಇಂಥ ಯತ್ನಗಳ ಒಂದು ಪ್ರಯೋಜನ. ಈ ಕೆಲಸವನ್ನು ಎಷ್ಟು ಅಚ್ಚುಕಟ್ಟಾಗಿ ಮಾಡಬಹುದೆಂಬುದಕ್ಕೆ

ಲೆ। ಎಂ. ಆರ್. ಲಕ್ಷ್ಮೀದೇವಿ, ಪ್ರಕಾಶಕರು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಲೆ 35—00 1997, ಪುಟ. 131, ಬೆಂಗಳೂರು-2

ಪ್ರೊ|| ಎಂ. ಆರ್. ಲಕ್ಷ್ಮೀದೇವಿಯವರು (ಗ್ರಂಥದಲ್ಲಿ ಅವರ ಪರಿಚಯ ಮಾಡಿದ್ದರೆ ಯುಕ್ತವಾಗಿರುತ್ತಿತ್ತು) ರಚಿಸಿರುವ "ಕುಮಾರವ್ಯಾಸ ಮತ್ತು ಜಾನಪದ" ಎಂಬ (ಈ ಮಾಲೆಯ ಐದನೆಯ) ಗ್ರಂಥವು ಒಂದು 'ಮಾದರಿ'ಯಾಗಿದೆ.

"ಕವಿ ಕುಮಾರವ್ಯಾಸನ ಕಾವ್ಯದ ಹಿರಿಮೆ" ಎಂಬ ಮೊದಲ ಪರಿಚ್ಛೇದ ದಲ್ಲಿಯೇ, ಲೇಖಕರು, ಈ ಗ್ರಂಥದ ನಿರ್ವಹಣೆಯಲ್ಲಿ ತಮಗಿರುವ ಪರಿಶ್ರಮ, ಸಿದ್ಧಿ ಗಳನ್ನು ಮೆರೆದಿದ್ದಾರೆ. ಇಲ್ಲಿ, ಕುಮಾರವ್ಯಾಸನ ಇತಿವೃತ್ತವನ್ನು ಕೊಡುತ್ತಲೇ, ಅವನು 'ಜಾನಪದ ಮಿಶ್ರ ಶಿಷ್ಟಕವಿ' ಎಂದೂ ಸಾಧಿಸಿ ತೋರಿಸಿದ್ದಾರೆ. ಇತಿ ವೃತ್ತವು ಕವಿಯ ಬಗೆಗಿನ ಇತ್ತೀಚಿನವರೆಗಿನ ಅಧ್ಯಯನಪೂರ್ಣ ಮಾಹಿತಿಯನ್ನು ನೀಡುತ್ತದೆ ; ಜೊತೆ ಜೊತೆಗೇ ಈ ಅಧ್ಯಯನವು ಯಾವ ಸೈದ್ಧಾಂತಿಕ ಪಾತಳಿಯಲ್ಲಿ ಸಾಗುತ್ತದೆ ಎಂಬುದನ್ನೂ ನಿಚ್ಚಳಗೊಳಿಸುತ್ತದೆ. ದ್ರೌಪದಿಯ 'ಶ್ರೀಮುಡಿ'ಯನ್ನು ವರ್ಣಿಸುವ ಸಂಸ್ಕೃತ ಭೂಯಿಷ್ಠತೆಯೂ, ದುಶ್ಶಾಸನನ ಗ್ರಾಮ್ಯ ವರ್ತನೆಯನ್ನು ಸೂಚಿಸುವ 'ಕೈಯಿಕ್ಕು' ಎಂಬ ಪ್ರಯೋಗವೂ ಹೇಗೆ ಪ್ರಮಾಣೋಚಿತವಾಗಿಯೂ ಪರಿಣಾಮೋಚಿತವಾಗಿಯೂ ಒಂದೇ ಪದ್ಯದಲ್ಲಿ ಸೇರುತ್ತದೆ ಎಂಬುದು ಭಾಷೆಗಳ 'ಮಧುರ ಮಿಶ್ರಣ'ವನ್ನಷ್ಟೇ ತೋರಿಸುವುದಿಲ್ಲ ; ಶಿಷ್ಟ ಜಾನಪದಗಳನ್ನು ಮೀರಿದ ಕವಿ ಕರ್ಮದತ್ತ ಬೆರಳು ಮಾಡುತ್ತದೆ. ಆದ್ದರಿಂದಲೇ ಡೋರ್‌ಸನ್ನಿನ ವ್ಯಾಖ್ಯೆಗೆ ಕುಮಾರವ್ಯಾಸ ಒಳಪಡುವುದಿಲ್ಲ. ಬದಲಿಗೆ ಕುಮಾರವ್ಯಾಸನ ಕಾವ್ಯಗರ್ಭದಿಂದಲೇ ಸಿದ್ಧಾಂತವೊಂದು ಹೊರಪಡುತ್ತದೆ. ಲೇಖಕರು ಅದನ್ನು ಜಾನಪದ ಮಿಶ್ರ ಶಿಷ್ಟ ಕಾವ್ಯ' ಎಂದಿದ್ದಾರೆ. ಈ ನಾಮಕರಣವೇ ಜಿಜ್ಞಾಸೆಗೆ ಒಳಗಾಗಬಹುದು, ಆದರೆ ಅದು ಸೂಚಿಸುವ 'ಪಾಕ'ವಲ್ಲ.

ಹೀಗೆ ಮೊದಲ ಪರಿಚ್ಛೇದವು ಕುಮಾರವ್ಯಾಸನ ಜಾನಪದ ಸತ್ವವನ್ನೂ ಅನಾ ವರಣಗೊಳಿಸುವುದರಿಂದಲೇ, "ಜಾನಪದ ಕಾವ್ಯ ಮತ್ತು ಶಿಷ್ಟ ಕಾವ್ಯ ಸ್ವರೂಪ"ದ ಚರ್ಚೆ ಅದರ ಹಿನ್ನೆಲೆಗೇ ಉಳಿದಿದ್ದರೆ ಉಚಿತವಾಗಿತ್ತೆನಿಸುತ್ತದೆ. ಬಾಗ್ಸ್‌ನ ವರ್ಗೀ ಕರಣದ ಹಿನ್ನೆಲೆಯಲ್ಲಿ ಮಾಡಿಕೊಂಡಿರುವ ಸೂಕ್ತ ಅಧ್ಯಯನ ವಿಭಾಗಗಳು ಕುಮಾರ ವ್ಯಾಸನ ಜಾನಪದ ನೆಲೆಯನ್ನು ನಿರ್ದಿಷ್ಟಗೊಳಿಸುತ್ತಾ ಸಾಗುತ್ತವೆ.

ಉದಾಹರಣೆಗೆ, ಜಾನಪದ ಕಥೆಗಳ ಆಶಯಗಳನ್ನು ಗುರುತಿಸುವ, ಅವುಗಳ ಪ್ರಾಚೀನತೆಯನ್ನು ಹುಡುಕುವ, ಅವುಗಳ ನೆಲೆಯನ್ನು ನಿರ್ಧರಿಸುವ, ಶಿಷ್ಟಕಥೆ ಯೊಂದಿಗೆ ಅವನ್ನು ತುಲನೆ ಮಾಡಿ ಪಾರಸ್ಪರಿಕತೆಯನ್ನು ಅಂದಾಜು ಮಾಡುವ.... ಇಂಥ ಎಲ್ಲೆಡೆ ಲೇಖಕರ ಓದಾಳಿತನ, ವಿಮರ್ಶಪ್ರಜ್ಞೆ ಎದ್ದು ಕಾಣುತ್ತದೆ. ಶಿಷ್ಟ ದಿಂದಲೇ ಜಾನಪದವು ಹುಟ್ಟಿಕೊಂಡಿರಬಹುದಾದ ಸಾಧ್ಯತೆ ಕಂಡಾಗ ಪ್ರಾಮಾಣಿಕ

ವಾಗಿ ಅದನ್ನು ಮುಂದಿಡುತ್ತಾರೆ. ಇಷ್ಟೆಲ್ಲಾ ಮಾಡುವಾಗಲೂ, ಕುಮಾರವ್ಯಾಸನು, "ಓದುಗರಿಗೆ, ಕೇಳುಗರಿಗೆ ಮೂಲ ಸಂಸ್ಕೃತದ ಕಾವ್ಯದ ರೂಪಾಂತರ ಎಂಬ ನೆನಪೇ ಬಾರದಷ್ಟು ಜಾನಪದೀಯ ಅಂಶಗಳನ್ನು ಕಥನ ಪ್ರಸಂಗಗಳಲ್ಲಿ ಅಳವಡಿಸಿದ್ದಾನೆ" ಎಂಬುದರತ್ತ ಬೆಟ್ಟು ಮಾಡುತ್ತಾ, ಶಿಷ್ಟಕಥಾ ಪರಂಪರೆ ಮತ್ತು ಜನಪದ ಕಥಾಪರಂಪರೆಗಳೆರಡೂ ಇಲ್ಲಿ ಸಮ್ಮಿಳಿತವಾಗಿರುವುದನ್ನು ಎತ್ತಿ ತೋರಿಸುತ್ತಾರೆ.

ಮುಂದಿನ ಎಲ್ಲ ಅಧ್ಯಾಯಗಳಲ್ಲೂ ಎದ್ದು ಕಾಣುವ ಅಂಶಗಳು ಇವೇ ಸಾರ ಸಂಗ್ರಹದ ಹಿನ್ನೆಲೆ, ವಸ್ತು ಸಂಗ್ರಹ ವಿಸ್ತಾರ, ವೈವಿಧ್ಯಪೂರ್ಣವೂ ಸೂಕ್ಷ್ಮವೂ ಆದ ವಿಭಜನೆ, ಆಳ ಪರಿಶೋಧನೆ, ಶಿಷ್ಟ–ಜಾನಪದಗಳ ಸಮ್ಮೇಳನದರ್ಶನ ಜೊತೆಗೆ ಇಲ್ಲಿನ ಅಸ್ಖಲಿತ ಭಾಷೆಯೂ ಸೇರಿ, ವಿಮರ್ಶೆಗೆ ಕಾವ್ಯದ ಮೆರಗು ಬಂದು, ಗ್ರಂಥವು ನಿರರ್ಗಳವಾಗಿ ಓದಿಸಿಕೊಳ್ಳುತ್ತದೆ.

ಕುಮಾರವ್ಯಾಸನಲ್ಲಿ ಭಾಷಾ ಜ್ಞಾನ ಲೋಕಜ್ಞಾನವು ಎಷ್ಟು ಆಳವಾಗಿಯೂ ವ್ಯಾಪಕವಾಗಿಯೂ ಇದೆ ಎಂಬುದನ್ನು ಪ್ರಕಟಿಸಲು ಲೇಖಕರು ಗ್ರಂಥದುದ್ದಕ್ಕೂ ಆಲಸ್ಯವಿಲ್ಲದೆ ಶ್ರಮಿಸಿದ್ದಾರೆ. ಅಲ್ಲಿಯೇ ಅವನ ಶಾಸ್ತ್ರಜ್ಞಾನದ ಸೂಚನೆಯೂ ಆಗುತ್ತದೆ. "ಆದಿ ಪರ್ವದಲ್ಲಿ (೨೦–೫೨, ೫೩) ಎರಡು ಪದ್ಯಗಳಲ್ಲಿ ೩೮ ಹಕ್ಕಿಗಳ ಹೆಸರುಗಳನ್ನು ಬಳಸಿದ್ದಾನೆ. ಕೌರವರು ಪಾಂಡವರು ಆಡಿದ ೧೮ ಮಕ್ಕಳಾಟದ ಹೆಸರುಗಳನ್ನು ಹೇಳಿದ್ದಾನೆ" ಇಂಥ ನಿದರ್ಶನಗಳು ಬೆರಗು ಹುಟ್ಟಿಸುತ್ತವೆ. ಈ ಗ್ರಂಥದಲ್ಲಿ ಅಕ್ಷರಶಃ ಅಂಥ ನೂರಾರು ನಿದರ್ಶನಗಳನ್ನು ಕಾಣಬಹುದಾಗಿದೆ. ಕುಮಾರವ್ಯಾಸನು ಯಾವ ಗೋಡೆಗಳನ್ನೂ ಕಟ್ಟಿಕೊಳ್ಳದೆ ತನ್ನ ಸಮಸ್ತ ಪ್ರತಿಭಾಶಕ್ತಿಯನ್ನೂ ಬಳಸಿ ಸಮಗ್ರ ಜೀವನದ ರಸಪುಷ್ಟಿಯನ್ನು ನಿರ್ಮಿಸಿದ ಮಹಾಕವಿ. ಆ ಮಹಾ ಕಾವ್ಯದ ಅನಾಟಮಿ, ಫಿಸಿಯಾಲಜಿಗಳನ್ನು ನೋಡ ಹೊರಟವರು ಪ್ರೊ|| ಎಂ. ಆರ್. ಲಕ್ಷ್ಮೀದೇವಿಯವರು ಅದಕ್ಕಾಗಿ ಈ ಕಾವ್ಯವನ್ನು ಜಾಲಾಡಿದ್ದಾರೆ. ಅವರು ಪಟ್ಟಿರುವ "ಶ್ರಮ, ಉಳಿಸಿಕೊಂಡ ಶ್ರದ್ಧೆ ಗ್ರಂಥದ ಹೆಜ್ಜೆ ಹೆಜ್ಜೆಯಲ್ಲೂ ನಿಚ್ಚಳವಾಗುತ್ತದೆ. ಶಿಷ್ಟ ಮತ್ತು ಜಾನಪದ ಸಮನ್ವಯ ಕಾವ್ಯದಲ್ಲಿ ಹೀಗಿರಬೇಕು ಎಂಬುದಕ್ಕೆ ಆದರ್ಶ ಕಾವ್ಯ ನಾರಣಪ್ಪನ ಭಾರತವಾಗಿದೆ" ಎಂದು ಸಾಧಾರವಾಗಿ ಸಾಧಿಸಿ ಅವರು ತಮ ಕೆಲಸವನ್ನು ಯಶಸ್ವಿಯಾಗಿ ಮುಗಿಸಿದ್ದಾರೆ. ಈ ಗ್ರಂಥವನ್ನೋದಿದವರಿಗೆ ಅದಕ್ಕೂ ಮಿಗಿಲಾದುದೂ ಕುಮಾರವ್ಯಾಸ ಪ್ರಪಂಚದಲ್ಲಿ ಕಾಣ ದೊರೆಯುತ್ತದೆ. ಲೇಖಕರ ಶ್ರಮ ಸಾರ್ಥಕವಾಗುವುದೆಂದರೆ ಇದೇ ತಾನೆ !

ಡಾ|| ಬಿ. ಎಸ್. ಪ್ರಣತಾರ್ತಿಹರನ್

(2) ಅವಮಾವಸು (ಮಕ್ಕಳ ನಾಟಕ)

ಕನ್ನಡದಲ್ಲಿ ಕಾವ್ಯ ಕ್ಷೇತ್ರದಲ್ಲಿ ವಿವಿಧ ರೀತಿಯ ಕಾವ್ಯ ಪ್ರಕಾರಗಳು ಬಂದಂತೆ ಮಕ್ಕಳ ನಾಟಕ ಕ್ಷೇತ್ರದಲ್ಲಿ ಪ್ರಗತಿಯ ಹಂತಗಳು ಕಾಣಿಸಿಕೊಂಡಿಲ್ಲ. ಅಷ್ಟೇಕೆ ಇತರ ಸಾಹಿತ್ಯ ಪ್ರಕಾರಗಳಲ್ಲಿ ಕತೆ, ಕಾದಂಬರಿ, ವಿಮರ್ಶೆಗಳನ್ನು ಬಿಟ್ಟರೆ ಉಳಿದ ಜೀವನ ಚರಿತ್ರೆ ಹಾಗೂ ಪ್ರಬಂಧಗಳಲ್ಲಿಯೂ ನವೀನ ಪಂಥ-ಪ್ರಕಾರಗಳು ಕಾಣಿಸಿ ಕೊಳ್ಳಲಿಲ್ಲ. ನವೋದಯ, ನವ್ಯ, ದಲಿತ, ಬಂಡಾಯ, ಪ್ರಗತಿಶೀಲ ಇತ್ಯಾದಿ ಹಂತ ಗಳು ಕಾವ್ಯದಲ್ಲಿ ಕಂಡು ಬಂದಂತೆ ಮಕ್ಕಳ ಸಾಹಿತ್ಯ ಪ್ರಕಾರದಲ್ಲಿ ಕಾಣುವುದಿಲ್ಲ. ಮಕ್ಕಳ ನಾಟಕ ಎಂದರೆ ಐತಿಹಾಸಿಕ, ಪೌರಾಣಿಕ, ಸಾಮಾಜಿಕ ಅಷ್ಟೆ. ಅದು ಆದರ್ಶ ಗಳ ಹಿನ್ನೆಲೆಯಲ್ಲಿ ಸಾಂಪ್ರದಾಯಿಕ ನಿರೂಪಣೆಯಲ್ಲಿ ಗ್ರಂಥಸ್ಥ ಭಾಷೆಯಲ್ಲಿ ರಚನೆ ಆದ ನಾಟಕಗಳೇ ಹೆಚ್ಚು. ಇತ್ತೀಚಿನ ಮಕ್ಕಳ ನಾಟಕಗಳಲ್ಲಿ ಸಾಹಿತ್ಯಕ್ಕಿಂತ ರಂಗಮಂದಿರ ಅಭಿನಯಗಳಲ್ಲಿ ತಾಂತ್ರಿಕ ಕುಶಲತೆ ಹೆಚ್ಚಿರುವುದು ಗಮನಾರ್ಹವಾಗಿ ಕಾಣುತ್ತದೆ. ಗೀತನಾಟಕಗಳ ಸಂಖ್ಯೆಯೂ ಅದರೊಡನೇ ಹೆಚ್ಚಾಗಿ ಧ್ರುವ, ಪ್ರಹ್ಲಾದ ಅಭಿಮನ್ಯು ಎಂಬ ಪೌರಾಣಿಕ ವ್ಯಕ್ತಿಗಳ ನಾಟಕಗಳೇ ಕನ್ನಡದಲ್ಲಿ ಹೆಚ್ಚು ಈ ಸಾಲಿಗೇ ಸೇರಿದ್ದು ಎಂ. ಜಿ. ವೆಂ. ಅವರ ಅಮಾವಸು ನಾಟಕ. ನಾಟಕದ ಲೇಖಕರಾದ ಎಂ. ಜಿ. ವೆಂಕಟೇಶಯ್ಯನವರು (ಜನನ 19-1-1900 ಮರಣ 4-12-1984) ಉನ್ನತ ವಿದ್ಯಾಭ್ಯಾಸ ಪಡೆದ ನವೋದಯ ಸಾಹಿತಿಗಳಲ್ಲಿ ಒಬ್ಬರು.

ಚಂದ್ರವಂಶದ ಪುರೂರವಸ್ ರಾಜನ ಮಗ ಅಮಾವಸು ಅಹಿಂಸೆಯೇ ಪರಮ ಧರ್ಮವೆಂದು ಸಾರಿದ ಮತ್ತು ಹಣದಾಸೆ ಇಲ್ಲದಿದ್ದಲ್ಲಿ ಅಹಿಂಸೆ ಆಚರಣೆಯಲ್ಲಿ ಸಾಧ್ಯ ಎಂದು ಸಾರಿದ ದೊರೆ. ಆತನನ್ನು ಕುಬೇರ ಐಶ್ವರ್ಯದಾಸೆ ತೋರಿಸಿ ತನ್ನ ವಶ ಮಾಡಿ ಕೊಳ್ಳಲು ಯತ್ನಿಸಿ ವಿಫಲನಾದ ಕಥೆ ಈ ನಾಟಕದ ವಸ್ತು.

ದೇವಲೋಕದ ಮತ್ತು ಭೂಲೋಕದ ದೃಶ್ಯಗಳು ಇಲ್ಲಿವೆ. ಮೂರು ಪರದೆ ಗಳೂ ಮೂರು ಚಮ್ಕಿ ಡ್ರೆಸ್ಸುಗಳೂ ಈ ನಾಟಕದ ಅಭಿನಯಕ್ಕೆ ಸಾಕು, ದೇವೇಂದ್ರನ ಸಭೆಯನ್ನು ಆಡುವವರ ಸಂಪತ್ತಿಗೆ ಅನುಕೂಲವಾಗಿ ರಚಿಸಿಕೊಳ್ಳಬಹುದು ಎಂದು ಲೇಖಕರು ಹೇಳಿದ್ದಾರೆ. 1956ರಲ್ಲಿ ರಚಿತವಾಗಿ ವಿದ್ಯಾರ್ಥಿಗಳು ಅಭಿನಯಿಸಿದ ಈ ನಾಟಕದಲ್ಲಿ ಜನಪ್ರಿಯ ಜನಪದ ಕಥೆಯೊಂದು ಪ್ರಮುಖವಾಗಿ ಕಾಣಿಸಿಕೊಂಡಿದೆ.

ಲೇ : ಎಂ. ಜಿ. ವೆಂಕಟೇಶಯ್ಯ ಪ್ರ : ದಿನಕರ ಪ್ರಕಾಶನ, 7ನೇ ಬ್ಲಾಕ್, 2ನೇ ಫೇಸ್ ಬನಶಂಕರಿ 3ನೇ ಹಂತ, ಬೆಂಗಳೂರು-560 085 ಬೆಲೆ : 12-00, ಪುಟ 40, 1998

ಈ ಕಥೆ ನಾಟಕದಲ್ಲಿ ಲೇಖಕರು ಸೇರಿಸಿದ್ದೋ ಅಥವಾ ಪುರಾಣದಲ್ಲಿದೆಯೋ ತಿಳಿಯದು. ಆದರೆ ನಾಟಕಕ್ಕೆ ಈ ಕಥೆ ಸೊಗಸು ತಂದಿರುವುದು ನಿಜ. ಸರಳವಾದ ಸಂಭಾಷಣೆಯಿಂದ ಕೂಡಿರುವ ಈ ನಾಟಕ ಮಕ್ಕಳ ಮನವನ್ನು ರಂಜಿಸಬಲ್ಲದು. ಹಳೆಯ ತಲೆಮಾರಿನ ಪೌರಾಣಿಕ ಮಕ್ಕಳ ನಾಟಕದ ಸ್ವರೂಪ ಪರಿಚಯಕ್ಕೆ ಇದೊಂದು ಪ್ರಾತಿನಿಧಿಕ ಕೃತಿಯಾಗಿದೆ.

ಈ ಗ್ರಂಥ ಪ್ರಕಟನೆಯಲ್ಲಿ ವಿಶೇಷವಾದ ಸಂಗತಿಯೆಂದರೆ ಈ ನಾಟಕದ ಲೇಖಕರಾದ ಎಂ. ಜಿ. ವೆಂಕಟೇಶಯ್ಯನವರ ಬದುಕು-ಬರಹಗಳನ್ನು ಕುರಿತು ಪ್ರೊ|| ಡಿ. ಲಿಂಗಯ್ಯನವರು ಶ್ರಮಪಟ್ಟು ಸಿದ್ಧಪಡಿಸಿರುವ ಪರಿಚಯ ಲೇಖನ. ಅನುಬಂಧವಾಗಿ ಪ್ರಕಟವಾಗಿರುವುದು.

ಮೊತ್ತ ಮೊದಲ ಬಾರಿಗೆ ಹಳೆಯ ತಲೆಮಾರಿನ ಮರೆತು ಹೋದ ಮಹಾನುಭಾವರಲ್ಲಿ ಒಬ್ಬರಾದ ಎಂ. ಜಿ. ವೆಂಕಟೇಶಯ್ಯನವರ ಜೀವನದ ಬಗ್ಗೆ ಹಲವಾರು ಮಾಹಿತಿಗಳನ್ನು ಅವರ (ಅ) ಸಮಗ್ರ ಕೃತಿ ಪರಿಚಯವನ್ನು ಈ ಲೇಖನದಲ್ಲಿ ಡಿ.ಲಿಂ. ಅವರು ನೀಡಿದ್ದಾರೆ. ಆಧುನಿಕ ಸಾಹಿತ್ಯ ಚರಿತ್ರೆಗೆ ಇದೊಂದು ಉಪಯುಕ್ತ ಸೇರ್ಪಡೆ. ಇತ್ತೀಚೆಗೆ ಡಾ|| ಎಂ. ಚಿದಾನಂದಮೂರ್ತಿ ಅವರು ನನ್ನೊಡನೆ ಚರ್ಚಿಸುತ್ತಿರುವಾಗ ಒಂದು ಮಾತು ಹೇಳಿದರು. “ಈಗಾಗಲೇ ನಮ್ಮಲ್ಲಿ ಪ್ರಕಟವಾಗಿರುವ ಸಂಗತಿಗಳನ್ನೇ ಚರ್ವಿತಚರ್ವಣವಾಗಿ ಸ್ವಲ್ಪ ರೂಪ ಬದಲಿಗೆ ಇಲ್ಲವೇ ಧ್ವನಿ-ಧಾಟಿ ಬಳಸಿ ಮತ್ತು ಶಬ್ದ ವಾಕ್ಯಗಳನ್ನು ಬದಲಿಸಿ ಭಾಷಣ ಮಾಡುವುದಕ್ಕಿಂತ ಕೃತಿಗಳನ್ನು ಪ್ರಕಟಿಸುವುದಕ್ಕಿಂತ ಅಪ್ರಕಟಿತ ಸಂಗತಿ, ಅಪ್ರಕಟಿತ ಸಾಹಿತ್ಯ ಪ್ರಕಟಿಸುವುದರಿಂದ ಅಥವಾ ಆ ಬಗ್ಗೆ ಉಪನ್ಯಾಸ ನೀಡುವುದರಿಂದ ಕನ್ನಡ ಸಾಹಿತ್ಯದ ಬೆಳವಣಿಗೆಗೆ ಒಳ್ಳೆಯ ಕಾಣಿಕೆ ಸಿಗುತ್ತದೆ” ಎಂದರು. ಈ ದೃಷ್ಟಿಯಲ್ಲಿ ಎಂ. ಜಿ. ವೆಂಕಟೇಶಯ್ಯನವರ ಅಪ್ರಕಟಿತ ನಾಟಕವನ್ನು ಪ್ರಕಟಿಸುವುದರ ಜತೆಗೆ, ಇದುವರೆಗೂ ಎಲ್ಲಿಯೂ ಸಿಗದ ಲೇಖಕರ ಜೀವನ ಕೃತಿಗಳ ಮಾಹಿತಿಯನ್ನು ಈ ಕೃತಿಯಲ್ಲಿ ಪ್ರೊ|| ಡಿ. ಲಿಂಗಯ್ಯನವರು ಕನ್ನಡಿಗರಿಗೆ ನೀಡಿ ಉಪಯುಕ್ತ ಕಾರ್ಯ ಮಾಡಿದ್ದಾರೆ.

ಜಿ. ಅಶ್ವತ್ಥನಾರಾಯಣ

(3) ಕಾವ್ಯನಾಮಗಳು ಮತ್ತು ಇತರ ಲೇಖನಗಳು

ಟಿ. ವಿ. ವೆಂಕಟರಮಣಯ್ಯನವರು ಕನ್ನಡದಲ್ಲಿ ಸೂಚೀ ಸಾಹಿತ್ಯ ಮತ್ತು ಪರಾಮರ್ಶನ ಸಾಹಿತ್ಯದ ಕ್ಷೇತ್ರಕ್ಕೆ ಅನುಪಮ ಕೊಡುಗೆಗಳನ್ನಿತ್ತವರು. ಹಾಸ್ಯ ಸಾಹಿತ್ಯ, ಪ್ರಬಂಧ ಸಾಹಿತ್ಯ, ಸೂಕ್ತಿ ಸಾಹಿತ್ಯ, ಕಥಾ ಸಾಹಿತ್ಯ ಕ್ಷೇತ್ರಗಳಲ್ಲೂ ಕೆಲಸ ಮಾಡಿದವರು.

ಪ್ರಸ್ತುತ ಗ್ರಂಥ ಇವರ 6 ಲೇಖನಗಳ ಸಂಗ್ರಹವಾಗಿದೆ. ಕಾವ್ಯನಾಮಗಳು-ಗುಪ್ತನಾಮಗಳು ಏಕೆ ? ಹೇಗೆ ? ಕನ್ನಡ ವಿನೋದ ಸಾಹಿತ್ಯ ಮತ್ತು ಪತ್ರಿಕೆಗಳು, ಆಕರ ಸಾಹಿತ್ಯ ವಿಶ್ವಕೋಶ, ಕನ್ನಡನುಡಿ ಈ 4 ಲೇಖನಗಳಲ್ಲಿ ಈಗಾಗಲೇ ಬೇರೆ ಕಡೆ ಗ್ರಂಥ–ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ಇಲ್ಲಿ ಸಂಗ್ರಹಿತವಾಗಿದೆ. ಹಾಸ್ಯ ಸಾಹಿತಿಗಳು ಮತ್ತು ಅವರ ಬರಹಗಳು ಹಾಗೂ ವಿನೋದ ಸಾಹಿತ್ಯ ಸಹಾಯಕ ಸೂಚಿ ಈ ಎರಡು ಲೇಖನಗಳು ಮೊದಲ ಬಾರಿಗೆ ಈ ಸಂಗ್ರಹದಲ್ಲಿ ಪ್ರಕಟವಾಗುತ್ತಿವೆ.

ಕಾವ್ಯನಾಮಗಳು–ಗುಪ್ತ ನಾಮಗಳು–ಏಕೆ ? ಹೇಗೆ ? ಎಂಬ ಲೇಖನದಲ್ಲಿ ಐತಿಹಾಸಿಕವಾಗಿ ಕಾವ್ಯನಾಮ (ಶಾಪ್ತವಾಮಿ) ಪದ್ಧತಿ ಹೇಗೆ ಬೆಳೆದು ಬಂದಿದೆ ಎಂಬುದನ್ನು ವಿವರಿಸುತ್ತಾರೆ. ಈ ಲೇಖನವನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ವಿಸ್ತರಿಸಲು ಅವಕಾಶವಿದೆ. ಉದಾ : ವಚನ ಸಾಹಿತ್ಯದ ಹಾಗೂ ದಾಸ ಸಾಹಿತ್ಯದ ಅಂಕಿತಗಳೂ ಕಾವ್ಯನಾಮ–ಗುಪ್ತನಾಮಗಳ ವರ್ಗಕ್ಕೇ ಸೇರುತ್ತವೆ ಅವುಗಳ ಪ್ರಸ್ತಾವ ಇಲ್ಲಿಲ್ಲ.

ಕನ್ನಡ ವಿನೋದ ಸಾಹಿತ್ಯ ಮತ್ತು ಪತ್ರಿಕೆಗಳು, ಲೇಖನ ಪತ್ರಿಕಾ ಸಾಹಿತ್ಯವನ್ನು ಗಮನಿಸಿ ಸಮಗ್ರ ನೋಟ ನೀಡುವ ಪ್ರಯತ್ನ ಮಾಡಿದ್ದರೆ ಹಾಸ್ಯ ಸಾಹಿತಿಗಳು ಹಾಗೂ ಅವರ ಬರಹಗಳು ಮತ್ತು ವಿನೋದ ಸಾಹಿತ್ಯ–ಸಹಾಯಕ ಸೂಚಿ, ಪೂರಕ ಬರಹಗಳಾಗಿವೆ. ಹಾಸ್ಯ ಸಾಹಿತ್ಯ ಇತಿಹಾಸಕ್ಕೆ ಈ ಲೇಖನಗಳು ಒಳ್ಳೆಯ ಆಕರಗಳಾಗಿವೆ.

ಆಕರ ಸಾಹಿತ್ಯ ವಿಶ್ವಕೋಶದಲ್ಲಿ ಕನ್ನಡದ ವಿಶ್ವಕೋಶಗಳ ಸಂಕ್ಷಿಪ್ತಾವಲೋಕನವಿದೆ. ಈಚೆಗೆ ಹಲವಾರು ವಿಶ್ವಕೋಶಗಳು ಬಂದಿದ್ದು ಅವು ಇಲ್ಲಿ ಪ್ರಸ್ತಾವಗೊಳ್ಳದಿರುವುದರಿಂದ ಓದುಗರಿಗೆ ಅಪೂರ್ಣವೆನಿಸುತ್ತದೆ.

ಲೇ : ಟಿ. ವಿ. ವೆಂಕಟರಮಣಯ್ಯ, ಪುಟ ೬೮, ಬೆಲೆ 20 ಪ್ರ : ಇ.ಡಬ್ಲ್ಯು.ಎಸ್. 218 ಕೆ.ಎಚ್.ಬಿ. ಕಾಲೋನಿ, ಬಸವೇಶ್ವರನಗರ, ಬೆಂಗಳೂರು–79.

'ಕನ್ನಡನುಡಿ' ಕನ್ನಡ ನುಡಿಯ ಇತಿಹಾಸವನ್ನೂ, ಅದರ ವೈಶಿಷ್ಟ್ಯಗಳನ್ನೂ ತಿಳಿಸುವ ಲೇಖನವಾಗಿದೆ.

ಇಲ್ಲಿರುವ ಎಲ್ಲ ಲೇಖನಗಳನ್ನು ಕಂಡಾಗ ವಿಶೇಷವಾಗಿ ವಿಪುಲ ಮಾಹಿತಿಯನ್ನು ಒಳಗೊಂಡಿರುವುದು ಪರಿಚಯಾತ್ಮಕವಾಗಿರುವುದು ಕಂಡು ಬರುತ್ತದೆ. ವಿಮರ್ಶಾತ್ಮಕ ಅಂಶಗಳು ಹೆಚ್ಚಾಗಿಲ್ಲ. ಆದರೂ ವಿಪುಲವಾದ ಉಪಯುಕ್ತ ಮಾಹಿತಿಗಳ ಉತ್ತಮ ಆಕರ ಗ್ರಂಥವಾಗಿದೆ ಈ ಗ್ರಂಥ. ಸಾಹಿತ್ಯಾಭ್ಯಾಸಿಗಳು ಗಮನಿಸಲೇಬೇಕಾದ ಗ್ರಂಥವಾಗಿದೆ.

ಲೇಖಕರು ಕನ್ನಡ ಸಾಹಿತ್ಯದ ಇತರಪ್ರಕಾರಗಳಲ್ಲೂ ಈ ಬಗೆಯ ವಿವರಣಾತ್ಮಕ ಹಾಗೂ ವಿಮರ್ಶಾತ್ಮಕ ಬರಹಗಳನ್ನು ರಚಿಸಿದರೆ ಕನ್ನಡಕ್ಕೆ ಒಳ್ಳೆಯ ಕೊಡುಗೆ ಆಗುತ್ತದೆ.

ಜಿ. ಅಶ್ವತ್ಥನಾರಾಯಣ

(4) ಕನ್ನಡಶಕ್ತಿ

ಕರ್ನಾಟಕದ ಗತ ಇತಿಹಾಸವನ್ನು ಅವಲೋಕಿಸಿದರೆ, ಆ ನಾಡಿನ ನಾಡ ಭಾಷೆಯಾದ ಕನ್ನಡಕ್ಕೆ ಹೋರಾಡುವುದು ಅತಿ ಪ್ರಾಚೀನ ಕಾಲದಿಂದಲೂ ಅನಿವಾರ್ಯ ಸಂಗತಿಯಾಗಿ ಪರಿಣಮಿಸಿರುವುದು ಕಂಡುಬರುತ್ತದೆ. ಮೊದಲು ಪ್ರಾಕೃತ, ಅನಂತರ ಸಂಸ್ಕೃತ, ಮಧ್ಯ ಕಾಲದಿಂದೀಚೆಗೆ ಪಾರ್ಶಿ, ಮರಾಠಿ, ಇಂಗ್ಲಿಷ್ ಭಾಷಿಕರ ಪ್ರಭಾವ ವಲಯಕ್ಕೆ ಸಿಕ್ಕಿಕೊಳ್ಳುತ್ತಲೇ ತನ್ನ ಮೂಲ ನೆಲೆ-ಹಿನ್ನೆಲೆಗಳನ್ನು ಮಸುಕು ಮಾಡಿಕೊಳ್ಳುತ್ತಾ ವಿಕೃತವೋ ಪರಿಷ್ಕೃತವೋ ಆದ ನೆಲೆಗಳಿಗೆ ಸಾಗಿರುವುದು ಸತ್ಯ ಸಂಗತಿ. ಆದರೆ ಇತ್ತೀಚಿನ ವರ್ಷಗಳಲ್ಲಿ ಭಾಷೆ, ಜನ, ದೇಶ–ಈ ಮೂರಕ್ಕೂ ಕಂಟಕಗಳು ಉಂಟಾಗಿ ಅವುಗಳ ಅಸ್ತಿತ್ವಕ್ಕೇ ಕೊಡಲಿ ಪೆಟ್ಟು ಬೀಳತೊಡಗಿರುವ ಅಂಶ ಚಿಂತಿಸುವಂತಾಗಿದೆ. ಈ ಹಿನ್ನೆಲೆಯಲ್ಲಿ ಅರುವತ್ತರ ದಶಕದಲ್ಲಿ ಅನಕೃ, ಮ. ರಾಮಮೂರ್ತಿ ಮುಂತಾದವರು ಆರಂಭ ಮಾಡಿದ ಕನ್ನಡ ಚಳವಳಿ ಕನ್ನಡಿಗರಲ್ಲಿ ತುಸು ಜಾಗೃತಿಯನ್ನುಂಟುಮಾಡಿತಾದರೂ, ಕನ್ನಡ, ಕನ್ನಡಿಗ, ಕರ್ನಾಟಕದ ಸ್ಥಿತಿಯು ಭದ್ರವಾಗಲಿಲ್ಲ. ಇಂತಹ ಸಂದರ್ಭದಲ್ಲಿ ಕರ್ನಾಟಕದ

ಲೇಖಕ : ರಾ.ನಂ. ಚಂದ್ರಶೇಖರ್. ಪ್ರಕಾಶಕರು : ಕನ್ನಡ ಶಕ್ತಿ ಕೇಂದ್ರ, ವಿಜಯನಗರ 2ನೇ ಹಂತ, ಬೆಂಗಳೂರು-560 040 ಪುಟ : 104 ಮೊದಲ ಮುದ್ರಣ : 1998, ಬೆಲೆ : ಇಪ್ಪತ್ತು ರೂಪಾಯಿಗಳು

ಕನ್ನಡಿಗರ ಆಶಾದೀಪವಾಗಿ, ಕ್ರಿಯಾಚೇತನವಾಗಿ ಪ್ರಸಿದ್ಧ ಸಂಶೋಧಕರಾದ ಡಾ|| ಎಂ. ಚಿದಾನಂದ ಮೂರ್ತಿ ಅವರ ಮುಖಂಡತ್ವದಲ್ಲಿ ಕನ್ನಡ ಶಕ್ತಿಕೇಂದ್ರ 1988ರಲ್ಲಿ ಅಸ್ತಿತ್ವಕ್ಕೆ ಬಂದಿತು. ಅದು ವಾಸ್ತವವಾಗಿ ಗೋಕಾಕ್ ಚಳವಳಿಯ ಕೂಸು ಎಂಬುದನ್ನು ಮರೆಯುವಂತಿಲ್ಲ. ಆ ಸಂಸ್ಥೆ ಇದೀಗತಾನೆ 10 ವರ್ಷಗಳನ್ನು ಮುಗಿಸಿ ಮುನ್ನಡೆದಿದೆ. ಆ ಸಂಸ್ಥೆಯು 10 ವರ್ಷಗಳ, ತನ್ನ ಕಾರ್ಯ ಚಟುವಟಿಕೆಗಳ, ಸಿದ್ಧಿ ಸಾಧನಗಳ, ಆಗು-ಹೋಗುಗಳ ದಾಖಲೆಯೇ 'ಕನ್ನಡಶಕ್ತಿ' ಪುಸ್ತಿಕೆ.

ಈ ಕೃತಿಯಲ್ಲಿ 'ಇಟ್ಟ ಹೆಜ್ಜೆಗಳು', 'ಚಳವಳಿಯ ಚೇತನ' ಎಂಬ ಎರಡು ಭಾಗಗಳಿವೆ. ಇಟ್ಟ ಹೆಜ್ಜೆಗಳಲ್ಲಿ ಕನ್ನಡ ಶಕ್ತಿ ಕೇಂದ್ರದ ಉದಯದೊಂದಿಗೆ–ಅದು ಕನ್ನಡಿಗರ ಉದ್ಯೋಗ, ಕನ್ನಡ ಕಡ್ಡಾಯ ಶಿಕ್ಷಣ, ದೂರದರ್ಶನದಲ್ಲಿ ಕನ್ನಡ, ಕರ್ನಾಟಕಕ್ಕೆ ನೈರುತ್ಯ ರೈಲ್ವೆ ವಲಯ, ಕಾವೇರಿ–ಕೃಷ್ಣಾ ನದಿ ನೀರು ಮುಂತಾದವುಗಳಿಗೆ ಸಂಬಂಧಿಸಿದಂತೆ ಶಕ್ತಿ ಕೇಂದ್ರ ಕೈಗೊಂಡ ಕ್ರಮ ಮತ್ತು ಹೋರಾಟ, ಪಡೆದ ಸಿದ್ಧಿ ಮುಂತಾದವುಗಳನ್ನು ಸಕ್ರಮವಾಗಿ ದಾಖಲಿಸುವ ಕಾರ್ಯದೊಂದಿಗೆ ಕನ್ನಡ ಕಾರ್ಯಕರ್ತರನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಮಹಿಳಾ ಘಟಕದ ಸ್ಥಾಪನೆಯೂ ಒಳಗೊಂಡಂತೆ ಅನೇಕ ಮಹಾಧಿವೇಶನ, ವಿಚಾರ ಸಂಕಿರಣ, ಸಮಾವೇಶ ಮತ್ತು ವಾರ್ಷಿಕೋತ್ಸವ ಮುಂತಾದವುಗಳನ್ನು ಏರ್ಪಡಿಸಿದ್ದ ಬಗ್ಗೆ ಹಾಗೂ ಕರ್ನಾಟಕದ ಬಗೆಗಿನ ಅರಿವಿಗೆ ಪೂರಕವಾಗುವಂಥ ಹಲವು ಕೈಪಿಡಿ/ಪರಿಚಯ ಪುಸ್ತಿಕೆಗಳನ್ನು ಹೊರತಂದಿರುವ ವಿವರಗಳನ್ನೂ ದಾಖಲಿಸಲಾಗಿದೆ. ಈ ಭಾಗದ ವಿವರಗಳು ಕರ್ನಾಟಕದ ಇತ್ತೀಚಿನ ಹೋರಾಟಗಳಲ್ಲಿ ಕನ್ನಡ ಶಕ್ತಿಕೇಂದ್ರದ ಪಾತ್ರವನ್ನು ಪರಿಚಯಿಸುವಲ್ಲಿ ಯಶಸ್ವಿಯಾಗಿದೆ.

ಎರಡನೆಯ ಭಾಗವಾದ ಚಳವಳಿಯ ಚೇತನದಲ್ಲಿ, ಅಯ್ಯಪ್ಪಯ್ಯ ಹುಡಾ, ಪದ್ಮಜಾ ದಂಡನತಿ, ಡಾ|| ಪಿ. ವಿ. ನಾರಾಯಣ, ಚೆನ್ನವೀರಕಣವಿ, ಪ್ರೊ|| ಎಲ್. ಎಸ್. ಶೇಷಗಿರಿ ರಾವ್, ಗೊ. ರು. ಚನ್ನಬಸಪ್ಪ, ಡಾ|| ಜೆ. ಶ್ರೀನಿವಾಸಮೂರ್ತಿ, ವ. ಚ. ಚನ್ನೇಗೌಡ, ನಾ. ಗೀತಾಚಾರ್ಯ ಅವರುಗಳು ಶಕ್ತಿಕೇಂದ್ರದ ಆರಂಭದಿಂದ ಈವರೆಗೆ ಉಂಟಾಗಿರುವ ಜಾಗೃತಿ, ತಿಳಿವಳಿಕೆ, ಸಾಧನೆಗಳನ್ನು ಅವರವರು ಕಂಡಂತೆ ನಿರೂಪಿಸಿರುವುದು ಶಕ್ತಿ ಕೇಂದ್ರದ ಕೆಲಸಗಳಿಗೆ ಕನ್ನಡಿ ಹಿಡಿದಂತಿದೆ.

ಈವರೆಗೂ ಕನ್ನಡಪರವಾದ ಎಷ್ಟೋ ಸಂಘಟನೆಗಳು ತಲೆಯೆತ್ತಿ, ಕಾರ್ಯ ನಿರ್ವಹಿಸಿದ್ದರೂ ಅವುಗಳ ಮಾಹಿತಿ ಲಭ್ಯವಾಗದಿರುವ ಸಂದರ್ಭದಲ್ಲಿ ಕನಿಷ್ಠ ಶಕ್ತಿ ಕೇಂದ್ರದಂಥ ಒಂದು ಸಂಘಟನೆ ಆ ಕೆಲಸವನ್ನು ಪೂರೈಸುತ್ತಿರುವುದು ಅಭಿನಂದನಾರ್ಹ ಸಂಗತಿಯಾಗಿದೆ. ಕನ್ನಡ ಶಕ್ತಿ ಕೇಂದ್ರದ ಕಾರ್ಯ ವೈಖರಿ ಬಹು ಮಟ್ಟಿಗೆ

ಸಂವಿಧಾನಾತ್ಮಕ ಸ್ವರೂಪದ್ದಾಗಿದ್ದು ಆದರಿಂದಾಗಿ ಕ್ಷಣಿಕವಾದ ಲಾಭಕ್ಕಿಂತ, ಗಟ್ಟಿಯಾದ ದೀರ್ಘಕಾಲ ನಿಲ್ಲುವ ಲಾಭಗಳು ಕನ್ನಡಿಗರಿಗೆ ಲಭ್ಯವಾಗಿರುವುದು, ಆಗುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅರಿವಾಗದೆ ಇರದು. ವಾಸ್ತವವಾಗಿ ಇದು ಸಂಪಾದಿತ ಗ್ರಂಥವಾಗಿರುವುದರಿಂದ ಲೇಖಕರ ಹೆಸರಿನೊಂದಿಗೆ 'ಸಂಪಾದಕರು' ಎಂಬುದನ್ನು ಮುದ್ರಿಸಬೇಕಿತ್ತು ಎಂಬ ಒಂದು ಅಂಶವನ್ನು ಇಲ್ಲಿ ಸೂಚಿಸುವುದು ಉಚಿತವೆನಿಸುತ್ತದೆ.

—ಪಿ. ವಿ. ಕೃಷ್ಣಮೂರ್ತಿ

(5) ಸಾಮಾನ್ಯಧರ್ಮ

ಶತಾವಧಾನಿ ಆರ್. ಗಣೇಶ್‌ಅವರು ಬರೆದಿರುವ ಸಾಮಾನ್ಯ ಧರ್ಮ ಉಪಯುಕ್ತ ಪ್ರಕಟನೆ. ಮೊತ್ತಮೊದಲಿಗೆ ಮುಖ ಪುಟವೇ ಹೃದಯ ಗ್ರಾಹಿ. ಧರ್ಮವನ್ನು ವೃಷಭಕ್ಕೆ ಹೋಲಿಸಿರುವುದಂತೂ ಆನಂದಮಯ. ಶ್ರೀಯುತರು ಧರ್ಮ ಎಂದರೇನು ಎಂಬುದನ್ನು ಹೃದಯಂಗಮವಾಗಿ ಚಿತ್ರಿಸಿದ್ದಾರೆ. ಇವರು ವೇದಗಳಿಂದಲೂ, ಸೂತ್ರ ಗ್ರಂಥಗಳಿಂದಲೂ ಮತ್ತು ಸ್ಮೃತಿಗಳಿಂದಲೂ ಆಯ್ದು-ಧರ್ಮದ ವಿವರಣೆಯನ್ನು ಕೊಟ್ಟಿದ್ದಾರೆ. ಗ್ರಂಥ ವಿಷಯ ಬಹು ಗಹನವಾಗಿದ್ದರೂ, ಅದನ್ನು ಸಾಧಾರಣ ಜನಗಳಿಗೂ ತಿಳಿಯುವಂತೆ ಅಚ್ಚ-ಶುದ್ಧ ಕನ್ನಡದಲ್ಲಿ ಸಂಸ್ಕೃತ ತಿಳಿಯದಿರುವವರಿಗೂ ಮನಂಬುಗುವಂತೆ ವಿವರಿಸಿದ್ದಾರೆ—ಸೂತ್ರ ಗ್ರಂಥಗಳಲ್ಲಿರುವ ಹಳೆಯ ಸಂಸ್ಕೃತ ಶಬ್ದಗಳಿಗೆ-ಕನ್ನಡದಲ್ಲಿ ಸೊಗಸಾದ ವಿವರಣೆಯನ್ನು ನೀಡಿದ್ದಾರೆ. ವಿಶೇಷವಾಗಿ 'ಗೌತಮ ಧರ್ಮಸೂತ್ರದ' 'ಅಷ್ಟಾ ಆತ್ಮಗುಣಾಃ' ಎಂಬುದನ್ನು ಬಹು ಸುಲಭವಾಗಿ-ಸಂಸ್ಕೃತ ತಿಳಿಯದವರಿಗೂ ಗೊತ್ತಾಗುವಂತೆ-ಟಿಪ್ಪಣಿ ಮತ್ತು ವಿವರಣೆಗಳಿಂದ ಬಹು ಸುಂದರವಾಗಿ ನಿರೂಪಿಸಿದ್ದಾರೆ. ಮನುಸ್ಮೃತಿಯ ಉಕ್ತಿಗಳೂ-ಯಾಜ್ಞವಲ್ಕ್ಯ ಸ್ಮೃತಿಗಳ ಉಕ್ತಿಗಳೂ ಸುಂದರವಾಗಿ ಮೂಡಿ ಬಂದಿವೆ. ನಮಗೇ ತಿಳಿಯದ-ಸಂಸ್ಕೃತ ಪದಗಳಿಗೆ ಕನ್ನಡದಲ್ಲಿ ಸುಂದರವಾದ ಶಬ್ದಗಳಲ್ಲಿ-ಜನ ಸಾಮಾನ್ಯರಿಗೂ ತಿಳಿಯುವ ಭಾಷೆಯಲ್ಲಿ-ವಿವರಣೆ ಕೊಟ್ಟಿದ್ದಾರೆ-ಇಷ್ಟು ಸುಂದರವಾದ ಧರ್ಮದ ವಿವರಣೆಯನ್ನು ಮತ್ತೆಲ್ಲೂ ನಾನು ನೋಡಿಲ್ಲ. ಇದರಂತೆ ಇವರ ಕೈಯಿಂದ ಸಂಸ್ಕೃತದ ಧರ್ಮ ಗ್ರಂಥಗಳು ತಿಳಿಯಾದ ಕನ್ನಡದಲ್ಲಿ ಮೂಡಿ ಬರಲಿ ಎಂದು ಆಶಿಸುತ್ತಾ-ಭಗವಂತನು ಇವರಿಗೆ ಆಯುರಾರೋಗ್ಯ-ಐಶ್ವರ್ಯಗಳನ್ನೂ ಕೊಟ್ಟು ಕಾಪಾಡಲಿ ಎಂದು ಪ್ರಾರ್ಥಿಸುತ್ತೇನೆ.

—ಅನಂತಕೃಷ್ಣ

(6) ಮಯೂರವರ್ಮ ವಿಲಾಸ (ಯಕ್ಷಗಾನ)

ಕರ್ನಾಟಕದ ಜನಪ್ರಿಯ ಕಲೆಗಳಲ್ಲಿ ಯಕ್ಷಗಾನ ಹಿರಿದಾದುದು. ಈ ಕಲೆ ಬಯಲಾಟ-ತಾಳಮದ್ದಳೆಗಳ ರೂಪದಲ್ಲಿ ಪ್ರದರ್ಶನಗೊಳ್ಳುತ್ತದೆ. ತಾಳಮದ್ದಳೆಯಲ್ಲಿ ನಾಟ್ಯವಿಲ್ಲ. ಇನ್ನುಳಿದ ಗಾನ-ವಾದನ-ಪಾತ್ರಸಂವಾದ ಮತ್ತು ಅದಕ್ಕೆ ದಿಗ್ದರ್ಶಕವಾಗುವ ಪ್ರಸಂಗ ಸಾಹಿತ್ಯವಿರುತ್ತದೆ. ಈ ಮಯೂರವರ್ಮ ವಿಲಾಸ-ಅಂತಹದೊಂದು ಹೊಸ ಪ್ರಸಂಗ. ಇದರ ಕಥಾವಸ್ತು ಕರ್ಣಾಟಕದಲ್ಲಿ ಕ್ರಿ.ಶ. ನಾಲ್ಕನೆ ಶತಮಾನದಲ್ಲಿ ಕನ್ನಡಿಗ ರಾಜ ಮಯೂರವರ್ಮನು ರಾಜ್ಯ ಕಟ್ಟಿದ ಐತಿಹಾಸಿಕ ಸಂಗತಿಯಾಗಿದೆ. ಇದನ್ನು ಬರೆದ ಕವಿ ವಿದ್ವಾನ್ ತಾಳ್ತಜೆ ಕೃಷ್ಣಭಟ್ಟರು. ಈ ಕಥಾವಸ್ತುವನ್ನೊದಗಿಸಿ, ಕೃತಿ ರಚನೆಗೆ ಪ್ರೇರಿಸಿ, ಅನಂತರ ಮುದ್ರಿಸಿ ಪ್ರಕಾಶನ ಪಡಿಸಿದವರು ಯಕ್ಷಗಾನ ಕಲಾಭಿಜ್ಞ ಸಾಹಿತಿ-ಕೆ. ಪಿ ರಾಜಗೋಪಾಲ್ ಎಂ. ಎ. ಇದು ಆಬಾಲವೃದ್ಧ ಸರ್ವಜನ ಕುತೂಹಲಕರನಾಗಿದೆ.

(7) ಗಮಕ ಚೇತನರು

ಸತ್ಕವಿಗಳಿಂದ ರಚಿತವಾದ ಕಾವ್ಯಗಳನ್ನು ಸಹೃದಯರಿಗೆ ಮನಂಬುಗುವಂತೆ ರಾಗ ಸಂಯೋಜನೆಯಿಂದ ರಸ-ಭಾವೋಪೇತನಾಗಿ ವಾಚನ ಮಾಡತಕ್ಕವರು ಗಮಕಿಗಳು. ಪ್ರಕೃತ ಗಮಕ ಕಲಾಕಾಶದಲ್ಲಿ ದ್ವಾದಶಾದಿತ್ಯರಂತೆ ಬೆಳಗಿ ಅಮೃತ ಚೇತನರಾಗಿದ್ದ ಹನ್ನೆರಡು ಮಂದಿ ಗಮಕಿಗಳ ಪರಿಚಯಾತ್ಮಕ ಕೃತಿಯಾಗಿ ಈ ಪುಸ್ತಕ ಹೊರ ಬಂದಿದೆ. ಬಸಪ್ಪಶಾಸ್ತ್ರಿ, ಸಂ. ಗೋ. ಬಿಂದುರಾಯರು, ಗೌರೀ ದೇವುಡು ನರಸಿಂಹಶಾಸ್ತ್ರಿ, ಕೃಷ್ಣಗಿರಿ ಕೃಷ್ಣರಾಯರು, ತಲಕಾಡು ಮಾಯಿಗೌಡರು, ಕಳಲೆ ಸಂಪತ್ಕುಮಾರಾಚಾರ್ಯರು, ಮೈ. ಶೇ. ಅನಂತಪದ್ಮನಾಭ ರಾಯರು, ಮತ್ತೂರು ಲಕ್ಷ್ಮೀಕೇಶವ ಶಾಸ್ತ್ರಿ, ಹು.ಮ. ರಾಮಾರಾಧ್ಯರು, ಜೋಳದ ರಾಶಿ ದೊಡ್ಡನಗೌಡರು, ಟಿ. ವೆಂಕಟಪ್ಪ, ಸರೋಜಮ್ಮ ಅನಂತರಾಮಯ್ಯ-ಇವರನ್ನು ಕುರಿತು ಬೇರೆ ಬೇರೆ ಲೇಖಕರು ಸೊಗಸಾಗಿ ಪರಿಚಯ ಲೇಖನಗಳನ್ನು ಬರೆದಿರುತ್ತಾರೆ. ಕೃತಿಯ ಪ್ರಾರಂಭದಲ್ಲಿ ಈ ಗಮಕ ಚೇತನರ ಭಾವ ಚಿತ್ರಗಳೊಂದಿಗೆ ಒಂದೊಂದು ಕಂದ ಪದ್ಯದಲ್ಲಿ ಅವರ ಸೂಕ್ಷ್ಮ ಪರಿಚಯವೂ ಒಳಗೊಂಡಿದೆ.

ಟಿ. ಕೇಶವ ಭಟ್ಟ

ಪ್ರಕಾಶಕರು : ಪ್ರತಿಮಾ ಪ್ರಕಾಶನ, ಪೆರ್ಲಡ್ಕ, ಅಂಚೆ : ಕನ್ಯಾನ-574 279, ದ.ಕ.
ಆಕೃತಿ : ಕಿರೀಟ ಅಷ್ಟದಳ, ಪುಟಗಳು : ೮೮ ಬೆಲೆ : ರೂ. ೧೫-೦೦ 1997

ಸಂ : ಗಮಕಿ ಆರ್. ಶಂಕರನಾರಾಯಣ್, ಪ್ರ : ಕರ್ನಾಟಕ ಗಮಕ ಕಲಾ ಪರಿಷತ್ತು, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಆವರಣ, ನರಸಿಂಹರಾಜ ಕಾಲೊನಿ, ಬೆಂಗಳೂರು-560 019 ಬೆಲೆ : ರೂ. ೧೫-೦೦

ಲೋಚನ: ಲೇಖನ ಸೂಚಿ

'ಲೋಚನ' ಸಂಪುಟ 1 ರಿಂದ 5 ಜೂನ್ 1983 ರಿಂದ ಡಿಸೆಂಬರ್ 1987ರ ವರೆಗೆ

(ಹಾಗೂ ಕರ್ನಾಟಕ ಲೋಚನ ಸಂ. 1 ರಿಂದ ಜೂನ್ 1988 ರಿಂದ
ಡಿಸೆಂಬರ್ 1997ರ ವರೆಗೆ ಒಟ್ಟು 30 ಸಂಚಿಕೆಗಳು)

ಸಂಕಲನಕಾರ : ಪಿ. ವಿ. ಕೃಷ್ಣಮೂರ್ತಿ

ಸಂಲೇಖಗಳ ಜೋಡಣೆಯ ಕ್ರಮ :

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನವು ತನ್ನ ಧ್ಯೇಯೋದ್ದೇಶಗಳಿಗನುಗುಣವಾಗಿ 1983 ರಿಂದ 'ಲೋಚನ' ಎಂಬ ಹೆಸರಿನಲ್ಲಿ ಅರ್ಧ ವಾರ್ಷಿಕ ವಿದ್ವತ್ ಪತ್ರಿಕೆಯನ್ನು ಪ್ರಕಟಿಸತೊಡಗಿತು. 1988ರಲ್ಲಿ ಈ ಪತ್ರಿಕೆಯು 'ಕರ್ನಾಟಕ ಲೋಚನ' ಎಂಬ ಹೊಸ ಹೆಸರಿನಿಂದ ಪ್ರಕಟವಾಗ ತೊಡಗಿದೆ. ಈ ಪತ್ರಿಕೆಗೆ ಒಟ್ಟು ಹದಿನೈದು ವರ್ಷವಾಗಿದ್ದು, ಲೇಖನಗಳ ಸೂಚಿಯೊಂದನ್ನು ಸಿದ್ಧಪಡಿಸಿ ಪ್ರಕಟಿಸುವ ಅಗತ್ಯ ಕಂಡು ಬಂದಿತು. ಅಂತೆಯೇ ಈ ಲೇಖನ ಸೂಚಿ. ಈ ಸೂಚಿಯಲ್ಲಿ ಲೇಖಕರ ಹೆಸರುಗಳನ್ನು ಆಕಾರಾದಿಯಾಗಿ ಜೋಡಿಸಲಾಗಿದೆ. ಪ್ರತಿಯೊಂದು ಸಂಲೇಖದಲ್ಲಿ ಲೇಖಕರ ಹೆಸರಿನ ಅನಂತರ ಅವರ ಲೇಖನಗಳ ಶೀರ್ಷಿಕೆ, ಸಂಪುಟ-ಸಂಚಿಕೆಗಳ ಸಂಖ್ಯೆ, ಸಂಚಿಕೆಯ ತಿಂಗಳು ಹಾಗೂ ವರ್ಷ, ಅನಂತರ ಲೇಖನದ ಪ್ರಾರಂಭ ಪುಟದ ಸಂಖ್ಯೆಯನ್ನು ಸೂಚಿಸಲಾಗಿದೆ. 1987ರ ವರೆಗಿನವನ್ನು 'ಲೋಚನ' ಸಂಚಿಕೆಗಳೆಂದೂ 1988ರ ನಂತರದವನ್ನು 'ಕರ್ನಾಟಕ ಲೋಚನ' ಸಂಚಿಕೆಗಳೆಂದೂ ಪರಿಭಾವಿಸುವುದು.

ಉದಾ : 1. ಲೋಚನ
ಶೇಷಗಿರಿರಾವ್ ಎಲ್. ಎಸ್:
ಗ್ರೀಕ್ ನಾಟಕಗಳ ಹಿನ್ನೆಲೆಯಲ್ಲಿ 'ಅಶ್ವತ್ಥಾಮನ್''
ಮತ್ತು 'ಆಗ್ರಹ', 2-2, ಡಿಸೆಂಬರ್ 84, ಪು. 167.

2. ಕರ್ನಾಟಕ ಲೋಚನ
ಸಂಪತ್ಕುಮಾರಾಚಾರ್ಯ ವಿ. ಎಸ್.
ಸಂಗೀತದ ಮೇಲೆ ಸಾಮವೇದದ ಪ್ರಭಾವ, 1-1, ಜೂನ್ 88, ಪು. 26.

ವಿಮರ್ಶಿತ ಗ್ರಂಥಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಕೊಡಲಾಗಿದೆ. ಅಲ್ಲಿಯೂ ಲೇಖಕ, ಕೃತಿಯ ಹೆಸರು ಅನಂತರ ವಿಮರ್ಶಕರ ಹೆಸರು, ವಿಮರ್ಶೆ ಪ್ರಕಟವಾಗಿರುವ ಸಂಪುಟ-ಸಂಚಿಕೆ, ತಿಂಗಳು-ವರ್ಷ, ಪ್ರಾರಂಭ ಪುಟ ಸಂಖ್ಯೆಯನ್ನು ಸೂಚಿಸಲಾಗಿದೆ.

ಲೇಖಕ-ಲೇಖನ ಸೂಚಿ

ಉಪಾಧ್ಯ ಜಿ. ಎನ್.

ಮಹಾರಾಷ್ಟ್ರದ ಕನ್ನಡ ಶಾಸನಗಳಲ್ಲಿ ಸಿದ್ಧರಾಮ, 10–2. ಡಿಸೆಂಬರ್ 97, ಪುಟ. 5.

ಉಪ್ಪಂಗಳ ರಾಮಭಟ್ಟ

ಮಿಕ್ಕ ಪ್ರತ್ಯಯಗಳು, 9–2, ಡಿಸೆಂಬರ್ 96, ಪುಟ. 43.

ಉಮಾಪತಿಶಾಸ್ತ್ರಿ ಗೌ. ಮ.

ಇದೊಂದು ದಾಖಲೆ, 5–2, ಡಿಸೆಂಬರ್ 92, ಪುಟ. 65.

ಓಂಕಾರಪ್ಪ ಸಿ.

ಕನ್ನಡದಲ್ಲಿ ವರ್ತಮಾನಕಾಲ "ಇದೆ", 2–4, ಜೂನ್ 89, ಪುಟ. 1.

ಕಾವ್ಯದಲ್ಲಿ ರಸವು ಸರ್ವ ಪ್ರಯೋಜನವೆ ಮೌಲಿಭೂತವಲ್ಲ, 4–2, ಡಿಸೆಂಬರ್ 91, ಪುಟ. 13.

ಕಡಬ ದೊರೆಸ್ವಾಮಿ ಅಯ್ಯಂಗಾರ್

ಶ್ರೀಭಕ್ತಿಗೀತೆ, 2–2, ಡಿಸೆಂಬರ್ 84, ಪುಟ. 83.

ಕಮಲಾ ಹಂಪನಾ

ಮಹಿಳಾ ಸಾಹಿತಿಗಳು 2–2, ಡಿಸೆಂಬರ್ 84, ಪುಟ. 97.

ಕಲಬುರ್ಗಿ ಎಂ. ಎಂ.

ಅಗ್ಗಳನನ್ನು ಕುರಿತು (ಒಂದು ಟಿಪ್ಪಣಿ) 1–1, ಜೂನ್ 83, ಪುಟ. 32.

ರನ್ನನ ಒಂದು ಪದ್ಯದ ಅರ್ಥ ಸಮಸ್ಯೆ. 3–1, ಜೂನ್ 85, ಪುಟ. 14.

ಕುಕ್ಕಿಲ ಕೃಷ್ಣಭಟ್ಟ

ಭಾರತೀಯ ರಂಗಭೂಮಿ, 4–1, ಜೂನ್ 91, ಪುಟ. 35.

ಕುಮಾರ ನಿಜಗುಣ

ಛಂದಸ್ಸಿನಾದ್ಯತೆ ಹಾಗೂ ನವವೃತ್ತಗಳ ಆವಿಷ್ಕರಣ, 8–2, ಡಿಸೆಂಬರ್ 96, ಪುಟ. 54.

ಕುಲಕರ್ಣಿ ಆರ್. ಜಿ.

'ಭಾರತ ಸಿಂಧು ರಶ್ಮಿ'ಯಲ್ಲಿಯ ಮಾನುಗಳ ಸಂಘಸೆ, 5–2, ಡಿಸೆಂಬರ್ 87, ಪುಟ. 19.

ಕೃಷ್ಣಕುಮಾರ್ ಸಿ. ಪಿ.

ನಾಲ್ಕು ವಿಚಾರಗಳು-ಸ್ವೋಪಜ್ಞತೆ, 1–2, ಡಿಸೆಂಬರ್ 88, ಪುಟ. 64.

ಪಂಪನ ಬಗ್ಗೆ ಐದು ಟಿಪ್ಪಣಿಗಳು, 3-1, ಜೂನ್ 85, ಪುಟ. 36.

'ಕರಿದು ಮಾಡಿದಂ ನಿಜಯಶಂ'–ಸಮಸ್ಯೆ, 3–2, ಡಿಸೆಂಬರ್ 85, ಪುಟ. 26.

ನೇಮಿಚಂದ್ರನ ಒಂದು ರೂಪಕ ಸಮುಚ್ಚಯ, 1–2, ಡಿಸೆಂಬರ್ 83, ಪುಟ. 35.

ಜನ್ನನ ಅಮೃತಮತಿ, 1–2, ಡಿಸೆಂಬರ್ 83, ಪುಟ. 34.

ವ್ಯಾಸ ಮತ್ತು ಜನ್ನ. ಅದೇ ಪುಟ. 33.

"ಹರನ ವದನಕೆ ಬೆವರ ತಹೆ" (ಟಿಪ್ಪಣಿ), 1–2, ಡಿಸೆಂಬರ್ 83, ಪುಟ-35.

ನಾಲ್ಕು ವಿಚಾರಗಳು 1) ವ್ಯಾಸರ ಪೂರ್ಣ ದೃಷ್ಟಿ. 2) ವಾಲ್ಮೀಕಿ ರಾಮಾಯಣ–ಒಂದು ಪ್ರಕ್ಷೇಪ 3) ಕಾಳಿದಾಸನ ಒಂದು ಪದ ಪ್ರಯೋಗ 4) ಸ್ವೋಪಜ್ಞತೆ, 1–2, ಡಿಸೆಂಬರ್ 88, ಪುಟ. 64.

ಕೃಷ್ಣ ಪರಮೇಶ್ವರ ಭಟ್ಟ

ಮಾಸ್ತಿಯವರ ಕತೆಗಳಲ್ಲಿ ಭಾಷೆ, 4-2, ಡಿಸೆಂಬರ್ 91, ಪುಟ. 1.

ಟಿಪ್ಪಣಿ ಮಾಡುವ ವಿಧಾನ, 8–2, ಡಿಸೆಂಬರ್ 95, ಪುಟ. 34.

ಕೃಷ್ಣಮೂರ್ತಿ ಕೆ.

ಶ್ರೀ ಪ್ರಶಸ್ತಿ, (ಕವನ), 2-2, ಡಿಸೆಂಬರ್ 84, ಪುಟ. 223.

ಕೃಷ್ಣಮೂರ್ತಿ ಪಿ. ವಿ.

ಜೋಡಿಪುರದ ಶಾಸನ ಮತ್ತು ಸುಗುಟೂರು ವಂಶದ ಮೂಲ ಪುರುಷ, 3–2, ಡಿಸೆಂಬರ್ 90, ಪುಟ. 33.

ಶಾಸನಗಳಲ್ಲಿ ಎಲಹಂಕನಾಡು, 1–2, ಡಿಸೆಂಬರ್ 88, ಪುಟ. 25.

ಸುಗುಟೂರು ವಂಶದ ಪಾಳೆಯಗಾರರ 'ಸುಗುಟೂರು' ಒಂದು ಪರಿಶೀಲನೆ, 5–2, ಡಿಸೆಂಬರ್ 92, ಪುಟ. 37.

ಕೃಷ್ಣಯ್ಯ ಎಂ. ಎಚ್.

ಡಿ. ವಿ. ಜಿ. ಅವರ ಸೌಂದರ್ಯ ಮೀಮಾಂಸೆ, 1-1, ಜೂನ್ 88, ಪುಟ. 75.

ಕೃಷ್ಣರಾವ್ ಜಿ.

ಕನ್ನಡ ಹುಂಕಾರ (ಕವನ), 2-2, ಡಿಸೆಂಬರ್ 84, ಪುಟ. 218.

ಕೃಷ್ಣವೇಣಿ

ಕೆಲಗುಂದ್ಲಿ ಶಾಸನವನ್ನು ಕುರಿತು, 1-2, ಡಿಸೆಂಬರ್ 83, ಪುಟ. 30.

ಕೃಷ್ಣಶರ್ಮಾ ಯು.

ಕುಂಭಿನೀ-ಒಂದು ಟಿಪ್ಪಣಿ, 4-2, ಡಿಸೆಂಬರ್ 91, ಪುಟ. 57.

ಶ್ರೀ ವಿಜಯನ 'ಧ್ವನಿ'-ಕಂದ, 2-1, ಜೂನ್ 84, ಪುಟ. 36.

ಸಮ-ಸಂಸ್ಕೃತ ಕಾವ್ಯ-ಒಂದು ಟಿಪ್ಪಣಿ, 3-1, ಜೂನ್ 85, ಪುಟ. 33.

ಕೆಳದಿ ಗುಂಡಾ ಜೋಯಿಸ್

ತಾಳ ಪ್ರಸ್ತಾರ ಲಕ್ಷಣ ಓಲೆ ಹಸ್ತ ಪ್ರತಿ, 1-2, ಡಿಸೆಂಬರ್ 88, ಪುಟ. 68.

ಧರ್ಮಸ್ಥಳದಲ್ಲಿರುವ ತಾಮ್ರ ಶಾಸನ, 1-1, ಜೂನ್ 88, ಪುಟ. 55.

ಕೆಳದಿ ರಾಜರು ಮತ್ತು ಅವರ ಪ್ರಮುಖ ಸಾಧನೆಗಳು, 7-1, ಜೂನ್ 94, ಪುಟ. 13.

ವೇಲಾಪುರಿ ಕೇಶವಸೇತಿ ಗೀತಾ (ಬೇಲೂರು ವೈಕುಂಠದಾಸರ ಕೀರ್ತನೆಯ ಅಪ್ರಕಟಿತ ಹಸ್ತ ಪ್ರತಿ), 9-1, ಡಿಸೆಂಬರ್ 96, ಪುಟ. 24.

ಕೆಳದಿ ವೆಂಕಟೇಶ ಜೋಯಿಸ್

ಕೆಳದಿ ಅರಸರ ಕಾಲದ ಘಟನಾವಳಿ ಸೂಚಿ, 1-1, ಜೂನ್ 88, ಪುಟ. 65.

ಕೆಳದಿ ಸೋಮಶೇಖರ ನಾಯಕನ-ಕಾಲದ ಅಪ್ರಕಟಿತ ಕೃತಿಯು ತಾಳೆಯೋಲೆ ಹಸ್ತ ಪ್ರತಿ, 5-1, ಜೂನ್ 92, ಪುಟ. 48.

ಮೆಕೆಂಜಿ ಸಂಗ್ರಹಿಸಿದ ಕೆಳದಿ ಅರಸರ ಅರು ನಿರೂಪಗಳು, 6 - 2, ಡಿಸೆಂಬರ್ 93. ಪುಟ. 50.

ಗಂಗನಪಳ್ಳಿ ಎಂ. ಜಿ.

ಕನ್ನಡ ಗುರಿಕಾರ ಶ್ರೀ, (ಕವನ), 2–2, ಡಿಸೆಂಬರ್ 84, ಪುಟ. 28.

ಗರ್ಗೇಶ್ವರಿ ವೆಂಕಟಸುಬ್ಬಯ್ಯ

ಪ್ರಾಚೀನ ಕನ್ನಡ ವ್ಯಾಕರಣಗಳಲ್ಲಿ ಕಾರಕಗಳ ನಿರೂಪಣೆ, 5–1,
ಜೂನ್ 87, ಪುಟ. 1

ಆಷಾಢಸ್ಯ ಪ್ರಶಮ/ಪ್ರಥಮ ದಿವಸೇ (ಮೇಘದೂತ),
2–1, ಜೂನ್ 84, ಪುಟ. 15.

ಕಾವ್ಯಾರ್ಥ ಕುತೂಹಲ-ಪ್ರತಿಕ್ರಿಯೆ, 6–2, ಡಿಸೆಂಬರ್ 93, ಪುಟ. 72.

ಕಾವ್ಯಾರ್ಥ ಕುತೂಹಲ–ಪ್ರತಿಕ್ರಿಯೆಗಳ ಪುನಃ ಪರಿಶೀಲನೆ,
7–2, ಡಿಸೆಂಬರ್ 94, ಪುಟ. 60.

ಗಿರಿಜಾರಾಜ್ ಎಲ್.

ಬೀಳ್ಕೊಡುಗೆ (ರಾಮಚಂದ್ರ ಶರ್ಮರ ಕವನ ವಿಮರ್ಶೆ)
5–1, ಜೂನ್ 87, ಪುಟ. 67.

ಗೀತಾಚಾರ್ಯ ನಾ.

ಶಾಸನದಲ್ಲೊಂದು ಷಟ್ಪದಿ–ಪ್ರತಿಕ್ರಿಯೆ, 2–1, ಜೂನ್ 84, ಪುಟ. 26.

ರಾಮಶರ್ಮರ ಕೀರ್ತನೆಗಳು, 1–2, ಡಿಸೆಂಬರ್ 83, ಪುಟ. 2.

ಶ್ರೀಯುವರಿಗೆ (ಕವನ), 2–2, ಡಿಸೆಂಬರ್ 84, ಪುಟ. 96.

ಮೂವರು ಶ್ರೀ ವೈಷ್ಣವ ಹರಿದಾಸರು, 8-2, ಡಿಸೆಂಬರ್ 95, ಪುಟ. 43.

ಸಾಹಿತ್ಯ ಚರಿತ್ರೆಯಲ್ಲಿ 'ಅನುಭಾವ ಸಾಹಿತ್ಯ'–ಒಂದು ಟಿಪ್ಪಣಿ,
10–2, ಡಿಸೆಂಬರ್ 97, ಪುಟ. 22.

ಗುಂಡಪ್ಪ ಎಲ್.

ಕನ್ನಡ–ತಮಿಳು, 4–1, 2, 1986, ಪುಟ. 91.

ಗುಂಡಪ್ಪ ಡಿ. ವಿ.

ಕವಿ–ಕಾವ್ಯ ಪ್ರಶಂಸೆ (ಕವನ), 4–1, 2, 1986, ಪುಟ. 1.

ಗೋವಿಂದರಾಜು ಎಂ.

'ತಿರುಕ್ಕುರಳ್' ಕನ್ನಡ–ತಮಿಳು ಬಾಂಧವ್ಯದ ಸೇತು,
6–1, ಜೂನ್ 93, ಪುಟ. 33.

ಚಂದ್ರಮೌಳಿ ನಾಯ್ಕರ್

ಭರತನಾಟ್ಯ ಶಾಸ್ತ್ರ ಮತ್ತು ಭಾರತೀಯ ರಂಗ ಸಂಪ್ರದಾಯ
2-1, ಜೂನ್ 89, ಪುಟ. 9.

ಚಿದಂಬರ ದೀಕ್ಷಿತ್

ಶ್ರೀಯುವರಿಗೆ (ಕವನ), 1-2, ಡಿಸೆಂಬರ್ 83, ಪುಟ. 1

ಚಿದಾನಂದಮೂರ್ತಿ ಎಂ.

ಹರಿಕಥೆಯ ಉಗಮ, 1-1, ಜೂನ್ 83, ಪುಟ. 37.

ಈಚೆಗೆ ಶೋಧಿಸಿದ ಜೈನ ಧರ್ಮದ ಹೆಚ್ಚಿನ ಕುರುಹುಗಳು,
3-2, ಡಿಸೆಂಬರ್ 85, ಪುಟ. 19.

"ಭಾಗವತ" ತಿಮ್ಮಯ್ಯನ ಶಿಲ್ಪ ಮತ್ತು ಪುರಂದರದಾಸರ ಮೂರ್ತಿ ಕಲ್ಪನೆ,
1-2, ಡಿಸೆಂಬರ್ 88, ಪುಟ. 56.

ಚೌಕಾರು ಪರಮೇಶ್ವರ ಭಟ್ಟ

ಶ್ರೀರಂಗಪಟ್ಟಣ ತಾಲೂಕಿನ 14ನೆಯ ನಂಬರಿನ ಶಾಸನ ಭಾಗದಲ್ಲಿ ಒಂದು
ವಿವರಣೆ, 5-1, ಜೂನ್ 92, ಪುಟ. 16.

ಜಗನ್ನಾಥ ಎಸ್.

ವಿವೇಕ ಚಿಂತಾಮಣಿ-ಒಂದು ಅಧ್ಯಯನ, 7-1, ಜೂನ್ 94, ಪುಟ. 4.

ಏಕಾವಳಿ ಅಲಂಕಾರ, 8-1, ಜೂನ್ 95, ಪುಟ. 10.

ಕಾವ್ಯಾಲಂಕಾರಗಳ ಮಿಶ್ರಣ, 8-2, ಡಿಸೆಂಬರ್ 92, ಪುಟ. 8.

ಆರಭಟೀ ವೃತ್ತಿಯ ಹಿನ್ನೆಲೆಯಲ್ಲಿ ನೃತ್ಯದ ಸಾಹಿತ್ಯಿಕ ವರ್ಣನೆ,
9-1, ಜೂನ್ 96, ಪುಟ. 26.

ಜಯಮ್ಮ ಎಚ್.

ಎಂ. ವಿ. ಸೀ ಅವರ ಕಾವ್ಯದಲ್ಲಿ ಮಹಿಳಾ ಚಿತ್ರಣ, 4-1, ಜೂನ್ 91,
ಪುಟ. 12.

ಜೋಶಿ ಪಿ. ವಿ.

"ಕವಿರಾಜಮಾರ್ಗದ ಅಲಂಕಾರಾಂತರ್ಭಾವವಾದ" (ಗ್ರಂಥ ವಿಮರ್ಶೆ)
4-2, ಡಿಸೆಂಬರ್ 91, ಪುಟ. 60.

ಕನ್ನಡದಲ್ಲಿ ಚಂಪೂ : ಕೆಲವು ಚಿಂತನೆಗಳು, 6–1, ಜೂನ್ 93, ಪುಟ. 1.

ಮಧ್ಯಕಾಲೀನ ಸಾಹಿತ್ಯದಲ್ಲಿ ನಾಡು ನುಡಿ ಪ್ರಜ್ಞೆ, 9–2, ಡಿಸೆಂಬರ್ 96, ಪುಟ. 13.

ಪರಮಶಿವಮೂರ್ತಿ ಡಿ. ವಿ.

ಅಂಬಲಗೆರೆಯ ಶಾಸನ, 3–2, ಡಿಸೆಂಬರ್ 90, ಪುಟ. 88.

ಶಾಸನ ಮತ್ತು ಕ್ಷೇತ್ರ ಕಾರ್ಯ, 5-2, ಡಿಸೆಂಬರ್ 92, ಪುಟ. 78.

ಗುಮ್ಮನಾಯಕನ ಕೋಟೆ–ಒಂದು ಪರಿಚಯ, 6–2, ಡಿಸೆಂಬರ್ 93, ಪುಟ. 63.

ತುಮಕೂರು ಜಿಲ್ಲೆಯ ಬೃಹತ್ ಶಿಲಾಯುಗದ ನಿಲುವುಗಲ್ಲುಗಳು (Mehir), 7–2, ಡಿಸೆಂಬರ್ 94, ಪುಟ. 52.

ಪರಿಮಳಾಬಾಯಿ ಎನ್. ಬಿ.

ಬಸವಣ್ಣನವರ ಒಂದು ವಚನದ ವಿಶ್ಲೇಷಣೆ, 5-1, ಜೂನ್ 87, ಪುಟ. 60.

ಪ್ರಭಾಕರ್ ಎಂ. ಎನ್.

ಕರ್ನಾಟಕದ ಪ್ರಾಚೀನ ದೇವಾಲಯಗಳು, 6-2, ಡಿಸೆಂಬರ್ 93, ಪುಟ. 19.

ಪ್ರಭಾವತಿ ಎಸ್. ವಿ.

ಒಂದು ವಚನದ ಬಗ್ಗೆ 10–2, ಡಿಸೆಂಬರ್ 97, ಪುಟ. 36.

ಪಾದೇಕಲ್ಲು ವಿಷ್ಣುಭಟ್ಟ

ತುಳು ಭಾಗವತದಲ್ಲಿ ತ್ರಿಮೂರ್ತಿಗಣ ಬದ್ಧ ಷಟ್ಪದಿಗಳು, 3-2, ಡಿಸೆಂಬರ್ 90, ಪು. 22.

ಪೂಜಾರ ವ್ಹಿ. ಜಿ.

ವೀ. ಸೀ. ಅವರ ಲಲಿತ ಪ್ರಬಂಧಗಳು, 6-1, ಜೂನ್ 93, ಪುಟ. 20.

ಪವಾಡ ಕಥೆಗಳ ಹಿನ್ನೆಲೆಯಲ್ಲಿ ಇತಿವೃತ್ತ ಹಾಗೂ ವ್ಯಕ್ತಿತ್ವ, 9–1, ಜೂನ್ 96, ಪುಟ. 35.

ಮಹಾ ಕಾವ್ಯದ ಆಶಯಗಳು–ಅತಿಮಾನುಷತೆ, 10–1, ಜೂನ್ 97, ಪುಟ. 1.

ಬಸವಣ್ಣ ಪಿ.

ನಾಲ್ಕು ನೂತನ ಛಂದೋರಚನೆಗಳು, 5–1, ಜೂನ್ 92, ಪುಟ. 33.

ಬಿರಾದಾರ ಎಂ. ಜಿ.

ನವೋದಯ ನಾಯಕರಾಗಿ ಬಿ. ಎಂ. ಶ್ರೀ, 2–2, ಡಿಸೆಂಬರ್ 84, ಪುಟ 29.

ಬಿಳಿಗಿರಿ ಎಚ್. ಎಸ್.

ಗಮಕ ಸಮಾಸವು ಸಮಾಸವೇ, ಅಲ್ಲದಿದ್ದರೆ ?, 3–2, ಡಿಸೆಂಬರ್ 85, ಪುಟ. 3.

ಭಾನುಮತಿ ವೈ. ಸಿ.

ಹಳೇಬೀಡು ಕೈಫಿಯತ್ತು, 1-2, ಡಿಸೆಂಬರ್ 88, ಪುಟ. 1.

ಹೊಯ್ಸಳಾದಿರಾಜರ ಚರಿತ್ರೆ, 5–2, ಡಿಸೆಂಬರ್ 92, ಪುಟ. 13.

ಭೀಮರಾವ್ ಚಿಟಗುಪ್ಪಿ

ದಾಸ ಸಾಹಿತ್ಯದಲ್ಲಿ ಬೌದ್ಧಾವತಾರ, 8–1, ಜೂನ್ 95, ಪುಟ. 18.

ಭೀಮನಿಂದ ದುಶ್ಯಾಸನ ರಕ್ತಪಾನ ? 9-1, ಜೂನ್ 96, ಪುಟ. 67.

ಮಧುಸೂದನ ಕೆ. ಎಸ್.

ಪಂಪ ಭಾರತದ ಒಂದು ಪದ್ಯ, 3–2, ಡಿಸೆಂಬರ್ 90, ಪುಟ. 105.

ಪಂಪ ಭಾರತದ ಮೊದಲ ಆಶ್ವಾಸ ಪದ್ಯ 77 ಒಂದು ಮರು ಪ್ರತಿಕ್ರಿಯೆ, 5–2, ಡಿಸೆಂಬರ್ 92, ಪುಟ. 86.

ಮರುಳಯ್ಯ ಸಾ. ಶಿ.

ವಚನ ಸಾಹಿತ್ಯದಲ್ಲಿ ಅದ್ವೈತ, 2–2, 3–1, ಡಿಸೆಂಬರ್ 89, ಜೂನ್ 90, ಪುಟ. 54.

ಮಲ್ಲೇಪುರಂ ಜಿ. ವೆಂಕಟೇಶ

ಮನು : ವೈವಸ್ವತ, ನರ : ಸ್ವಾಯಂಭುವ, 4–1,2, 1986, ಪುಟ. 3.

ಮಹದೇವಪ್ಪ ಸಿ.

ಶ್ರೀಮದ್ಗೋಸಲಾರ‍್ಯ ಯತಿ, 6–2, ಜೂನ್ 93, ಪುಟ. 57.

"ವೀರಶೈವ ಷಟ್ಸ್ಥಲ ಸಿದ್ಧಾಂತ" ಗ್ರಂಥ ಕರ್ತೃವನ್ನು ಕುರಿತು, 7–2, ಡಿಸೆಂಬರ್ 94, ಪುಟ. 1.

ಶ್ರೀ ತೋಂಟದ ಸಿದ್ಧಲಿಂಗೇಶ್ವರರವರ ಜೀವಿತ ಕಾಲ ವಿಚಾರ, 8-2, ಜೂನ್ 95, ಪುಟ. 14.

"ನುಡಿಗೆಲ್ಲಂ ಸಲ್ಲದ"–ನುಡಿಗಟ್ಟಿನ ಕೇಂದ್ರ ಬಿಂದು, 9–1, ಜೂನ್ 96, ಪುಟ. 77.

ಪ್ರಭುದೇವರ ರಗಳೆ ಹಾಗೂ ವಚನಾಂಕಿತ, 10–1, ಜೂನ್ 97, ಪುಟ. 25.

ಮಹಾದೇವಯ್ಯ ಟಿ. ಆರ್.

"ಕನ್ನಡ–ಕರ್ನಾಟಕ" : ಬಿ. ಎಂ. ಶ್ರೀ ದೃಷ್ಟಿ, 1-2, ಡಿಸೆಂಬರ್ 83. ಪುಟ. 7.

ಮಹೇಂದ್ರ

ಬೆಳಗಾದುದೇಳು (ಕವನ), 3–1, ಜೂನ್ 85, ಪುಟ. 1.

ಮಿತ್ರ ಅ. ರಾ.

ಕನ್ನಡ ಛಂದಸ್ಸು–ಕೆಲವು ವಿಚಾರಗಳು, 1–1, ಜೂನ್ 88, ಪುಟ. 1.

ಮುತ್ತುರಾಜು

ಗೊಟ್ಟಿಗೆಹಳ್ಳಿಯಲ್ಲಿ ಬೃಹತ್ ಶಿಲಾಯುಗದ ಶಿಲಾ ಸಮಾಧಿಗಳು–ಹೊಸ ಶೋಧ, 7–1, ಜೂನ್ 94, ಪುಟ. 43.

ಮುರಳೀಧರ ಎಚ್. ಎನ್.

ಪಂಪ ಭಾರತದ ವಾಕ್ಯವೊಂದರ ಅರ್ಥವನ್ನು ಕುರಿತು, 5–1, ಜೂನ್ 92, ಪುಟ. 65.

ಮೂರ್ತಿರಾವ್ ಎ. ಎನ್.

ಅದ್ವೈತ, 2–2, 3–1, ಡಿಸೆಂಬರ್ 89, ಜೂನ್ 90, ಪುಟ. 1.

ರಂಗನಾಥ ಶರ್ಮ ಎನ್.

ಗಮಕ ಸಮಾಸ–ಒಂದು ಸಮೀಕ್ಷೆ, 3–1, ಜೂನ್ 85, ಪುಟ. 17.

ವರ್ತಮಾನಕಾಲ, 3-2, ಡಿಸೆಂಬರ್ 90, ಪುಟ. 9.

ವರದರಾಜಾರಾವ್ ಜಿ.

ದೇವಕಿ-ವಾತ್ಸಲ್ಯ, 2–1, ಜೂನ್ 84, ಪುಟ. 9.

ವರದರಾಜ ಹುಯಿಲಗೋಳ

ಶಾಂತಕವಿ, ಹಟ್ಟಿಯಂಗಡಿ ನಾರಾಯಣರಾವ್ ಇತರರು 2-2, ಡಿಸೆಂಬರ್ 84, ಪುಟ. 104.

ವಸಂತ ಕುಷ್ಟಗಿ

ಬಿ.ಎಂ.ಶ್ರೀ ಸಾಹಿತ್ಯ ವಿಮರ್ಶೆ, 2–2, ಡಿಸೆಂಬರ್ 84, ಪುಟ. 11.

ವಾಲ್ಮೀಕಿ ಶ್ರೀನಿವಾಸ ಅಯ್ಯಂಗಾರ್ಯ

ಷಡ್ವಿಂಶ ಬ್ರಾಹ್ಮಣ–ಜ್ಞಾನ ಕಾಂಡ : ಒಂದು ಪರಿಚಯ 6–1, ಜೂನ್ 93, ಪುಟ. 36.

'ತಿರುಪ್ಪಾವೈ' ಆಚರಣೆ-ಇನ್ನೊಂದು ದೃಷ್ಟಿ, 9–1, ಜೂನ್ 96, ಪುಟ. 49.

'ತಿರುಪ್ಪಾವೈ' ಆಚರಣೆಯ-ಮತ್ತೊಂದು ದೃಷ್ಟಿ, 9-2, ಡಿಸೆಂಬರ್ 96, ಪುಟ. 45.

ವಾರಿ ಎಂ. ಜಿ.

ಸಂಧಿ ವಿಕಲ್ಪ–ಒಂದು ಮರು ಅವಲೋಕನ, 5–1, ಜೂನ್ 92, ಪು. 57.

ಲಿಂಗ ಸೂಚಕ ಪ್ರತ್ಯಯಗಳು, 6-1, ಪು. 45.

ಕ್ರಿಯಾ ಸಮಾಸ–ಒಂದು ಪುನಃ ಪರಿಶೀಲನೆ, 6–2, ಡಿಸೆಂಬರ್ 93, ಪುಟ. 69.

ಜಾತ್ಯೇಕ ವಚನ–ಒಂದು ಮರು ಗಮನಿಕೆ, 7–2, ಡಿಸೆಂಬರ್ 94, ಪುಟ. 68.

ಕನ್ನಡದ 'ಕ್ರಿಯಾ ಸಮಾಸ' ಒಂದು ಪುನರವಲೋಕನ, 9-2, ಡಿಸೆಂಬರ್ 96, ಪುಟ. 50.

ಕ್ರಿಯಾ ಸಮಾಸ–ಒಂದು ಉತ್ತರ, 10–2, ಡಿಸೆಂಬರ್ 97, ಪುಟ. 33.

ವಾಸುದೇವರಾವ್ ಎಂ.

ಕನ್ನಡ ನವಚೇತನ 'ಶ್ರೀ' ಪೂಜ್ಯ ಬಿ.ಎಂ.ಶ್ರೀ 2-2, ಡಿಸೆಂಬರ್ 84, ಪುಟ. 73.

ವಿಶ್ವೇಶ್ವರ ಎಂ. ವಿ.

ಹಳೆಯಬೀಡಿನ ಉತ್ಖನನದಲ್ಲಿ ದೊರೆತಿರುವ ವೀರಗಲ್ಲು, 3-2, ಡಿಸೆಂಬರ್ 90, ಪುಟ. 79.

ಕಲ್ಲತ್ತಿಪುರದ ಗಂಗ ಕಾಲೀನ ನಿರ್ಮಿತಿಗಳು-ಒಂದು ಪರಿಶೀಲನೆ, 6–2, ಡಿಸೆಂಬರ್ 93, ಪುಟ. 40.

ವೀರಪ್ಪ ಬಿ. ಸಿ.

ಎಂ.ವಿ.ಸೀ ಅವರ ಕಥಾ ಕೃತಿಗಳಲ್ಲಿ ಸಾಮಾಜಿಕ ಮೌಲ್ಯಗಳು, 4-1, ಜೂನ್ 91, ಪುಟ- 18.

ವೆಂಕಟಪ್ಪ ಟಿ.

ಗುರು ಸ್ಮರಣೆ (ಕವನ) 2–2, ಡಿಸೆಂಬರ್ 84, ಪುಟ. 79.

ವೆಂಕಟರಮಣನ್ ಡಿ. ಆರ್

ಬೆಳ್ಳಾವೆ, ಡಿ.ವಿ.ಜಿ., ಎ.ಆರ್.ಕೃ., ಟಿ.ಎಸ್. ವೆಂಕಣ್ಣಯ್ಯ, 2–2, ಡಿಸೆಂಬರ್ 84, ಪುಟ. 85.

ಅದ್ವೈತ ತತ್ತ್ವವನ್ನು ಪ್ರತಿಪಾದಿಸುವ ಕನ್ನಡ ಗ್ರಂಥಗಳು, 2–2, 3–1, ಡಿಸೆಂಬರ್ 89, ಜೂನ್ 90, ಪುಟ. 90.

ವೆಂಕಟರಾಮಯ್ಯ ಇ. ಎಸ್.

ಆಧುನಿಕ ಪಂಪ, 2–2, ಡಿಸೆಂಬರ್ 84, ಪುಟ. 129.

ವೆಂಕಟರಾಮಾಚಾರ್ಯ ಕೆ.

ಧ್ರುವ ಚರಿತ್ರೆ–ಯಕ್ಷಗಾನ ಕೃತಿ, 4–1, 2 ; 1986, ಪುಟ. 49.

ವೆಂಕಟಸುಬ್ಬಯ್ಯ ಜಿ.

'ಶ್ರೀ' ಅವರ ಇಂಗ್ಲಿಷ್ ಗೀತಗಳು, 2–2, ಡಿಸೆಂಬರ್ 84, ಪುಟ. 145.

ಪ್ರಾಚೀನ ಕನ್ನಡ ಸಾಹಿತ್ಯ ಮತ್ತು ಅದ್ವೈತ ದರ್ಶನ, 2–2, 3–1, ಡಿಸೆಂಬರ್ 89, ಜೂನ್ 90, ಪುಟ. 43.

ಶಿವಗಣೇಶಮೂರ್ತಿ, ಆರ್. ಎಸ್.

'ಹಸ್ತ ಪ್ರತಿ ವಿಜ್ಞಾನ' ಕೆಲವು ಪಾರಿಭಾಷಿಕ ಪದಗಳು,
5-1, ಜೂನ್ 87, ಪುಟ. 40.

ಅರ್ಥಶಾಸ್ತ್ರದ ಅವಲೋಕನ : ಕರ್ತೃ ಮತ್ತು ಕೃತಿ,
1-2, ಡಿಸೆಂಬರ್ 88, ಪುಟ. 16.

ರಾಮಪಾಣಿವಾದ ಮತ್ತು ಅವನ ಪ್ರಾಕೃತ ಕಾವ್ಯಗಳು,
3-2, ಡಿಸೆಂಬರ್ 90, ಪುಟ. 39.

ಶಿವಣ್ಣ ಎಸ್.

ಅಪ್ರಕಟಿತ ನಾಲ್ಕು ವೃತ್ತಗಳು, 4-2, ಡಿಸೆಂಬರ್ 91, ಪುಟ. 12.

ಆರು ಅಪ್ರಕಟಿತ ಸ್ವರ ವಚನಗಳು, 3-2, ಡಿಸೆಂಬರ್ 90, ಪುಟ. 92.

ಎರಡು ಸ್ವರ ವಚನಗಳು, 3-2, ಡಿಸೆಂಬರ್ 85, ಪುಟ. 1.

ಕೋರಾಣ್ಯದ ಶಿವಲಿಂಗಾಂಕಿತ ಅಪ್ರಕಟಿತ ವಚನಗಳು,
1-1, ಜೂನ್ 88, ಪುಟ. 52.

ಮಗ್ಗೆಯ ಮಾಯಿದೇವನ ಸ್ವರ ವಚನಗಳು, 3-2, ಡಿಸೆಂಬರ್ 85,
ಪುಟ. 48.

ಸದ್ಭಕ್ತ ಸದ್ವೀರ ಮಾಹೇಶ್ವರನ ಸತ್ಕ್ರಿಯಾ ಸಮ್ಯಜ್ಞಾನ ಸಮರಸ ಭಕ್ತಿ
ನಿಜಾಚರಣೆ ವಚನ (ಒಂದು ಟಿಪ್ಪಣಿ), 1-1, ಜೂನ್ 83, ಪುಟ. 35.

ಹೆಳವನಕಟ್ಟೆ ಗಿರಿಯಮ್ಮನ ಒಂದು ಅಪ್ರಕಟಿತ ಹಾಡು,
1-2, ಡಿಸೆಂಬರ್ 88, ಪುಟ. 63.

ಪದ್ಮಿನೀ ಕಲ್ಯಾಣ-ಅಪ್ರಕಟಿತ ಕೃತಿ, 7-2, ಡಿಸೆಂಬರ್ 94, ಪುಟ. 25.
ವೀರಣಾರ್ಯನ ಕಾಲ ಹಾಗೂ 'ಪ್ರಸಾದ ಚಾರಿತ್ರ' ಒಂದು ಟಿಪ್ಪಣಿ,

10-12, ಡಿಸೆಂಬರ್ 97, ಪುಟ. 26.

ಶಿವಲಿಂಗಯ್ಯ ಜಿ. ಎ.

ಕೇಶಿರಾಜನ ಶಬ್ದಮಣಿ ದರ್ಪಣದ ಮತ್ತೊಂದು ರೂಪದ ಪ್ರತಿ,
9-1, ಜೂನ್ 96, ಪುಟ. 56.

ಸೀತಾರಾಮ ಕೆದಿಲ್ಲಾಯ ಕ. ಪು.

ಛಂದೋಂಬುಧಿಯ ಕರ್ಣಾಟ ವಿಷಯ ಜಾತಿ ಬಂಧಗಳು,
3–2, ಡಿಸೆಂಬರ್ 90, ಪುಟ. 1.

ಕೆಲವು ಛಂದಸ್ಸಂಜ್ಞೆಗಳು, 4–2, 1986, ಪುಟ. 48.

ಸೀತಾರಾಮ ಜಾಗೀರದಾರ್

ಮೂರು ಟಿಪ್ಪಣಿಗಳು—ಕುಂಭಿನೀ, ಪುಟ. 55, ಕನಕದಾಸರ ಮೂರು ಅಪ್ರಕಟಿತ ಕೀರ್ತನೆಗಳು, ಪುಟ. 57, ಅಪ್ರಕಟಿತ ನಾಲ್ಕು ವೃತ್ತಗಳು (ಪಂಪಾ ಶತಕ), ಪುಟ. 55, 5–1, ಜೂನ್ 92, ಪುಟ. 55.

ಸೀತಾರಾಮಯ್ಯ ಎಂ. ವಿ. (ಎಂ.ವಿ.ಸೀ)

ಶಬ್ದಗಳ ವಿದೇಶ ಪ್ರಯಾಣ, 2-1, ಜೂನ್ 84, ಪುಟ. 32.

ಕನ್ನಡ ನವೋದಯ ಯುಗದ ಛಂದೋ ರೂಪಗಳು,
2–2, ಡಿಸೆಂಬರ್ 84, ಪುಟ. 136.

ಸಂಗೀತ ಸಾಹಿತ್ಯ (ಉಭಯ ಸಮಾನ ಮೂಲ ಮತ್ತು ಅಂಶಗಳು),
1–1, ಜೂನ್ 83, ಪುಟ. 46.

ಕನ್ನಡ ಸಾಹಿತ್ಯದಲ್ಲಿ ಅದ್ವೈತ (ಒಂದು ವರದಿ), 2–1, ಜೂನ್ 89, ಪುಟ. 33.

ಡಾ|| ಆರ್ನ್ವಿಯಸ್ ಅವರ ಲೇಖನಕ್ಕೆ ಪ್ರತಿಕ್ರಿಯೆ, 3–2, ಡಿಸೆಂಬರ್ 85, ಪುಟ. 34.

ಸುಬ್ರಹ್ಮಣ್ಯಂ ನ.

'ಕರಿದು ಮಾಡಿದಂ ನಿಜ ಯಶಸ್ಸಂ'—ಹೌದೆ ?,
5–2, ಡಿಸೆಂಬರ್ 87, ಪುಟ. 9.

ಕೌಸಲ್ಯ ಸುಪ್ರಜಾ ರಾಮ–ನಾಲ್ಕು ವಿಚಾರಗಳು, 5–1, ಡಿಸೆಂಬರ್ 87, ಪುಟ. 100.

ಪಂಪನು ಮೊದಲು ಸಮಸ್ತ ಭಾರತವನ್ನು ಬರೆದು ಮತ್ತೆ ಅದನ್ನು ವಿಕ್ರಮಾರ್ಜುನ ವಿಜಯವನ್ನಾಗಿಸಿದನೇ ? 6–2, ಡಿಸೆಂಬರ್ 93, ಪುಟ. 3.

ಸೂರ್ಯನಾಥ ಕಾಮತ್

ಮೈಲಾರ ದೇವರು, 2–2, ಡಿಸೆಂಬರ್ 84, ಪುಟ. 181.

ಸೇಡಿಯಾಪು ಕೃಷ್ಣಭಟ್ಟ

ಛಂದೋವತಂಸ, 4–12, 1986, ಪು. 75.

'ಛಂದೋಗತಿ'ಯ ವಿಮರ್ಶೆ–ಪ್ರತಿಕ್ರಿಯೆ, 1–1, ಜೂನ್ 88, ಪುಟ. 105.

ಶ್ರೀಮಾನ್ ರಂಗನಾಥಶರ್ಮರ "ಅಭಿಪ್ರಾಯಕ್ಕೆ ಒಂದು ಪ್ರತಿಕ್ರಿಯೆ", 6–2, ಡಿಸೆಂಬರ್ 93, ಪುಟ. 79.

ಕ್ರಿಯಾಸಮಾಸ, 8–1, ಜೂನ್ 95, ಪುಟ. 1.

ಸರಸ್ವತೀ ಮತ್ತು ದೃಷದ್ವತೀ, 9-1, ಜೂನ್ 96, ಪುಟ. 1.

ಸೋಮಜೆ ಮಹಾಲಿಂಗಭಟ್ಟ

ಬೌದ್ಧಾವತಾರ—ಒಂದು ಟಿಪ್ಪಣಿ, 8–2, ಡಿಸೆಂಬರ್ 95, ಪುಟ. 65.

ಹಿರೇಮಗಳೂರು ಕಣ್ಣನ್

ಎನ್ನ ಕೂಗಿದಿರಾ (ಕವನ), 2–2, ಡಿಸೆಂಬರ್ 84, ಪುಟ. 219.

ಹೆಗಡೆ ಜಿ. ಎಂ.

ಮಾಸ್ತಿಯವರ ಅನುಭವದ ಬೆಳಕಿನಲ್ಲಿ ಬಿ.ಎಂ.ಶ್ರೀ, ಡಿಸೆಂಬರ್ 84, ಪುಟ. 63.

ಲೋಚನ/ಕರ್ನಾಟಕ ಲೋಚನ–ಗ್ರಂಥ ವಿಮರ್ಶೆ

(1983 ರಿಂದ 1997ರ ವರೆಗೆ)

ಲೇಖಕ/ಅನುವಾದಕ/ಸಂಪಾದಕ	ಗ್ರಂಥದ ಹೆಸರು	ವಿಮರ್ಶಕರು	ಸಂಪುಟ, ಸಂಚಿಕೆ, ಪುಟ
ಅನಂತರಾಮುನ್, ಮು. ನ.	ಕನ್ನಡ ಕಾವ್ಯಗಳಲ್ಲಿ ನವರಸಗಳು	ಟಿ. ಕೇಶವಭಟ್ಟ	2–1, ಜೂನ್ 84, ಪುಟ. 72.
ಆನೇಕಲ್ ಕೃಷ್ಣಮೂರ್ತಿ ಕಾಟಿ	ಹೃದಯ ಮೃದಂಗ (ಭಾವ ಗೀತಗಳು)	–,,–	8–2, ಡಿಸೆಂಬರ್ 95, ಪುಟ. 71.
—,,—	ಹತ್ತರೊಳಗೊಂದು ಮುತ್ತಾಗು (ದೇಶಭಕ್ತಿ ಗೀತೆಗಳು)	–,,–	—,,— ಪುಟ. 70.
ಐತಾಳ ಶಂಸ (ಅನು)	ಸ್ವಾಮಿ ನಿರ್ಮಲಾನಂದ (ಸತ್ಯಶೋಧಕನ ಜೀವದ ಕಥಾವಳಿ)	ಜಿ. ವೆಂಕಟಸುಬ್ಬಯ್ಯ	2–2, 3–1, ಡಿಸೆಂಬರ್ 89, ಜೂನ್ 90, ಪುಟ. 96.
ಕುಮಾರ ಸಿಜಗುಣ	ವೃತ್ತ ವಿಲಾಸ ವೈಭವ	ಗರ್ಗೇಶ್ವರಿ ವೆಂಕಟಸುಬ್ಬಯ್ಯ	8–1, ಜೂನ್ 95, ಪುಟ. 57.
ಕೃಷ್ಣದಾಸ (ಮುನ್ನಾರು ಕೃಷ್ಣಯ್ಯ)	ಕನ್ನಡ ಸುಲಭ ಸಂಕ್ಷೇಪ ರಾಮಾಯಣ	ಎನ್. ರಂಗನಾಥ ಶರ್ಮ	1-1, ಜೂನ್ 88, ಪುಟ. 85.

ಲೇಖಕ/ಅನುವಾದಕ/ಸಂಪಾದಕ	ಗ್ರಂಥದ ಹೆಸರು	ವಿಮರ್ಶಕರು	ಸಂಪುಟ, ಸಂಚಿಕೆ, ಪುಟ
ಕೃಷ್ಣಭಟ್ಟ ತಾಳ್ತಜೆ	ರಾವಣ ಚರಿತೊ (ತುಳು ಕೃತಿ)	ಟಿ. ಕೇಶವ ಭಟ್ಟ	1–2, ಡಿಸೆಂಬರ್ 88, ಪುಟ. 88.
ಕೃಷ್ಣಶರ್ಮ ಯ.	ಹವ್ಯಾಸ ಲೇಖನಗಳು	ಎಸ್. ರಾಮಚಂದ್ರ ಶಾಸ್ತ್ರಿ	3-2, ಡಿಸೆಂಬರ್ 85, ಪುಟ. 54.
—,,—	"ಕವಿರಾಜ ಮಾರ್ಗದ ಅಲಂಕಾರಾಂತ–ರ್ಭಾವವಾದ"	ಪಿ. ವಿ. ಜೋಶಿ	4–2, ಡಿಸೆಂಬರ್ 91, ಪುಟ. 60.
ಕೇಶವಭಟ್ಟ ಟಿ.	ಶ್ರೀ ಗುರು ಚರಿತ್ರಾಮೃತಂ	ಎನ್. ರಂಗನಾಥ ಶರ್ಮ	3–2, ಡಿಸೆಂಬರ್ 90, ಪುಟ. 126.
—,,—	ಹವ್ಯಕರ ಶೋಭಾನೆಗಳು	ಜಿ. ವೆಂಕಟಸುಬ್ಬಯ್ಯ	5–1, ಜೂನ್ 87, ಪು. 107.
—,,—	ಕನ್ನಡದ ಪ್ರಾಚೀನ ಸಾಹಿತ್ಯ ಲಕ್ಷಣಗಳು–ಮರುನೋಟ	—,,—	3–2, ಡಿಸೆಂಬರ್ 90, ಪುಟ. 122.
—,,—	ಕನ್ನಡ–ಕನ್ನಡ ಸುವರ್ಣ ಕೋಶ,	ಆರ್. ಶಂಕರನಾರಾಯಣ್	7–2, ಡಿಸೆಂಬರ್ 94, ಪುಟ. 73.
—,,—	ಭಾಷಾ ದೀಪಿಕೆ	ಶ್ರೀ ಕೃಷ್ಣಭಟ್ ಅರ್ತಿಕಜೆ	7–2, ಡಿಸೆಂಬರ್ 94, ಪುಟ. 78.
ಖಂಡಿಗೆ ಎಸ್. ಬಿ.	ಶ್ರೀಕೃಷ್ಣ ಕಥಾ ಮಂಜರಿ–ಸಂಪುಟ–2	ಟಿ. ಕೇಶವ ಭಟ್ಟ	9–2, ಡಿಸೆಂಬರ್ 96, ಪುಟ. 61.
ಗೀತಾಚಾರ್ಯ ನಾ.	ಕನ್ನಡ ಶಾತ್ತುಮೊರೆ	ಮಾ.ವೆಂ. ಶ್ರೀನಾಥ್	10–2, ಡಿಸೆಂಬರ್ 97, ಪುಟ. 53.

ಲೇಖಕ/ಅನುವಾದಕ/ಸಂಪಾದಕ	ಗ್ರಂಥದ ಹೆಸರು	ವಿಮರ್ಶಕರು	ಸಂಪುಟ, ಸಂಚಿಕೆ, ಪುಟ
ಗೋವಿಂದರಾಜು ಎಂ.	ಅವ್ವನ ವಚನಗಳು	ಮಾ.ವೆಂ. ಶ್ರೀನಾಥ್	10–2, ಡಿಸೆಂಬರ್ 97, ಪುಟ. 53.
—,,—	ನೂರು ಸರ್ವಜ್ಞ ವಚನಗಳು (ತಿರುಕ್ಕುರಳ್ ಸಂವಾದಿ ಪದ್ಯಗಳೊಡನೆ)	ಟಿ. ಕೇಶವ ಭಟ್ಟ	8-2, ಡಿಸೆಂಬರ್ 95, ಪುಟ. 71.
ಜಯರಾಮಕಾರಂತ ಮತ್ತು ನಂದಳಿಕೆ ಚಂದ್ರರಾವ್	ಮುದ್ದಣನಿಗೆ ನಮನ	ಟಿ. ಕೇಶವ ಭಟ್ಟ	10–2, ಡಿಸೆಂಬರ್ 97, ಪುಟ. 47.
ತಲೆಂಗಳ ರಾಮಕೃಷ್ಣ ಭಟ್ಟ	ಯಜ್ಞ	ಟಿ. ಕೇಶವ ಭಟ್ಟ	9–2, ಡಿಸೆಂಬರ್ 96, ಪುಟ. 58.
ತಾಳ್ತಜೆ ವಸಂತಕುಮಾರ	ಸಾರಸ	ಪ್ರ. ವೆಂ. ಜೋಶಿ	2–2, 3–1, ಡಿಸೆಂಬರ್ 89, ಜೂನ್ 90, ಪು. 107.
ತಿಮ್ಮಪ್ಪದಾಸರು (ಸಂ.ಎಂ.ವಿ.ಸೀ)	ಧ್ರುವ ಚರಿತ್ರೆ	ಎನ್. ರಂಗನಾಥ ಶರ್ಮ	2–1, ಜೂನ್ 84, ಪುಟ, 67.
ತುಳಸಿ ವೇಣುಗೋಪಾಲ (ಶ್ರೀಮತಿ)	ಮುಂಜಾವಿಗೆ ಕಾದವಳು	ಕೆ. ಬಿ. ಲೋಕೇಶ್ವರಪ್ಪ	6-2, ಡಿಸೆಂಬರ್ 93, ಪುಟ. 90.
ದ್ವಾರಕನಾಥ್ ಎಚ್. ಕಬಾಡಿ	ಸ್ವಪ್ನ–ಸೋಪಾನ	ಜಿ. ಅಬ್ದುಲ್ ಬಷೀರ್	6–1, ಜೂನ್ 93, ಪುಟ. 57.

ಲೇಖಕ/ಅನುವಾದಕ/ಸಂಪಾದಕ	ಗ್ರಂಥದ ಹೆಸರು	ವಿಮರ್ಶಕರು	ಸಂಪುಟ, ಸಂಚಿಕೆ, ಪುಟ
ದೊಡ್ಡರಂಗೇಗೌಡ	ಯುಗವಾಣಿ (ಕವನ ಸಂಗ್ರಹ)	ವಿ. ಎನ್. ನರಹರಿ	10–1, ಜೂನ್ 97, ಪುಟ. 59.
ನಗುವನಹಳ್ಳಿ ರತ್ನ	ಶರಣ–ಸರಣಿ	ಸರ್ವಮಂಗಳಾ	10–1, ಜೂನ್ 97, ಪುಟ. 63.
ಪಂಡಿತಾರಾಧ್ಯ, ಎಂ. ಎನ್. ವಿ. (ಸಂ.)	ಹಟ್ಟಿಯಂಗಡಿ ನಾರಾಯಣರಾಯರ "ಆಂಗ್ಲ ಕವಿತಾವಳಿ"	ಪ್ರ. ವೆಂ. ಜೋಶಿ	2–2, 3–1, ಡಿಸೆಂಬರ್ 89, ಜೂನ್ 90, ಪುಟ. 105.
ಪರಮೇಶ್ವರಭಟ್ಟ ಎಸ್. ವಿ.	ಕಾಳಿದಾಸನ ಕೃತಿಗಳು	ಕೆ. ಬಿ. ಲೋಕೇಶ್ವರಪ್ಪ	5–2, ಡಿಸೆಂಬರ್ 92, ಪುಟ. 90.
ಪ್ರಭಾವತಿ ಎಸ್. ವಿ.	ಕನ್ನಡ ಸಾಹಿತ್ಯದಲ್ಲಿ ದ್ರೌಪದಿ	ಡಾ|| ವಿಜಯಾ ಸುಬ್ಬರಾಜ್	6–1, ಜೂನ್ 93, ಪುಟ. 50.
ಪಾದೇಕಲ್ಲು ವಿಷ್ಣುಭಟ್ಟ (ಸಂ.)	ಸ್ಕಂದ ವೈಭವ	ಟಿ. ಕೇಶವ ಭಟ್ಟ	7–1, ಜೂನ್ 94, ಪುಟ. 55.
ಪೀಟರ್ ಜೆ. ಕ್ಲಾಸ್ (ಮೂಲ) (ಅನು : ಎ. ವಿ. ನಾವಡ ಮತ್ತು ಸುಭಾಶ್ಚಂದ್ರ)	ತುಳುವ ದರ್ಶನ	—,,—	3–2, ಜೂನ್ 90, ಪುಟ. 131.
ಪುಷ್ಪಾನಂದ ಉಳ್ಳಾಲ್	ಗಾಢವಾದ ಮುದ್ರೆಗಳು	ಟಿ. ಕೇಶವ ಭಟ್ಟ	8–2, ಡಿಸೆಂಬರ್ 95, ಪುಟ. 70.

ಲೇಖಕ/ಅನುವಾದಕ/ಸಂಪಾದಕ	ಗ್ರಂಥದ ಹೆಸರು	ವಿಮರ್ಶಕರು	ಸಂಪುಟ, ಸಂಚಿಕೆ, ಪುಟ
ಪೆರ್ಲ ಕೃಷ್ಣಭಟ್ಟ	ರಾಮಾಯಣ ಉಪನ್ಯಾಸಗಳು (1996)	—,,—	9–1, ಜೂನ್ 96, ಪುಟ. 86.
ಬಾಲಕೃಷ್ಣಭಟ್ಟ ಕೆ. ಎಂ.	ಶ್ರೀಕೃಷ್ಣ ಕಥಾಮಂಜರಿ ಸಂಪುಟ—1, (1995)	ಟಿ. ಕೇಶವ ಭಟ್ಟ	9–2, ಡಿಸೆಂಬರ್, 96, ಪುಟ. 61.
ಭಾನುಮತಿ ವೈ. ಸಿ.	ಗ್ರಂಥ ಸಂಪಾದನೆ : ಕೆಲವು ಅಧ್ಯಯನ	ಎಸ್. ಶಿವಣ್ಣ	10–2, ಡಿಸೆಂಬರ್ 97, ಪು. 39.
ಭಾರತೀರಮಣಾಚಾರ್ಯ	ಶ್ರೀರಾಮಚರಿತ–ಮಾನಸ–ಮಕರಂದ ವ್ಯಾಖ್ಯೆ (ಬಾಲಕಾಂಡ ಸಂ. 1)	ಸರಗು ಕೃಷ್ಣಮೂರ್ತಿ	8–1, ಜೂನ್ 95, ಪು. 59.
ಭೂಸನೂರಮಠ ಆರ್. ಸಿ.	ಎಳೆಹೂಟಿ (ನಾಟಕ)	ಎನ್. ಬಸವಾರಾಧ್ಯ	6–2, ಡಿಸೆಂಬರ್ 93, ಪುಟ. 91.
ಮಿತ್ರ ಅ. ರಾ.	ಛಂದೋಮಿತ್ರ	ಎಂ. ಕೆ. ಗೋಪಿನಾಥ್	5–1, ಜೂನ್ 92, ಪುಟ. 68.
ಮೊಳೆಯಾರ ವಿ. ಬಿ.	ಸುಬ್ಬಂಣನ ತ್ರಿಪದಿಗಳು	ಟಿ. ಕೇಶವ ಭಟ್ಟ	9–2, ಡಿಸೆಂಬರ್ 96, ಪುಟ. 60.
ರಾಮಕೃಷ್ಣರಾವ್ ಕೆ. ಎಸ್.	Swamy Nirmalananda (A Life in quest of truth)	ಜಿ. ವೆಂಕಟಸುಬ್ಬಯ್ಯ	2–2, 3–1, ಡಿಸೆಂಬರ್ 89, ಜೂನ್ 90, ಪುಟ. 96.

ಲೇಖಕ/ಅನುವಾದಕ/ಸಂಪಾದಕ	ಗ್ರಂಥದ ಹೆಸರು	ವಿಮರ್ಶಕರು	ಸಂಪುಟ, ಸಂಚಿಕೆ, ಪುಟ
ರಾಮಚಂದ್ರರಾವ್ ಎಸ್. ಕೆ.	Pratima Kosa-Vol. I. (An Encyclopaedia of Indian Iconography)	ದೇವರಕೊಂಡಾರೆಡ್ಡಿ	2-1, ಜೂನ್ 89, ಪುಟ. 46.
ರಾಮಸ್ವಾಮಿ ಅಯ್ಯಂಗಾರ್ (ಸರಳ ಕವಿ ಆಸೂರಿ)	ಮಾರುತಿ ಭಕ್ತಿ ದರ್ಪಣ	ನಾ. ಗೀತಾಚಾರ್ಯ	4-1, ಜೂನ್ 91, ಪುಟ. 65.
ರಾವ್ ಎಸ್. ವಿ.	ತುಳುನಾಡ ಸಿರಿ	ಟಿ. ಕೇಶವ ಭಟ್ಟ	3-2, ಡಿಸೆಂಬರ್ 85, ಪುಟ. 56.
ವಜೀರ್ ಅಹ್ಮದ್ ಎಂ.	ಬಿ.ಎಂ.ಶ್ರೀ	ಮಾ. ವೆಂ. ಶ್ರೀನಾಥ್	10-2, ಡಿಸೆಂಬರ್ 97, ಪುಟ. 51.
ವೆಂಕಟಸುಬ್ಬಯ್ಯ ಜಿ.	ಇಗೋ ಕನ್ನಡ	ಟಿ. ಕೇಶವ ಭಟ್ಟ	10-1, ಜೂನ್ 97, ಪುಟ. 56.
—,,—	ಕನ್ನಡ ನಿಘಂಟು ಶಾಸ್ತ್ರ ಪರಿಚಯ	ಗರ್ಗೇಶ್ವರಿ ವೆಂಕಟಸುಬ್ಬಯ್ಯ	8-1, ಜೂನ್ 95, ಪುಟ. 65.
—,,—	ಮುದ್ದಣ ಪದ ಪ್ರಯೋಗಕೋಶ	ಟಿ. ಕೇಶವ ಭಟ್ಟ	9-1, ಜೂನ್ 96, ಪುಟ. 83.
ವೆಂಕಟೇಶ ಆರ್.	ವಿಚಾರ ತರಂಗ	ಜಾ. ಗೋ.	4-1, 2, 1986, ಪುಟ. 99.
ವೆಂಕಟಾಚಲಶಾಸ್ತ್ರೀ ಟಿ. ವಿ.	ಕನ್ನಡ ಚಿತ್ರ ಕಾವ್ಯ	ಡಾ॥ ಕೆ. ಅನಂತರಾಮು	5-2, ಡಿಸೆಂಬರ್ 87, ಪು. 48.

ಲೇಖಕ/ಅನುವಾದಕ/ಸಂಪಾದಕ	ಗ್ರಂಥದ ಹೆಸರು	ವಿಮರ್ಶಕರು	ಸಂಪುಟ, ಸಂಚಿಕೆ, ಪುಟ
ವೆಂಕಟರಾಜ ಪುಣಿಂಚತ್ತಾಯ	ಕಾವೇರಿ (ಪಾಚೀನ ತುಳು ಕಾವ್ಯ)	ಟಿ. ಕೇಶವ ಭಟ್ಟ	5–1, ಜೂನ್ 87, ಪುಟ. 111.
ವೆಂಕಟರಾಯಚಾರ್ಯ ಕೆ.	ಸಾಹಿತ್ಯ ಪ್ರಭ	ನಾ. ಗೀತಾಚಾರ್ಯ	3–2, ಡಿಸೆಂಬರ್ 85, ಪುಟ. 60.
ಶಂಕರನಾರಾಯಣ ಆರ್.	ತುಳಸೀ—ಬಿಲ್ವ	—,,—	4–1, ಜೂನ್ 91, ಪುಟ. 68.
—,,—	ಶ್ರೀ ಕನ್ಯಕಾಪರಮೇಶ್ವರೀ ಚರಿತಾಮೃತ	—,,—	4–1, ಜೂನ್ 91, ಪುಟ. 67.
—,,—	ಶ್ರೀ ಯಾಜ್ಞವಲ್ಕ್ಯ ಋಷಿ ಚರಿತಾಮೃತ	ಟಿ. ಕೇಶವ ಭಟ್ಟ	6–1, ಜೂನ್ 93, ಪುಟ. 61.
—,,—	ಸಾಹಿತ್ಯದ ಚತುರ್ಮುಖರು	ಎನ್. ರಂಗನಾಥಶರ್ಮ	7–1, ಜೂನ್ 94, ಪುಟ. 53.
—,,— (ಅನು.)	ಶ್ರೀಶಂಕರ ಬೋಧಾಮೃತ	—,,—	7–2, ಡಿಸೆಂಬರ್ 94, ಪುಟ. 75.
—,,—	ಹೈಮಾವತೀ ಪರಿಣಯ	—,,—	9–1, ಜೂನ್ 96, ಪುಟ. 81.
—,,—	ಶ್ರೀ ಅನಂತಪದ್ಮನಾಭ ಕಥಾಮೃತ	ಟಿ. ಕೇಶವ ಭಟ್ಟ	6–2, ಡಿಸೆಂಬರ್ 93, ಪುಟ. 89,
—,,—	ಸೌಂದರ್ಯ ಲಹರಿ ಮತ್ತು ಕನಕಧಾರಾ ಸ್ತೋತ್ರ	—,,—	10–2, ಡಿಸೆಂಬರ್ 97, ಪುಟ. 43.
ಕೆ. ಶಾಂತ (ಸಂ.)	ಸ್ಮೃತಿ ಪುಷ್ಪ	ಜಿ. ಆರ್. ಶೇಷಗಿರಿ	6-1, ಜೂನ್ 93, ಪುಟ. 60.

ಲೇಖಕ/ಅನುವಾದಕ/ಸಂಪಾದಕ	ಗ್ರಂಥದ ಹೆಸರು	ವಿಮರ್ಶಕರು	ಸಂಪುಟ, ಸಂಚಿಕೆ, ಪುಟ
ಶಾಂತಿರಾಜಶಾಸ್ತ್ರಿ ಎ.	ಜಿನಭಜನಸಾರ	ವಿ. ವೆಂಕಟರಾವ್	
—,,—	ಜೈನ ಧರ್ಮದ ಸನಾತನತ್ವ	—,,—	
—,,—	ದ್ರವ್ಯ ಸಂಗ್ರಹ	—,,—	1-2, ಡಿಸೆಂಬರ್ 88, ಪುಟ. 83.
—,,—	ದ್ವಾದಶಾನುಪ್ರೇಕ್ಷೆ	—,,—	
—,,—	ಸಾರೀ-ಕರ-ದರ್ಪಣ	—,,—	
—,,—	ನೇಮಿ ಜಿನೇಶ ಸಂಗತಿ	ಡಿ. ವಿ. ಪರಮಶಿವಮೂರ್ತಿ	3–2, ಡಿಸೆಂಬರ್ 90, ಪುಟ. 133.
—,,—	ಪರಮಾತ್ಮ ಬೋಧೆ	ವಿ. ವೆಂಕಟರಾವ್	1–2, ಡಿಸೆಂಬರ್ 88, ಪುಟ. 83.
—,,—	ಶ್ರೀನೇಮಿಚಂದ್ರ ಸಿದ್ಧಾಂತ ಚಕ್ರವರ್ತಿ ವಿರಚಿತ ದ್ರವ್ಯ ಸಂಗ್ರಹ (ಜೈನ ಸಿದ್ಧಾಂತ)	ಟಿ. ಕೇಶವ ಭಟ್ಟ	8–2, ಡಿಸೆಂಬರ್ 95, ಪುಟ. 71.
ಶಿವಕವಿ ಎನ್. ಶಿವನಗೌಡ	ನಾಡಕವಿ ವೇಮಣ್ಣ	ಮಾ. ವೆಂ. ಶ್ರೀನಾಥ್	10–2, ಡಿಸೆಂಬರ್ 97, ಪುಟ. 49.
ಶಿವಸ್ವಾಮಿ ಜಿ. ವಿ.	ವೀರಶೈವ ಧರ್ಮ ದರ್ಶನ	ಟಿ. ಕೇಶವಭಟ್ಟ	8–2, ಡಿಸೆಂಬರ್ 95, ಪುಟ. 70.
ಶಿವರಾಮ ಹೆಗಡೆ	ಮಕ್ಕಳ ಲೋಕ	ಡಿ. ವಿ. ಪರಮಶಿವಮೂರ್ತಿ	5–1, ಜೂನ್ 92, ಪುಟ. 78.

ಲೇಖಕ/ಅನುವಾದಕ/ಸಂಪಾದಕ	ಗ್ರಂಥದ ಹೆಸರು	ವಿಮರ್ಶಕರು	ಸಂಪುಟ, ಸಂಚಿಕೆ, ಪುಟ.
ಶ್ರೀನಿವಾಸಭಟ್ಟ ಪು.	ಜೀವಧರ್ಮಸಾರ ನೀತಿಸಾರ	ಜಿ. ವೆಂಕಟಸುಬ್ಬಯ್ಯ	1–2, ಡಿಸೆಂಬರ್ 88, ಪುಟ. 90.
ಸತ್ಯನಾರಾಯಣ್ ಆರ್.	ಪರಿಣಯ ಪ್ರಬಂಧ	ಟಿ. ಕೇಶವಭಟ್ಟ	10–1, ಜೂನ್ 97, ಪುಟ. 58.
ಸದ್ಯೋಜಾತಮೂರ್ತಿ	ಹಂಸಗಳು ಹರಿಣಗಳು	ಕೆ. ಬಿ. ಲೋಕೇಶ್ವರಪ್ಪ	6–2, ಡಿಸೆಂಬರ್ 93, ಪುಟ. 91.
ಸರೋಜಮ್ಮ ಎಂ. ಎಸ್.	ಮಾನಸ ಹಂಸ	ಎಚ್. ವಿ. ರಾಮಚಂದ್ರರಾವ್	9–2, ಡಿಸೆಂಬರ್ 96, ಪುಟ. 63.
ಸ್ವಾಮಿ ನಿರ್ಮಲಾನಂದ	ಜೀವಧರ್ಮಸಾರ ನೀತಿಸಾರ	ಜಿ. ವೆಂಕಟಸುಬ್ಬಯ್ಯ	1–1, ಡಿಸೆಂಬರ್ 88, ಪುಟ. 90.
ಸಿದ್ಧಗಂಗಯ್ಯ ಡಿ.	ಶರಭ ಚಾರಿತ್ರ	ಎಚ್. ವಿ. ರಾಮಚಂದ್ರರಾವ್	10-1, ಜೂನ್ 97, ಪುಟ. 61.
ಸಿದ್ಧಯ್ಯ ಪುರಾಣಿಕ (ಸಂ.)	ಮಳೆಯರಾಜ ಚಾರಿತ್ರ	ಟಿ. ಕೇಶವ ಭಟ್ಟ	3-2, ಡಿಸೆಂಬರ್ 90, ಪು. 129.
ಸೀತಾರಾಮಯ್ಯ ಎಂ. ವಿ. (ಪ್ರ.ಸಂ.)			
ಶ್ರೀ ಕೃಷ್ಣ ಭಟ್ ಅರ್ತಿಕಜೆ ಮತ್ತು ಎಂ. ಜಿ. ಹೆಗಡೆ(ಸಂ.)	ಸೂತಭಾರತ (ಸ್ವರ್ಗಾರೋಹಣ ಪರ್ವ)	ಎನ್. ರಂಗನಾಥ ಶರ್ಮ	2–1, ಜೂನ್ 84, ಪುಟ. 62.
ಸೀತಾಸುತ	ಹಿರೋಷೀಮಾ	ಎಂ. ಆರ್.ರಾಮಯ್ಯ	4-1, 2, 1986, ಪುಟ. 102.

ಲೇಖಕ/ಅನುವಾದಕ/ಸಂಪಾದಕ	ಗ್ರಂಥದ ಹೆಸರು	ವಿಮರ್ಶಕರು	ಸಂಪುಟ, ಸಂಚಿಕೆ,ಪುಟ.
ಸೀತಾರಾಮ ಕೆದಿಲ್ಲಾಯ, ಕೆ.ಪು.	ಛಂದೋದರ್ಪಣ–ಒಂದು ಸಮೀಕ್ಷೆ	ನ. ಕೃಷ್ಣಜೋಯಿಸ್	5–2, ಡಿಸೆಂಬರ್ 87, ಪುಟ. 52.
ಹಿರೇಮಠ, ಬಿ. ಆರ್.	ಶಾಸನಗಳಲ್ಲಿ ಕರ್ನಾಟಕದ ವರ್ತಕರು	ಪಿ. ವಿ. ಕೃಷ್ಣಮೂರ್ತಿ	5–2, ಡಿಸೆಂಬರ್ 87, ಪುಟ. 52.
ಹೇಟ್ (ಬಲನಾಡು), ಎಸ್.	ಚಿಂತನೆಗಳು 1) ಸಮುಚಿತ 2) ಸಂಕುಲ	ಟಿ. ಕೇಶವ ಭಟ್ಟ	9–2, ಡಿಸೆಂಬರ್ 96, ಪುಟ. 59.
ಹೊಸಮನೆ, ವಿ. ಬಿ. (ಸಂ.)	ಗುಂಡ್ಮಿ ವಿಚಾರ ಪರ್ವ	—,,—	5-2, ಡಿಸೆಂಬರ್ 92, ಪುಟ. 89.

ಸಮಸ್ಯಾಪೂರಣ ಲೇಖಕ ಸೂಚಿ

ವಿದ್ವತ್ಪತ್ರಿಕೆಯಾಗಿರುವ 'ಕರ್ನಾಟಕ ಲೋಚನ'ದಲ್ಲಿ ವಿದ್ವತ್ಕವಿತಾ ರಚನೆಗೂ ಮಾನ್ಯತೆ ನೀಡುವುದಕ್ಕಾಗಿ ಪದ್ಯದ 'ಸಮಸ್ಯಾಪೂರಣ' ಎಂಬ ಅಂಕಣವನ್ನು ಆರನೆಯ ಸಂಪುಟ (ಜೂನ್ 1993) ದಿಂದ ಪ್ರಾರಂಭಿಸಲಾಗಿದೆ. ಇದು ಕನ್ನಡದ ಅತಿಶಯ ಲಕ್ಷಣವೆನಿಸುವ ಪ್ರಾಸ–ಪಾದ–ಛಂದೋಬದ್ಧ ಪದ್ಯ ರಚನೆಗೆ ಸಜೀವತೆಯನ್ನು ನೀಡುವ ಉದ್ದೇಶವುಳ್ಳುದಾಗಿದೆ. ಈ ದಿಸೆಯಲ್ಲಿ ಸಂಪುಟ 6 ರಿಂದ 10ರ ವರೆಗೆ ನೀಡಿದ್ದ ಸಮಸ್ಯಾ ಪಾದಗಳನ್ನು ಈ ಕೆಳಗೆ ಭಾಗ 1ರಲ್ಲಿ ನೀಡಿ ಅವುಗಳಿಗೆ ಕ್ರಮಸಂಖ್ಯೆಯನ್ನು ಕೊಟ್ಟಿದೆ. ಅನಂತರ ಭಾಗ 2 ರಲ್ಲಿ ವಿದ್ವಾಂಸರಿಂದ ಬಂದ ಸಮಸ್ಯಾಪೂರಣ ಪದ್ಯಗಳ ಮೊದಲ ಪಾದವನ್ನು ಅಕಾರಾದಿಯಾಗಿ ಆಯಾ ವಿದ್ವಾಂಸರ ಶೀರ್ಷಿಕೆಯಡಿಯಲ್ಲಿ, ಅವು ಪ್ರಕಟವಾದ ಸಂಪುಟ, ಸಂಚಿಕೆ, ಪುಟ ಹಾಗೂ ಸಮಸ್ಯಾಪಾದದ ಕ್ರಮಸಂಖ್ಯೆಯನ್ನು ಆವರಣದಲ್ಲಿ ನೀಡಿ ಇಲ್ಲಿ ದಾಖಲಿಸಲಾಗಿದೆ.

ಭಾಗ—1

ಕ್ರ.ಸಂ.	ಸಮಸ್ಯಾ	ಆಕರ	ಸೂಚಕರು
1.	ಧ್ವನಿಯೆಂಬುದಳಂಕಾರಂ	(ಕವಿರಾಜ ಮಾರ್ಗ)	ಪ್ರೊ॥ ಗರ್ಗೇಶ್ವರಿ ವೆಂಕಟಸುಬ್ಬಯ್ಯ 6–1, ಜೂನ್ 93, ಪುಟ. 72.
2.	ಕಸವರಮಂ ಕಳೆದು ಕಸವ ನಾಂತವೊಲಕ್ಕುಂ	(ರಾಜಶೇಖರ ವಿಳಾಸ)	ವಿದ್ವಾನ್ ಎನ್. ರಂಗನಾಥಶರ್ಮಾ 6–1, ಜೂನ್ 93, ಪುಟ. 73.

ಕ್ರ.ಸಂ.	ಸಮಸ್ಯಾ	ಆಕರ	ಸೂಚಕರು
3.	ಕರುಣೇ ಜನವೊಲಿಯು ದಿರ್ದೊಡೇಂ ಶೋಕಿಪೆಯೋ		ಪ್ರೊ|| ಗರ್ಗೇಶ್ವರಿ ವೆಂಕಟಸುಬ್ಬಯ್ಯ 6–2, ಡಿಸೆಂಬರ್ 93, ಪುಟ. 2
4.	ದನವಂ ಸಂಗೀತದಿಂದ ಸಲೆ ರಂಜಿಸಿದಂ		ವಿದ್ವಾನ್ ಟಿ. ಕೇಶವ ಭಟ್ಟ 7–1, ಜೂನ್ 94, ಪುಟ. 3
5.	ಟಂಟಂಟ ಟಂಟಂಟ ಟ ಟಂಟ ಟಂಟ	(ಭೋಜ ಪ್ರಬಂಧ)	ಪ್ರೊ|| ಗರ್ಗೇಶ್ವರಿ ವೆಂಕಟಸುಬ್ಬಯ್ಯ 7–2, ಡಿಸೆಂಬರ್ 94, ಪುಟ. 5
6.	ಸತಿಯೊಲಿಯೆ ಸದ್ವಿದ್ಯೆಗಳ ಕಲಿಯೊ ಮಗುವೇ		8–1, ಜೂನ್ 95, ಪುಟ. 5
7.	ಮುತ್ತಿದುವಲ್ತೆ ತುಂಬಿಗಳ ಗುಂಪುಗಳೊಮ್ಮೆಲೆ ಚಂದ್ರ ಬಿಂಬಮಂ		ಅಷ್ಟಾವಧಾನಿ ಆರ್. ಗಣೇಶ್ 8–2, ಡಿಸೆಂಬರ್ 95, ಪುಟ. 4
8.	ತರಳೆಯುರು ತುಂಬಿದರು ಮರಿದುಂಬಿಗಳ ಡೊಂಬಿನಲಿ	(ಕುಮಾರವ್ಯಾಸಭಾರತ)	9–1, ಜೂನ್ 96, ಪು. 4
9.	ನಿನಗೆನಸುಂ ಕರುಣವಿಲ್ಲ ಮರವಾನಸನ್ನೆ	(ಕವಿರಾಜಮಾರ್ಗ)	9–2, ಡಿಸೆಂಬರ್ 96, ಪುಟ. 4
10.	ಭಾವ ಶುದ್ಧಿಯು ಬಹುತಿ ಬೇಹುದು	(ಕುಮಾರವ್ಯಾಸಭಾರತ)	10–1, ಜೂನ್ 97, ಪುಟ. 4

ಭಾಗ—2

ಸೊಸೆಯಾಗಿ ಬಂದಳಂ ಕ (2) 6–2, ಡಿಸೆಂಬರ್ 93, ಪುಟ. 1.

ತಿರುಮಲೇಶ್ವರ ಭಟ್ಟ, ಎಸ್. ವಿದ್ವಾನ್

ಟಂ ಟಂ ಟ ಟಂಟಂಟಟ ಟಂಟ ಟಂ ಟಂ (5) 8–1, ಜೂನ್ 95, ಪುಟ. 4.

ದರ್ಭೆ ನಾರಾಯಣ ಭಟ್ಟ

ಅಸಮಾತ್ಮಾऽऽನಂದಾಮೃತ (2) 6–2, ಡಿಸೆಂಬರ್ 93, ಪುಟ. 2.

ಪರರಂ ಪಳಿಯಲ್ ಮೂಗಂ (3) 7–1, ಜೂನ್ 94, ಪುಟ. 2.

ಮಧುಸೂದನ, ಕೆ. ಎಸ್.

ಕಸುಗಾಯ ಪಿಡಿದು ಪಣ್ಣಂ (2) 6–2, ಡಿಸೆಂಬರ್ 93, ಪುಟ. 2.

ಪಶುಪತಿಯಂ ಕಳೆದ ಪಶುವ (2) 6-2, ಡಿಸೆಂಬರ್ 93, ಪುಟ. 2.

ಮಳಗಿ, ಎಸ್. ಆರ್

ಒತ್ತರಿಸಿತ್ತು ಕತ್ತಲೆಯ ಹಮ್ಮು ದಿಶೇಶನ ತೇಜಮಟ್ಟಿದ್ರಲ್ (7) 9-1, ಜೂನ್ 96, ಪುಟ. 4.

ತನುಮನ ಒಮ್ಮೆನೆ ಸೋವ (4) 7–2, ಡಿಸೆಂಬರ್ 94, ಪುಟ. 4.

ಶ್ರುತಿಗಳಲಿ ಪಚ್ಛಾಸ್ತ್ರಗಳಲಿ ನೀ ಬೆರೆತು ಸರ (6) 8–2, ಡಿಸೆಂಬರ್ 95, ಪುಟ. 3.

ಮಿತ್ರ, ಅ. ರಾ. ಪ್ರೊ॥

ಉರು ಹೊಡೆದು ಓದೋದಿಸಜಾ (8) 9–2, ಡಿಸೆಂಬರ್ 96, ಪುಟ. 4.

ಪ್ರತಿ ತಿಂಗಳೂ ಸಂಬಳವನು ಸುರಿದರೆ ಸಾಕೆ (6) 8–2, ಡಿಸೆಂಬರ್ 95, ಪುಟ. 4.

ಮುರಳೀಧರ, ಎಚ್. ಎನ್.

ಪಶುಪತಿಯಂ ಕಳೆದ ಪಶುವ (2) 6–2, ಡಿಸೆಂಬರ್ 93, ಪುಟ. 2.

ರಂಗನಾಥ ಶರ್ಮಾ, ಎನ್. ವಿದ್ವಾನ್

ಧ್ವನಿಯೆಂಬುದಳಂಕಾರಂ, (1) 6–1, ಜೂನ್ 93, ಪುಟ. 72.

ಶ್ರೀಧರ ಆರಾಧ್ಯ, ಯಂ. ಎಸ್.

ವರಗುಣವೆ ವಿಭೂಷಣಮಾ (3) 7–1, ಜೂನ್ 94, ಪುಟ. 1.

ಶ್ರೀನಾಥ, ಮಾ. ವೆಂ.

ಕರ ಚರಣಂಗಳ ಲಾಸ್ಯಂ (3) 7–1, ಜೂನ್ 94, ಪುಟ. 2.

ದೇವನೇ ಬೇಗವತರಿಸು ಬಾ (10) 10–2, ಡಿಸೆಂಬರ್ 97, ಪುಟ. 4.

ಶ್ರೀನಿವಾಸಮೂರ್ತಿ ಎಸ್. ಎಲ್.

ಮನಮೋಹಿಪ ಮುರಳೀ ವಾ (4) 7–2, ಡಿಸೆಂಬರ್ 94, ಪುಟ. 5.

ಸಣ್ಣಯ್ಯ, ಬಿ. ಎಸ್.

ಆವ ಕಾರ್ಯದಲ್ಲಿದ್ದರೂ ಸರಿ (10) 10–2, ಡಿಸೆಂಬರ್ 97, ಪುಟ. 3.

ವರಗುಣ ಸಂಪದ್ಭೂಿತನೆ (3) 7–1, ಜೂನ್ 94, ಪುಟ. 3.

ಸದ್ಯೋಜಾತಮೂರ್ತಿ

ತರುಣ ಜನಕೆ ಆನಂದ ಮಾಗಿರ್ದೊಡೆ (3) 7–1, ಜೂನ್ 94, ಪುಟ. 2.

ಧನದೊಳ್ ಮಾನಧನ ಬೆರತರೊಂದರೊಡನೊಂದು (4) 7–2, ಡಿಸೆಂಬರ್ 94, ಪುಟ. 3.

ಮಲಗಿರುವ ಊರವರಂ ಶಯನದಿಂದೆಚ್ಚರಿಸಲ್ಕೇಣ್ (5) 8–1, ಜೂನ್ 95, ಪುಟ. 3.

ಸಮೇತನಹಳ್ಳಿ ರಾಮರಾಯ

ಕತ್ತಲೆ ಮೆತ್ತಿದ ಘನ ನಿಶೀಥದ ಮೌನದಿ ಕುಳ್ಳಿರ್ದಾಪದೋ (5) 9–1, ಜೂನ್ 96, ಪುಟ. 3.

ಧರಣೀ ರಮಣಿಯ ಪಲ್ಲಗೆ (3) 7–1, ಜೂನ್, 94, ಪುಟ. 1.

ಮಿನುಗಿರೆ ಪದಗಳ್ ರಾಗಂ (4) 7-2, ಡಿಸೆಂಬರ್ 94, ಪುಟ. 3.

ವರವಸಂತನ ಬರವಿಗೆಂದೆನೆ (6) 9–2, ಡಿಸೆಂಬರ್ 96, ಪುಟ. 3.

ಸಿಂಹ, ಎಸ್. ಎನ್.

ಅಸ್ತಮಿಸೆಂದು ಪಶ್ಚಿಮದ ರಂಗುಗಳೆಲ್ಲವು ಸೂರ್ಯ ಬಿಂಬವಂ (7) 9–1, ಜೂನ್ 96, ಪುಟ. 3.

ಭಾವ ಶುದ್ಧಿಯ ಬಳುತಿ ಬೇಹುದು (10) 10–2, ಡಿಸೆಂಬರ್ 97, ಪುಟ. 4.

ಸುಬ್ರಹ್ಮಣ್ಯಭಟ್ಟ, ಕೆ. ಡಾ||

ಚ್ಯುತಿಯಿರದ ಸಂಪದವು ವಿದ್ಯೆ ಎಂಬರಲ (6) 8–2, ಡಿಸೆಂಬರ್ 95, ಪುಟ. 4.

ಸೂರ್ಯನಾರಾಯಣರಾವ್, ಎಸ್.

ಈ ಕಲಿ ಕಾಲದಲಿ, ಮಗುವೇ (6) 8–2, ಡಿಸೆಂಬರ್ 95, ಪುಟ. 3.

ಸೋಮುಜೆ ಮಹಾಲಿಂಗ ಭಟ್ಟ

ಘನ ಶಾರೀರದೆ ಸಿರಿಯಾ (4) 7–2, ಡಿಸೆಂಬರ್ 94, ಪುಟ. 4.

ವಸ್ತು ಸಂಗ್ರಹ

1. ವಿಶೇಷ ಸಂಚಿಕೆ ಸಂಪಾದಕೀಯ

ಲೋಚನ 1983 ರಿಂದ ಪ್ರಾರಂಭವಾದ ವಿದ್ವತ್ ಪತ್ರಿಕೆ. ಅಂದಿನಿಂದ 1987 ವರೆಗೆ 10 ಸಂಚಿಕೆಗಳು 'ಲೋಚನ' ಹೆಸರಿನಲ್ಲೂ 1988 ರಿಂದ 'ಕರ್ನಾಟಕ ಲೋಚನ' ಎಂಬ ಹೆಸರಿನಿಂದಲೂ ಪ್ರಕಟವಾಗುತ್ತಿದೆ. ತಾಂತ್ರಿಕ ಕಾರಣಗಳಿಗಾಗಿ ಕರ್ನಾಟಕ ಲೋಚನದ ಸಂಚಿಕೆಗಳನ್ನು 1ನೇ ಸಂಚಿಕೆಯಿಂದ ಪ್ರಾರಂಭಿಸಬೇಕಾಗಿ ಬಂದುದರಿಂದ ಈಗ ಅಂದರೆ ಇಷ್ಟು ತಡವಾಗಿ 'ದಶವಾರ್ಷಿಕ ವಿಶೇಷ' ಸಂಚಿಕೆಯನ್ನು ಹೊರ ತರಬೇಕಾಯಿತು. ವಾಸ್ತವವಾಗಿ ಇದು ಲೋಚನದ 16ನೇ ಸಂಪುಟ ಮತ್ತು 31–32ನೇ ಸಂಚಿಕೆ; 1998ನೇ ಜೂನ್–ಡಿಸೆಂಬರ್‌ಗಳ ಕೂಡು ಸಂಚಿಕೆ.

ಈ ವಿಶೇಷಾಂಕದಲ್ಲಿ ಮುಖ್ಯವಾಗಿ ಎರಡು ಭಾಗಗಳಿವೆ. ಒಂದು ಅಂತರ ಶಿಸ್ತೀಯ ಸಂಶೋಧನ ವಿಧಿ ವಿಧಾನದ ಲೇಖನಗಳ ಭಾಗ, ಇನ್ನೊಂದು ಈವರೆಗಿನ ಲೋಚನ ಸಂಚಿಕೆಗಳ ಲೇಖನ ಸೂಚಿಯ ಭಾಗ. ಇವುಗಳ ಜೊತೆಗೆ ಎಂದಿನಂತೆ ಟೀಕೆ ಟಿಪ್ಪಣಿಗಳು, ಗ್ರಂಥಾವಲೋಕನ, ವಸ್ತು ಸಂಗ್ರಹಗಳಿವೆ.

'ಅಂತರಶಿಸ್ತೀಯ ಸಂಶೋಧನ ವಿಧಿ ವಿಧಾನ' ಒಂದು ವಿಶೇಷ ಉಪನ್ಯಾಸ ಮಾಲೆ. ಲೋಚನಕ್ಕೆ ಹತ್ತು ವರ್ಷ ಆದ ನೆನಪಿಗೆ ಪ್ರತಿಷ್ಠಾನ 21–4–96 ರಿಂದ 28–4–96 ವರೆಗೆ ಈ ಉಪನ್ಯಾಸ ಮಾಲೆಯನ್ನು ವ್ಯವಸ್ಥೆ ಮಾಡಿ ವಿವಿಧ ಗಣ್ಯರಿಂದ ವಿವಿಧ ಶಿಸ್ತುಗಳಲ್ಲಿ ಇರುವ ಸಂಶೋಧನ ವಿಧಿ ವಿಧಾನಗಳನ್ನು ಚರ್ಚಿಸಲಾಗಿತ್ತು. ಇಂದಿನ ತೌಲನಿಕ ಸಾಹಿತ್ಯ ಚರ್ಚೆಗೆ ಅತ್ಯುಪಯುಕ್ತವಾದ ಈ ಉಪನ್ಯಾಸಮಾಲೆ ನೂತನ ಚಿಂತನೆ ಮತ್ತು ಪ್ರಥಮ ಪ್ರಯತ್ನವಾಗಿತ್ತು. ಯಾವುದೇ ಸಂಶೋಧನೆ-ಅಧ್ಯಯನ ತನ್ನ ಗಡಿಯನ್ನು ದಾಟಿ ಅಕ್ಕ ಪಕ್ಕದ ಇತರ ಶಿಸ್ತುಗಳನ್ನೂ ತನ್ನತ್ತ ಬಾಚಿಕೊಳ್ಳುತ್ತಿರುವ ಪ್ರಚಲಿತ ಅಧ್ಯಯನ ವಿಧಾನಕ್ಕೆ ಪೂರಕವಾಗಿ ಅನ್ಯ ಶಿಸ್ತುಗಳ ಪರಿಚಯ ಇತರ ಸಂಶೋಧಕರಿಗೂ ಲಭ್ಯವಾಗಲಿ ಎಂಬ ಕಾರಣಕ್ಕಾಗಿ ಈ ವಿಶೇಷ ಉಪನ್ಯಾಸ ಮಾಲೆಯನ್ನು ಡಾ|| ಎಂ. ಚಿದಾನಂದಮೂರ್ತಿಯವರ ಮಾರ್ಗ ದರ್ಶನದಲ್ಲಿ ಪ್ರತಿಷ್ಠಾನ ನಡೆಸಿತ್ತು ಮತ್ತು ಯಶಸ್ವಿಯೂ ಆಯಿತು. ಈ ಉಪನ್ಯಾಸ

ಗಳ ಧ್ವನಿ ಸಂಗ್ರಹಗಳನ್ನು ಆಧರಿಸಿ ಇಲ್ಲಿಯ ಲೇಖನಗಳನ್ನು ಸಿದ್ಧಪಡಿಸಲಾಗಿದೆ. ಬಹು ಮಟ್ಟಿಗೆ ಲೇಖಕರ ಗಮನಕ್ಕೂ ತಂದು ತಿದ್ದಿಸಲಾಗಿದೆ. ಆದರೂ ಅಪ್ಪಿ ತಪ್ಪಿ ದೋಷ ಗಳು ಉಳಿದಿದ್ದಲ್ಲಿ ಮಾನ್ಯ ಲೇಖಕರು ಮತ್ತು ಓದುಗರು ದಯೆಮಾಡಿ ಮನ್ನಿಸ ಬೇಕಾಗಿ ವಿನಂತಿ. ಲೇಖಕರಿಗೂ ಧ್ವನಿ ಸಂಗ್ರಹವನ್ನು ಲೇಖನ ಮಾಡಿಕೊಟ್ಟ ಸ್ನೇಹಿತರಿಗೂ ಲೋಚನ ಲೇಖನ ಸೂಚಿಯನ್ನು ಸಿದ್ಧ ಮಾಡಿಕೊಟ್ಟ ಡಾ|| ಪಿ. ವಿ. ಕೃಷ್ಣಮೂರ್ತಿಯವರಿಗೂ ಈ ವಿಶೇಷ ಸಂಚಿಕೆಯನ್ನು ಸಂಕಲಿಸಿ ಕೊಟ್ಟ ಗೌ|| ಕಾರ್ಯದರ್ಶಿಗಳಾದ ಶ್ರೀ ನಾ. ಗೀತಾಚಾರ್ಯ ಅವರಿಗೂ ಸಂಪಾದಕ ಮಂಡಲಿ ಆಭಾರಿಯಾಗಿರುತ್ತದೆ.

—ಸಂಪಾದಕ

2) ವಿ. ಸೀ. ಜನ್ಮಶತಾಬ್ದಿ ಸ್ಮರಣೆ :

ಕನ್ನಡದ ಖ್ಯಾತನಾಮರಾಗಿದ್ದ ವಿ. ಸೀತಾರಾಮಯ್ಯನವರ ಜನ್ಮ ಶತಾಬ್ದಿ ವರ್ಷ ಇದಾಗಿದೆ. ಕನ್ನಡ ನಾಡು-ಜನತೆ-ಸಂಘ ಸಂಸ್ಥೆಗಳು ಸಾರ್ಥಕ ರೀತಿಯಲ್ಲಿ ಆಚರಿಸಿ ವಿ.ಸೀ.ಯವರ ಸ್ಮರಣೆ ಮಾಡುವುದರ ಮೂಲಕ ಮುಂದಿನ ಪೀಳಿಗೆಗೆ ಇಂತಹ ಶ್ರೇಷ್ಠ ವ್ಯಕ್ತಿಗಳನ್ನು ಮಾದರಿಯಾಗಿ ರೂಪಿಸಬೇಕಾಗಿದೆ. ಈ ನಿಟ್ಟಿನಲ್ಲಿ ಈಗಾಗಲೆ ವಿ.ಸೀ. ಸಂಪದ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ. ಸರ್ಕಾರವೂ ಈ ಬಗ್ಗೆ ಗಮನಹರಿಸಿ ಅರ್ಥಪೂರ್ಣವಾಗಿ ಈ ಕಾರ್ಯಕ್ರಮವನ್ನು ಆಗಗೊಳಿಸುವ ಹೊಣೆಗಾರಿಕೆಯನ್ನು ಹೊರಬೇಕಾಗಿದೆ.

ವಿ. ಸೀ.ಯವರು ಪ್ರತಿಷ್ಠಾನದ ಹಿತೈಷಿಗಳೂ, ಅಭಿಮಾನಿಗಳೂ ಆಗಿದ್ದರು. ಅವರ ಇಡೀ ಗ್ರಂಥಾಲಯವನ್ನು ಪ್ರತಿಷ್ಠಾನಕ್ಕೆ ಉದಾರವಾಗಿ ನೀಡುವ ಅವರ ವಾಗ್ದಾನವನ್ನು ಅವರ ಮಕ್ಕಳು ನಡೆಸಿಕೊಟ್ಟಿದ್ದಾರಲ್ಲದೆ, ವಿ.ಸೀ. ಸಂಪದದೊಂದಿಗೆ ಸೇರಿ ಪ್ರತಿಷ್ಠಾನದಲ್ಲಿ ದತ್ತಿಯೊಂದನ್ನು ಸ್ಥಾಪಿಸಿದ್ದಾರೆ. ಇಂತಹ ಮಹನೀಯರನ್ನು ಪ್ರತಿಷ್ಠಾನವೂ ಯೋಗ್ಯ ರೀತಿಯಲ್ಲಿ ಸ್ಮರಿಸಲು ಆಲೋಚಿಸುತ್ತಿದೆ.

3) ಪ್ರತಿಷ್ಠಾನಕ್ಕೆ ದ್ವಿದಶಮಾನೋತ್ಸವ : ಬರುವ ಮೇ 6ಕ್ಕೆ ಪ್ರತಿಷ್ಠಾನಕ್ಕೆ 20 ವರ್ಷ ತುಂಬುವುದರಿಂದ ಈ ವರ್ಷದಿಂದಲೇ ದ್ವಿದಶಮಾನೋತ್ಸವ ವರ್ಷ ಆರಂಭವಾಗುತ್ತದೆ. ಸಂಸ್ಥಾಪಕರಾದ ಎಂ. ವಿ. ಸೀತಾರಾಮಯ್ಯನವರು ಯೋಜನೆಗಳನ್ನು ಹಾಕಿಕೊಂಡು ದಶಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿ ದ್ದರು. ಸಂಸ್ಥಾಪಕರ ಕನಸುಗಳು ಸಾಕಾರಗೊಳ್ಳಲು ಇನ್ನೂ ತಪಕಿಸುತ್ತಲೇ ಇರುವ ಈ ಸಂದರ್ಭದಲ್ಲಿ ದ್ವಿದಶಮಾನೋತ್ಸವವನ್ನು ವಿಶೇಷವಾಗಿ ಆಚರಿಸಬೇಕಾದ ಅಗತ್ಯವಿದೆ.

ಈ ಹೆಸರಿನಲ್ಲಾದರೂ ಶ್ರೀ ಭವನ ನಿರ್ಮಾಣಕಾರ್ಯ ಕೈಗೊಳ್ಳುವ ಮತ್ತು ಪೂರ್ಣಗೊಳಿಸುವ ನಿರ್ಧಾರಕ್ಕೆ ಬರಬೇಕಾಗಿದೆ. ಅದಕ್ಕಾಗಿ ತೀವ್ರ ಪ್ರಯತ್ನ ನಡೆಸಲು ಆಲೋಚಿಸಲಾಗುತ್ತಿದೆ.

ಸಾಹಿತ್ಯೋಪಾಸಕರು ಮಾಲೆಯಲ್ಲಿ ನಡೆಸಿದ ಉಪನ್ಯಾಸಗಳ ಸು. 50 ಲೇಖನಗಳಿದ್ದು ಅವುಗಳನ್ನು ಈ ಹೆಸರಿನಲ್ಲಿ 20 ಪುಸ್ತಕಗಳಲ್ಲಿ ಪ್ರಕಟಿಸುವ ಬಗ್ಗೆಯೂ ಯೋಜನೆ ರೂಪಿಸಲಾಗುತ್ತಿದೆ. ಪ್ರತಿಷ್ಠಾನದ ಹಿತೈಷಿಗಳೂ,ಅಭಿಮಾನಿಗಳೂ ಇನ್ನೂ ಯಾವುದೇ ರೀತಿಯ ಸಲಹೆ ಸೂಚನೆಗಳನ್ನು ನೀಡಿದಲ್ಲಿ ಅವನ್ನು ಪರಿಗಣಿಸಲಾಗುವುದು.

4. ಪ್ರತಿಷ್ಠಾನ ವಾರ್ತೆ

1) ದತ್ತಿ ಉಪನ್ಯಾಸಗಳು : ಈ ಸಾಲಿನಲ್ಲಿ ಈ ಕೆಳಕಂಡ ದತ್ತಿ ಉಪನ್ಯಾಸಗಳನ್ನು ನಡೆಸಲಾಗಿದೆ.

೧. 20-5-98 ರಂದು ಜಿ. ಪಿ. ರಾಜರತ್ನಂ ಮತ್ತು ವೆಂಕಟರಂಗಪ್ಪ ದತ್ತಿ ಉಪನ್ಯಾಸ, ಪ್ರೊ|| ಬಿ. ರಾಮಸ್ವಾಮಿ ಅವರಿಂದ 'ನೀತಿ ವಾಕ್ಯಾಮೃತದ ಕನ್ನಡ ವ್ಯಾಖ್ಯಾನ' ಕುರಿತು ; 6-9-98ರಂದು ಪ್ರೊ|| ಎಂ. ಎ. ಜಯಚಂದ್ರ ಅವರಿಂದ ಆಧುನಿಕ ವಚನಗಳನ್ನು ಕುರಿತು.

೨. 26-7-98ರಂದು ಎಂ.ವಿ.ಸೀ. ಕನ್ನಡ ದತ್ತಿ ಕಾರ್ಯಕ್ರಮ : 'ಸುಂದರ ಬೆಂಗಳೂರು—ಕನ್ನಡ ಬೆಂಗಳೂರು'-ಕುರಿತು ಸಂವಾದ ಮೇಯರ್ ಜಿ. ಹುಚ್ಚಪ್ಪ ಅವರೊಂದಿಗೆ. ಜಿ. ನಾರಾಯಣರ ಅಧ್ಯಕ್ಷತೆಯಲ್ಲಿ ಗಣ್ಯ ಸಾಹಿತ್ಯ-ಕಲಾವಿದರು ಪಾಲ್ಗೊಂಡಿದ್ದರು.

೩. 5-9-98 ರಂದು ಎಂ. ಜಿ. ನಂಜುಂಡಾರಾಧ್ಯ ದತ್ತಿ ಉಪನ್ಯಾಸ : ಹೀ. ಚಿ. ಶಾಂತವೀರಯ್ಯ ಅವರಿಂದ ರಾಘವಾಂಕನ ಸಿದ್ಧರಾಮ ಚರಿತ್ರೆ ಕುರಿತು.

೪. 17-10-98ರಂದು ಹೋಸಲೆ ಅಯ್ಯಾಶಾಸ್ತ್ರಿ ಸ್ಮಾರಕ ಪ್ರಥಮದತ್ತಿ ಉಪನ್ಯಾಸ: ಅ. ರಾ. ಮಿತ್ರ ಅವರು ಅಯ್ಯಾಶಾಸ್ತ್ರಿಗಳ ಶೇಷ ರಾಮಾಯಣ ಕುರಿತು ಪ್ರಥಮ ಉಪನ್ಯಾಸ ನೀಡಿದರು. ದತ್ತಿ ನಿಧಿಯ ದಾತೃಗಳೂ ಹದಿನೈದು ಸಾವಿರ ರೂ.ಗಳ ನಿಧಿ ಕೂಡಿಸಲು ಶ್ರಮ ವಹಿಸಿ ಸಹಕರಿಸಿದವರೂ ಪ್ರತಿಷ್ಠಾನದ ಗೌರವ ಸದಸ್ಯರೂ ಆದ ಪ್ರೊ|| ಗರ್ಗೇಶ್ವರಿ ವೆಂಕಟಸುಬ್ಬಯ್ಯನವರು ಉದ್ಘಾಟಿಸಿದರು.

೫. 12-12-98 ರಂದು ಪ್ರೊ|| ಎಸ್. ವಿ. ಪ್ರಭಾವತಿ ಅವರು ಕನ್ನಡ ರಾಮಾಯಣಗಳನ್ನು ಕುರಿತು ಬೇಟೆರಾಯ ದೀಕ್ಷಿತ ಸ್ಮಾರಕ ರಾಮಾಯಣ ದತ್ತಿ ಉಪನ್ಯಾಸ ನೀಡಿದರು.

೬. 19-12-98ರಂದು ದಿ|| ಕಟ್ಟೆ ನಾಗರಾಜ್ ಸ್ಥಾಪಿಸಿರುವ ಅನಂತರಂಗ ಪ್ರತಿಷ್ಠಾನ ಕನ್ನಡ ಸಂಶೋಧನ ಸಾಹಿತ್ಯ ದತ್ತಿಯ ಪ್ರಥಮ ಉಪನ್ಯಾಸ. ಪ್ರೊ|| ಜಿ. ಅಶ್ವತ್ಥನಾರಾಯಣ ಅವರಿಂದ 'ಕನ್ನಡ ಕವಿಗಳು ಕಂಡ ಶಬರಿ' ವಿಷಯ ಕುರಿತು ನಡೆಯಿತು. ಎನ್. ಅರ್ಜುನ್‌ದೇವ್ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಪ್ರತಿಷ್ಠಾನದಲ್ಲಿ ಇನ್ನು ಎರಡು ದತ್ತಿಗಳನ್ನು ಸ್ಥಾಪಿಸಿ ಇತ್ತೀಚೆಗೆ ನಿಧನರಾದ ಕೆ. ನಾಗರಾಜ್ ಅವರ ಸೇವೆಯನ್ನು ಸ್ಮರಿಸಲಾಯಿತು.

೭. 29-12-98ರಂದು ಶಂಬಾ ಜೋಶಿ ಸ್ಮಾರಕ ದತ್ತಿ ಉಪನ್ಯಾಸವಾಗಿ 'ಶಂಬಾ ಅವರ ಸಂಶೋಧನ ಮಾರ್ಗ'ವನ್ನು ಕುರಿತು ಜಿ. ಭಾಸ್ಕರಮಯ್ಯ ಅವರು ಉಪನ್ಯಾಸ ನೀಡಿದರು.

೮. 27-12-98 ರಂದು ಹೀ. ಚಿ. ಶಾಂತವೀರಯ್ಯ ಅವರಿಂದ 'ವೆಂಕಣ್ಣಯ್ಯನವರ ಅರ್ಥಕೋಶ' ಕುರಿತು ಟಿ. ಎಸ್. ವೆಂಕಣ್ಣಯ್ಯ ದತ್ತಿ ಉಪನ್ಯಾಸ ಚಳ್ಳಕೆರೆಯಲ್ಲಿ ನಡೆಯಿತು. ಕರುನಾಡು ಕಲಾ ಸಾಹಿತ್ಯ ವೇದಿಕೆಯ ಸಹಕಾರದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ವೇದಿಕೆಯ ಅಧ್ಯಕ್ಷ ಬಿ. ವಿ. ಚಿದಾನಂದಮೂರ್ತಿ ಚಿತ್ರದುರ್ಗ ಜಿಲ್ಲಾ ಕ.ಸಾ.ಪ. ಅಧ್ಯಕ್ಷ ಕೆ. ಪಿ. ಮನೋಹರಯ್ಯ ಮತ್ತು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ನಾ. ಗೀತಾಚಾರ್ಯ ಮುಖ್ಯ ಅತಿಥಿಗಳಾಗಿದ್ದರು.

೩. **'ಕಾರಂತ ಕಿರಣ' :** ಡಾ|| ಶಿವರಾಮಕಾರಂತರ ಸ್ಮರಣೆಗಾಗಿ ಈ ವಿಶೇಷ ಉಪನ್ಯಾಸ ಮಾಲೆಯನ್ನು ಯೋಜಿಸಲಾಗಿತ್ತು. ಪ್ರತಿ ತಿಂಗಳು 10ನೇ ತಾರೀಕು ಪ್ರತಿಷ್ಠಾನ, ಶಂಬಾ ವಿಚಾರ ವೇದಿಕೆ ಮತ್ತು ಕ್ರೈಸ್ಟ್ ಕಾಲೇಜು ಕನ್ನಡ ಸಂಘಗಳು ಕೂಡಿ ಬೇರೆ ಬೇರೆ ಸಂಘ ಸಂಸ್ಥೆಗಳಲ್ಲಿ ಕಾರಂತರ ಸಮಗ್ರ ಸಾಹಿತ್ಯವನ್ನು ಪರಿಚಯಿಸುವ ಒಂದೊಂದು ಉಪನ್ಯಾಸವನ್ನು ಇಡೀ ವರ್ಷ ನಡೆಸಲಾಯಿತು. ಅದರಂತೆ ಈ ವರ್ಷದ ಜನವರಿಯಿಂದ ಡಿಸೆಂಬರ್‌ವರೆಗೆ ಈ ಕೆಳಕಂಡಂತೆ ಒಟ್ಟು 12 ಉಪನ್ಯಾಸಗಳು ನಡೆದವು.

ಕ್ರ ಸಂ.	ಉಪನ್ಯಾಸ	ಉಪನ್ಯಾಸಕರು	ಸ್ಥಳ
1	ಕಾರಂತರ ಪರಿಸರ ಪ್ರಜ್ಞೆ	–ನಾಗೇಶ್ ಹೆಗಡೆ	–ಗೋಖಲೆ ಸಂಸ್ಥೆ
2	ಕಾರಂತರ ವಿಜ್ಞಾನ ಪ್ರಪಂಚ	–ಟಿ.ಆರ್. ಅನಂತರಾಮು	–ಸ್ನಾತಕೋತ್ತರ ಕೇಂದ್ರ, ತುಮಕೂರು

ಕ್ರ. ಸಂ.	ಉಪನ್ಯಾಸ	ಉಪನ್ಯಾಸಕರು	ಸ್ಥಳ
3	ಕಾರಂತರ ಪ್ರವಾಸ ಕಥನ	–ಚಂದ್ರಶೇಖರ ನಂಗಲಿ	–ಶೇಷಾದ್ರಿಪುರಂ ಕಾಲೇಜು ಸ್ನಾತಕೋತ್ತರ ಕೇಂದ್ರ
4	ಕಾರಂತರ ಕಲಾ ಪ್ರಪಂಚ	–ಎಂ. ಎಚ್. ಕೃಷ್ಣಯ್ಯ	–ಗಾಂಧಿ ಸಾಹಿತ್ಯ ಸಂಘ
5	ಯಕ್ಷಗಾನ ಕಲೆ ಮತ್ತು ಕಾರಂತ	–ಕಬ್ಬಿನಾಲೆ ವಸಂತ ಭಾರದ್ವಾಜ್	–ಯಕ್ಷಕರ್ದಮ.–ದೇವಗಿರಿ ವೆಂಕಟೇಶ್ವರ ದೇವಾಲಯ
6	ಕಾರಂತರ ಸಿರಿಗನ್ನಡ ಕೋಶ	–ಜಿ. ಅಶ್ವತ್ಥನಾರಾಯಣ	–ಗೋಖಲೆ ಸಂಸ್ಥೆ
7	ಕಾರಂತರ ಗೀತ ನಾಟಕಗಳು	–ಕ. ವೆಂ. ರಾಜಗೋಪಾಲ	–ಗಾಂಧಿ ಸಾಹಿತ್ಯ ಸಂಘ
8	ಕಾರಂತರು ಮತ್ತು ಸಿನೆಮ	–ಗಿರೀಶ್ ಕಾಸರವಳ್ಳಿ	–ಸುಚಿತ್ರ ಫಿಲಂ ಸೊಸೈಟಿ
9	1) ಕಾರಂತರ ಪತ್ರಿಕೋದ್ಯಮ ರಾಜಕೀಯ ನಿಲುವು ಮತ್ತು ಸಾಮಾಜಿಕ ಕಳಕಳಿ	–ಈಶ್ವರ ದೈತೋಟ	–ಎಚ್. ಎಂ. ಟಿ.
	2) ಕಾರಂತರಲ್ಲಿ ವೈಚಾರಿಕತೆ	–ಪಿ. ವಿ. ನಾರಾಯಣ	
10	ಕಾರಂತರ ಬದುಕು–ಬರಹ	–ಕೆ. ವಿ. ನಾರಾಯಣ, ಎಚ್. ಎಸ್. ರಾಘವೇಂದ್ರರಾವ್	–ಗೋಖಲೆ ಸಂಸ್ಥೆ
11	ಕಾರಂತರ ದೃಷ್ಟಿಯಲ್ಲಿ ಇತಿಹಾಸ ಹಾಗೂ ಪರಂಪರೆ	–ಎಚ್. ಎಸ್ ಗೋಪಾಲ ರಾವ್	–ಕನ್ನಡ ಶಕ್ತಿಕೇಂದ್ರ
12	ಕಾರಂತರ ವೈಚಾರಿಕ ಬರಹಗಳು	–ರಾಜಪ್ಪ ದಳವಾಯಿ	–ಕಾರಂತ ವೇದಿಕೆ

ಈ ಉಪನ್ಯಾಸ ಮಾಲೆಯನ್ನು ಆರಂಭದಲ್ಲಿ ಜಿ. ಎಸ್. ಆಮೂರರ ಅಧ್ಯಕ್ಷತೆಯಲ್ಲಿ ರಾಮಚಂದ್ರಶರ್ಮಾ ಉದ್ಘಾಟಿಸಿದರೆ, ಕೊನೆಯಲ್ಲಿ ಶ್ರೀನಿವಾಸ ಹಾವನೂರರು ಸಮಾರೋಪ ಮಾಡಿದರು. ಪ್ರತಿಷ್ಠಾನ ಈ ಹಿಂದೆ ನಡೆಸಿದ ಇದೇ ರೀತಿಯ ಕಾರ್ಯಕ್ರಮ ಮಾಲೆಯ ಪುಸ್ತಕಗಳಂತೆ (ಬೇಂದ್ರೆ ಸ್ಮೃತಿ, ಎಂ. ವಿ. ಸೀ ಸಂಸ್ಮರಣೆ, ಮಾಸ್ತಿ ಸ್ಮರಣೆ, ನವ್ಯಸ್ಫೂರ್ತಿ) ಈ ಎಲ್ಲ ಉಪನ್ಯಾಸಗಳನ್ನೂ ಪುಸ್ತಕ ರೂಪದಲ್ಲಿ ಪ್ರಕಟಿಸುವ ಆಲೋಚನೆಯಿದೆ.

3) **ಕೆ. ವಿ. ಅಯ್ಯರ್ ಜನ್ಮಶತಾಬ್ದಿ ಸ್ಮರಣೆ :** ಪ್ರಸಿದ್ಧ ಕಾದಂಬರಿಕಾರರಾಗಿದ್ದ ಕೆ. ವಿ. ಅಯ್ಯರ್ ಅವರ ಜನ್ಮಶತಾಬ್ದಿ ಸ್ಮರಣೆಯನ್ನು ವಿ. ಸೀ. ಸಂಪದ ಸಹಕಾರದೊಂದಿಗೆ 8-1-98ರಂದು ನಡೆಸಲಾಯಿತು. ನಿಟ್ಟೂರು ಶ್ರೀನಿವಾಸ ರಾಯರ ಅಧ್ಯಕ್ಷತೆಯಲ್ಲಿ ಪ್ರೊ|| ಎಸ್. ಕೆ. ರಾಮಚಂದ್ರರಾವ್, ಡಾ|| ಎಚ್. ಕೆ. ರಂಗನಾಥ್ ಮತ್ತು ಡಾ|| ಪಿ. ವಿ. ನಾರಾಯಣ ಅವರು ಅಯ್ಯರ್‌ಅವರ ಜೀವನ-ಸಾಧನೆಗಳನ್ನು ಕುರಿತು ಮಾತನಾಡಿದರು.

4) **ತ. ಸು. ಶಾಮರಾವ್ ನಿಧನಕ್ಕೆ ಸಂತಾಪ :** 21-8-98ರಂದು ನಿಧನರಾದ ಪ್ರತಿಷ್ಠಾನದ ಗೌರವ ಸದಸ್ಯರೂ ಟಿ. ಎಸ್. ವೆಂಕಣ್ಣಯ್ಯನವರ ಸಹೋದರರೂ ಪ್ರಸಿದ್ಧ ಸಾಹಿತಿಗಳೂ ಆಗಿದ್ದ ತ. ಸು. ಶಾಮರಾವ್ ಅವರ ಆತ್ಮಕ್ಕೆ ಶಾಂತಿ ಕೋರಿ 8.9.98 ರಂದು ಸಂತಾಪ ಸೂಚಕ ಸಭೆಯನ್ನು ನಡೆಸಲಾಯಿತು. ನಿಟ್ಟೂರರ ಅಧ್ಯಕ್ಷತೆಯಲ್ಲಿ ಡಾ|| ಎನ್. ಬಾಲಸುಬ್ರಹ್ಮಣ್ಯಂ ಮತ್ತು ಡಾ|| ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರು ಭಾಗವಹಿಸಿದ್ದರು. ಸಭೆ ಒಂದು ನಿಮಿಷದ ಮೌನವನ್ನು ಆಚರಿಸಿತು.

5. ಅಭಿನಂದನೆ

---

1. ಪಂಪ ಪ್ರಶಸ್ತಿ :

ಕವಿ, ವಿದ್ವಾಂಸ, ವಿಮರ್ಶಕ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕ ಮತ್ತು ಮುಖ್ಯಸ್ಥರಾಗಿದ್ದ ರಾಜ್ಯ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಸಾಹಿತ್ಯ ಸೇವೆ ಸಲ್ಲಿಸಿದ ಡಾ|| ಜಿ. ಎಸ್. ಶಿವರುದ್ರಪ್ಪನವರಿಗೆ 1997ನೇ ಸಾಲಿನ ಕರ್ನಾಟಕ ಸರ್ಕಾರದ ಒಂದು ಲಕ್ಷ ರೂ.ಗಳ ಪ್ರತಿಷ್ಠಿತ ಪಂಪ ಪ್ರಶಸ್ತಿಯು ಬಂದಿದ್ದು. 1998ನೇ ಸಾಲಿನ ಪ್ರಶಸ್ತಿಯನ್ನು ಇನ್ನೊಬ್ಬ ಪ್ರಸಿದ್ಧ ಲೇಖಕರೂ, ನಿವೃತ್ತ ಉಪಕುಲಪತಿಗಳೂ ಆದ ಡಾ|| ದೇ. ಜವರೇಗೌಡ ಅವರಿಗೆ ಇತ್ತೀಚೆಗೆ ನೀಡಲಾಗಿದೆ.

2. ಪದ್ಮಭೂಷಣ ಪ್ರಶಸ್ತಿ :

ದೇಶದಲ್ಲಿ ನಾನಾ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಅಮೋಘ ಸೇವೆಯನ್ನು ಗುರುತಿಸಿ ಕೇಂದ್ರ ಸರಕಾರವು ಪದ್ಮಭೂಷಣ, ಪದ್ಮವಿಭೂಷಣ ಪ್ರಶಸ್ತಿಗಳನ್ನು ಹಿಂದೆ ನೀಡುತ್ತಿದ್ದುದನ್ನು ೧೯೭೭ ರಿಂದ ನಿಲ್ಲಿಸಲಾಗಿತ್ತು. ಈ ವರ್ಷ ಅದನ್ನು ಪುನಃ ಪ್ರಾರಂಭಿಸಲಾಗಿದ್ದು ಪದ್ಮಭೂಷಣ ಪ್ರಶಸ್ತಿಯನ್ನು ಡಾ|| ಯು. ಆರ್. ಅನಂತಮೂರ್ತಿಯವರಿಗೆ ಸಲ್ಲಿಸಲಾಗಿದೆ. ಅನಂತಮೂರ್ತಿಯವರು ಇದಕ್ಕೆ ಮೊದಲೇ ಜ್ಞಾನಪೀಠ ಪ್ರಶಸ್ತಿ ಪಡೆದವರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರಲ್ಲದೆ ಕನ್ನಡ ಸಾಹಿತ್ಯಕ್ಕೆ ವಿಶೇಷ ಸೇವೆ ಸಲ್ಲಿಸಿದ್ದಾರೆ.

3. ಸರೋಜಾದೇವಿ ಸಾಹಿತ್ಯ ಪ್ರಶಸ್ತಿ :

ಚತುರ್ಭಾಷಾ ತಾರೆ ಪದ್ಮಭೂಷಣ ಬಿ. ಸರೋಜಾದೇವಿ ತಮ್ಮ ಪುತ್ರಿ ಬಿ. ಭುವನೇಶ್ವರಿಯ ಸ್ಮರಣಾರ್ಥವಾಗಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಇಟ್ಟಿರುವ ಒಂದು ಲಕ್ಷ ರೂ.ಗಳ ದತ್ತಿಯ ಬಡ್ಡಿ ಮೊತ್ತದಿಂದ ಪ್ರತಿ ವರ್ಷ ಕನ್ನಡ ಮಹಿಳಾ ಸಾಹಿತಿಯೊಬ್ಬರಿಗೆ ನೀಡುವ ಹತ್ತು ಸಾವಿರ ರೂ.ಗಳ ಪ್ರಶಸ್ತಿಯನ್ನು ಕಾದಂಬರಿಕಾರ್ತಿ ಶ್ರೀಮತಿ ಪಂಕಜ ಅವರು ಪಡೆದಿದ್ದಾರೆ.

4. ಕಡೆಂಗೋಡ್ಲು ಸ್ಮಾರಕ ಪ್ರಶಸ್ತಿ :

ಉಡುಪಿಯ ಗೋವಿಂದ ಪೈ ಸಂಶೋಧನ ಕೇಂದ್ರದಿಂದ ಪ್ರತಿ ವರ್ಷವೂ ನೀಡಲಾಗುವ "ಕಡೆಂಗೋಡ್ಲು ಶಂಕರ ಭಟ್ಟ ಸ್ಮಾರಕ ಕಾವ್ಯ ಪ್ರಶಸ್ತಿ"ಯನ್ನು ೧೯೯೮ನೆಯ ವರ್ಷದಲ್ಲಿ ಬೆಂಗಳೂರಿನ ಡಾ|| ವಿಜಯಾ ಸುಬ್ಬರಾಜ್-ಅವರ "ಈ ತೆರದ ನಿರೀಕ್ಷೆಯಲ್ಲಿ" ಎಂಬ ಕವನ ಸಂಕಲನಕ್ಕೆ ನೀಡಲಾಗಿದೆ.

5. ಅನುಪಮಾ ಪ್ರಶಸ್ತಿ :

ಕರ್ನಾಟಕ ಲೇಖಕಿಯರ ಸಂಘದ ೧೯೯೮ನೆಯ ವರ್ಷದ ಅನುಪಮಾ ಪ್ರಶಸ್ತಿ ಲೇಖಕಿ ಮತ್ತು ವಿಮರ್ಶಕಿ ಡಾ|| ವಿಜಯಾ ದಬ್ಬೆಯವರ ಇತ್ತೀಚೆಯ ಕೃತಿ-"ನಾರಿ, ದಾರಿ, ದಿಗಂತ" ಎಂಬ ಕೃತಿಗೆ ದೊರಕಿದೆ. ಈ ಪ್ರಶಸ್ತಿ ಹತ್ತು ಸಾವಿರ ರೂ.ಗಳನ್ನು ಒಳಗೊಂಡಿದೆ.

6. ಮಾಸ್ತಿ ಪ್ರಶಸ್ತಿ :

೧೯೯೮ನೆಯ ವರ್ಷದ ಮಾಸ್ತಿ ಪ್ರಶಸ್ತಿಯನ್ನು ಖ್ಯಾತ ಲೇಖಕರೂ ಅಂಕಣ ಬರಹಗಾರರೂ ವಿಮರ್ಶಕರೂ ಆದ ೬೭ ವರ್ಷ ಹರೆಯದ ಡಾ|| ಹಾ. ಮಾ. ನಾಯಕರಿಗೆ ನೀಡಲಾಗಿದೆ. ಮಾಸ್ತಿ ಪ್ರಶಸ್ತಿ ಸಮಿತಿ ನೀಡುವ ಈ ಗೌರವ 15 ಸಾವಿರ ರೂ. ಗಳ ನಗದನ್ನು ಒಳಗೊಂಡಿರುತ್ತದೆ.

7. ಸೇಡಿಯಾಪು ಪ್ರಶಸ್ತಿ :

ಕನ್ನಡದ ಹಿರಿಯ ವಿದ್ವಾಂಸರಾದ ನಿವೃತ್ತ ಪ್ರಾಧ್ಯಾಪಕ ಡಾ|| ಟಿ. ವಿ. ವೆಂಕಟಾಚಲ ಶಾಸ್ತ್ರಿಯವರಿಗೆ-ಅವರು ಕನ್ನಡ ಭಾಷಾಶಾಸ್ತ್ರ, ವ್ಯಾಕರಣ, ಛಂದಶ್ಶಾಸ್ತ್ರಗಳ ಕ್ಷೇತ್ರಕ್ಕೆ ಸಲ್ಲಿಸಿದ ಅಮೋಘ ಸೇವೆಯ ಉಪಲಕ್ಷ್ಯವಾಗಿ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ಸೇಡಿಯಾಪು ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

8. ಅ.ನ.ಕೃ. ಪ್ರಶಸ್ತಿ, ಇನಾಂದಾರ್ ಪ್ರಶಸ್ತಿ :

ಸುಪ್ರಸಿದ್ಧ ಸಾಹಿತಿ ದಿ|| ಅ. ನ. ಕೃಷ್ಣರಾಯರ ಸ್ಮರಣಾರ್ಥವಾಗಿ ನೀಡಲಾಗುವ ಅ.ನ.ಕೃ. ಪ್ರಶಸ್ತಿ ಮತ್ತು ಖ್ಯಾತ ವಿಮರ್ಶಕ ಇನಾಂದಾರರ ಹೆಸರಿನಲ್ಲಿ ನೀಡುವ ಇನಾಂದಾರ್ ಪ್ರಶಸ್ತಿಯನ್ನು ಖ್ಯಾತ ಲೇಖಕರೂ ವಿಮರ್ಶಕರೂ, ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರೂ ಆದ ಪ್ರೊ|| ಎಲ್. ಎಸ್. ಶೇಷಗಿರಿ ರಾವ್ ಅವರಿಗೆ ನೀಡಲಾಗಿದೆ,

9. ಅತ್ತಿಮಬ್ಬೆ ಪ್ರಶಸ್ತಿ :

೧೯೯೮ರ ನೆಯ ವರ್ಷದ ಅತ್ತಿಮಬ್ಬೆ ಪ್ರಶಸ್ತಿಯನ್ನು ಕನ್ನಡದ ಖ್ಯಾತ ಲೇಖಕಿ ಯಾದ ವೈದೇಹಿ ಮತ್ತು ನುಗ್ಗೇಹಳ್ಳಿ ಪಂಕಜ–ಇವರಿಬ್ಬರಿಗೆ ನೀಡಲಾಗಿದೆ. ವೈದೇಹಿ ಓರ್ವ ಸೃಜನಶೀಲ ಲೇಖಕಿ ಹಾಗೂ ಉತ್ತಮ ಕತೆಗಾರ್ತಿ. ತಮ್ಮ ಚಿಂತನಶೀಲ ಲೇಖನಗಳ ಮತ್ತು ಪ್ರಬಂಧಗಳ ಮೂಲಕ ಜನಮನವನ್ನು ಸೆಳೆದ ಬರೆಹಗಾರ್ತಿ. ಎನ್. ಪಂಕಜ ಅವರು ಗಮನಾರ್ಹ ಕಾದಂಬರಿಗಾರ್ತಿಯಾಗಿ ಜನಮನದಲ್ಲಿ ನಿಂತಿದ್ದಾರೆ.

10. ದೆಹಲಿ ಕರ್ನಾಟಕ ಸಂಘದ ಶಿವರಾಮಕಾರಂತ ಪ್ರಶಸ್ತಿ :

ಈ ಪ್ರಶಸ್ತಿಯನ್ನು ದೆಹಲಿ ಕರ್ನಾಟಕ ಸಂಘದ ಸುವರ್ಣ ಜಯಂತಿ ಮಹೋತ್ಸವದಲ್ಲಿ ಕನ್ನಡದ ಸೃಜನಶೀಲ ಸಾಹಿತಿಯಾಗಿರುವ ಯಶವಂತ ಚಿತ್ತಾಲರಿಗೆ ನೀಡಲಾಗಿದೆ. ಈ ಪ್ರಶಸ್ತಿಯ ಸ್ಥಾಪಕರು ಸಂಘದ ಅಧ್ಯಕ್ಷರಾದ ಕೆ. ಆರ್. ನಾಗ ರಾಜ್ ಅವರು. ಮೊತ್ತ ಮೊದಲ ಬಾರಿಗೆ ನೀಡಲಾಗುವ ಈ ಪ್ರಶಸ್ತಿಯ ಮೊತ್ತ ೨೫ ಸಾವಿರ ರೂ.ಗಳು ಮುಂದೆ ಇದನ್ನೆ ಲಕ್ಷಕ್ಕೆ ಏರಿಸುವ ಯೋಜನೆಯಿರುವುದಾಗಿ ತಿಳಿದು ಬಂದಿದೆ.

11. ಗೊರೂರು ಪ್ರಶಸ್ತಿ :

ಈ ಶತಮಾನದ ಹಿರಿಯರೂ, ನಮ್ಮ ಗೌರವ ಸದಸ್ಯರೂ, ಹಿರಿಯ ಸಾಹಿತಿ ಗಳೂ ಆದ ಪ್ರೊ|| ಎ. ಎಸ್. ಮೂರ್ತಿರಾವ್ ಅವರಿಗೆ ೧೯೯೮ರ ನೆಯ ವರ್ಷದ ಗೊರೂರು ಪ್ರಶಸ್ತಿ ಲಭಿಸಿದೆ. ಹತ್ತು ಸಾವಿರ ರೂ. ನಗದು, ಸ್ಮರಣ ಫಲಕವನ್ನು ಪ್ರಶಸ್ತಿ ಒಳಗೊಂಡಿದೆ. ಪ್ರತಿ ವರ್ಷ ಲಲಿತ ಪ್ರಬಂಧ ಕ್ಷೇತ್ರದಲ್ಲಿ ಕೆಲಸ ಮಾಡಿರುವ ಶ್ರೇಷ್ಠ ಪ್ರಬಂಧಕಾರರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

12. ಚಿದಾನಂದ ಪ್ರಶಸ್ತಿ :

ಖ್ಯಾತ ಸಂಶೋಧನ ವಿದ್ವಾಂಸರಾದ ಡಾ|| ಎಂ. ಚಿದಾನಂದ ಮೂರ್ತಿಯವರ ಹೆಸರಿನ ಈ ಪ್ರಶಸ್ತಿ, ಹತ್ತು ಸಾವಿರ ರೂ. ನಗದು ಮತ್ತು ಸ್ಮರಣಿಕೆಯನ್ನು ಒಳ ಗೊಂಡಿರುತ್ತದೆ. ೧೯೯೮ರ ಈ ಪ್ರಶಸ್ತಿಯನ್ನು ನಾಡಿನ ಹಿರಿಯ ಚೇತನರಾದ ಡಾ|| ದೇ. ಜವರೇಗೌಡರಿಗೆ ನೀಡಲಾಗಿದೆ. ದೇ. ಜ. ಗೌ. ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಕುಲಪತಿಗಳು. ಕನ್ನಡದ ಶ್ರೇಷ್ಠ ವಿದ್ವಾಂಸರು.

13. ಕಾವ್ಯಾನಂದ ಪ್ರಶಸ್ತಿ :

ಕನ್ನಡದಲ್ಲಿ ಹಿರಿಯ ಸಾಹಿತಿಗಳಾದ ಪ್ರೊ|| ಎಲ್. ಎಸ್. ಶೇಷಗಿರಿರಾವ್ ಮತ್ತು ಡಾ|| ಹಂ. ಪ. ನಾಗರಾಜಯ್ಯ ಇವರಿಬ್ಬರಿಗೆ ಕನ್ನಡ ಸಾಹಿತ್ಯ ಸಂವರ್ಧಕ

ಟ್ರಸ್ಟ್ ಕಾವ್ಯಾನಂದ ಪ್ರಶಸ್ತಿಯನ್ನು ನೀಡಿದೆ. ಶೇಷಗಿರಿರಾಯರ "ಭಾರತದ ಸ್ವಾತಂತ್ರ್ಯ ಸಂಗ್ರಾಮ", ಹಂಪನಾ ಅವರ "ಸಾಂತರರು-ಒಂದು ಅಧ್ಯಯನ"—ಇವು ಪ್ರಶಸ್ತಿ ಪಡೆದ ಕೃತಿಗಳು. ಪ್ರಶಸ್ತಿ ಮೊತ್ತ ೭,೫೦೦ ರೂ.ಗಳು.

14. ಬಸವಶ್ರೀ ಪ್ರಶಸ್ತಿ :

ಚಿತ್ರದುರ್ಗದ ಶ್ರೀ ಮುರುಘ ರಾಜೇಂದ್ರ ಮಠದ ಶ್ರೀ ಶಿವಮೂರ್ತಿ ಮುರುಘ ರಾಜೇಂದ್ರ ಮಹಾಸ್ವಾಮಿಯವರು ಸ್ಥಾಪಿಸಿರುವ 'ಬಸವಶ್ರೀ' ಪ್ರಶಸ್ತಿ ಒಂದು ಲಕ್ಷ ರೂಪಾಯಿ ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ೧೯೯೮ನೆಯ ವರ್ಷದ ಈ ಪ್ರಶಸ್ತಿಯನ್ನು ಹಿರಿಯ ವಿದ್ವಾಂಸರಾದ ಡಾ|| ಹಿರೇಮಲ್ಲೂರು ಈಶ್ವರನ್ ಅವರಿಗೆ ಮರಣೋತ್ತರವಾಗಿ ನೀಡಲಾಗಿದೆ.

15. ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿ :

ಮಹಾಕವಿ ಕಲ್ಹಣನಿಂದ ಸಂಸ್ಕೃತದಲ್ಲಿ ರಚಿತವಾದ ೭೮೨೬ ಶ್ಲೋಕಗಳ ಎಂಟು ತರಂಗಗಳ ಮಹಾಕೃತಿ-ರಾಜತರಂಗಿಣಿ. ಇದನ್ನು ಕನ್ನಡಕ್ಕೆ ಅನುವಾದಿಸಿದವರು ನೀರ್ಪಾಜೆ ಭೀಮಭಟ್ಟರು. ಈ ಅನುವಾದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ.

16. ಜಯತೀರ್ಥ ರಾಜಪುರೋಹಿತ ಪ್ರಶಸ್ತಿ :

ಗುಲ್ಬರ್ಗ ವಿಶ್ವವಿದ್ಯಾಲಯದ ಪ್ರಸಾರಾಂಗ ನಡೆಸುವ "ಜಯತೀರ್ಥ ರಾಜ ಪುರೋಹಿತ ಸ್ಮಾರಕ ದತ್ತಿ"ಯಿಂದ ನೀಡತಕ್ಕ ಪ್ರಶಸ್ತಿ ಕನ್ನಡ ಕಥಾ ಸ್ಪರ್ಧೆಯ ಪುರಸ್ಕಾರವಾಗಿ ಈ ಬಾರಿ ಬೆಂಗಳೂರಿನ ಕೇಶವ ಮಳಗಿ ಅವರ "ಕೆಂಪು ಮಣ್ಣಿನ ಒಕ್ಕಲು" ಎಂಬ ಕಥೆಗೆ ಬಂದಿದೆ.

17. ಹಾವನೂರು ಪ್ರತಿಷ್ಠಾನದ ಪ್ರಶಸ್ತಿ :

ಕನ್ನಡದ ಉತ್ತಮ ಕಾದಂಬರಿಗೆ ಕೊಡತಕ್ಕ ಈ ಪ್ರಶಸ್ತಿ ಈ ಬಾರಿ ಡಾ|| ಆರ್. ಆರ್. ಪಾಂಗಾಳ್ ಅವರ "ನಾತಿಚರಾಮಿ" ಎಂಬ ಕೃತಿಗೆ ದೊರಕಿವೆ.

ಈ ಎಲ್ಲ ಮಹನೀಯರಿಗೂ ಪ್ರತಿಷ್ಠಾನದ ಅಭಿನಂದನೆಗಳು ಸಲ್ಲುತ್ತವೆ.

6. ಶ್ರದ್ಧಾಂಜಲಿ

---

೧. ಡಾ॥ ಶಾಂತಿನಾಥ ದೇಸಾಯಿ

ಕನ್ನಡದಲ್ಲಿ ಖ್ಯಾತ ಕಥೆಗಾರರೂ ಕಾದಂಬರಿಕಾರರೂ ಆದ ಡಾ॥ ಶಾಂತಿನಾಥ ದೇಸಾಯಿಯವರು ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ದಿನಾಂಕ ೨೬-೩-೯೮ನೆಯ ಗುರುವಾರ ಮೃತರಾದರು. ಅವರಿಗೆ ೬೮ ವರ್ಷ ವಯಸ್ಸಾಗಿದ್ದಿತು. ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ೧೯೩೦ರಲ್ಲಿ ಅವರ ಜನನ. ಕೊಲ್ಲಾಪುರದ ರಾಜಾರಾಂ ಸರಕಾರಿ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿ ವೃತ್ತಿ ಆರಂಭಿಸಿ, ಧಾರವಾಡದ ಕರ್ನಾಟಕ ಕಾಲೇಜಿನಲ್ಲಿಯೂ ಅಧ್ಯಾಪಕರಾಗಿದ್ದರು. ೧೯೭೭ರಲ್ಲಿ ಅವರ 'ರಾಕ್ಷಸ' ಕಥಾ ಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ಬಂದಿದೆ. ಮಂಜುಗಡ್ಡೆ, ಪರಿವರ್ತನೆ, ದಂಡೆ, ಕ್ಷಿತಿಜ–ಇವು ಅವರ ಕಥಾ ಸಂಕಲನಗಳು. ಮುಕ್ತಿ, ನಿಕ್ಷೇಪ, ಬೀಜ, ಅಂತರಾಳ, ಸಂಬಂಧ, ಸೃಷ್ಟಿ, ಮತ್ಸರ ಅವರ ಕಾದಂಬರಿಗಳು. ವಿಮರ್ಶೆ ಕೃತಿಗಳನ್ನು ರಚಿಸಿದ್ದಾರಲ್ಲದೆ, ಇಂಗ್ಲೀಷಿನಲ್ಲಿಯೂ ಅವರ ರಚನೆಗಳಿವೆ.

೨. ಸಿ. ಕೆ. ನಾಗರಾಜರಾವ್

ಸ್ವಾತಂತ್ರ್ಯದ ಹೋರಾಟಗಾರ, ಪತ್ರಕರ್ತ, ಕಾದಂಬರಿಕಾರ ಸಾಹಿತಿ ಸಿ. ಕೆ. ನಾಗರಾಜರಾಯರು ದಿನಾಂಕ ೧೦-೪-೧೯೯೮ ಶುಕ್ರವಾರ ಬೆಂಗಳೂರಿನ ಪದ್ಮನಾಭ ನಗರದ ತಮ್ಮ ಮನೆಯಲ್ಲಿ ತೀರಿ ಹೋದರು ಅವರಿಗೆ ೮೩ ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಗಂಡು ಮಕ್ಕಳು ಮತ್ತು ಆರು ಹೆಣ್ಣು ಮಕ್ಕಳನ್ನು ಅವರು ಅಗಲಿದರು. ಕನ್ನಡದಲ್ಲಿ ೨೧೪೨ ಪುಟಗಳ 'ಪಟ್ಟ ಮಹಾದೇವಿ ಶಾಂತಲಾದೇವಿ' ಅವರ ಹೆಗ್ಗಳಿಕೆಯ ಕಾದಂಬರಿ. ನಾಲ್ಕು ನಾಟಕಗಳೂ ನಾಲ್ಕು ಸಣ್ಣ ಕಥಾ ಸಂಕಲನಗಳೂ ಶ್ರೀ ಪೃಥ್ವೀವಲ್ಲಭ, ನಂಬಿದ ಜೀವ, ಕುರಂಗನಯನಿ–ಎಂಬ ಕಾದಂಬರಿಗಳೂ ಅವರ ರಚನೆಗಳು. ೧೯೮೩ರಲ್ಲಿ ಭಾರತೀಯ ಜ್ಞಾನಪೀಠದ ಮೂರ್ತಿದೇವೀ ಸಾಹಿತ್ಯ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ೧೯೮೪, ೧೯೮೭ ವರ್ಷಗಳ ಪ್ರಶಸ್ತಿ, ೧೯೭೮ರಲ್ಲಿ ವರ್ಷದ ಅತ್ಯುತ್ತಮ ಸೃಜನಶೀಲ ಸಾಹಿತ್ಯ ಪ್ರಶಸ್ತಿ-ಅವರಿಗೆ ದೊರಕಿವೆ. ಅನುವಾದ ಕೃತಿಗಳನ್ನೂ ರಚಿಸಿದ್ದಾರೆ. ಮೂಲತಃ ಅವರ ಸ್ಥಳ ಚಳ್ಳಕೆರೆ. ಸಿನಿಮಾ ಕ್ಷೇತ್ರದಲ್ಲಿಯೂ ಕೈಯಾಡಿಸಿದ್ದಾರೆ.

೩. ಬಿ. ಡಿ. ಗಣಪತಿ

ಕೊಡಗಿನ ಹಿರಿಯ ಗಾಂಧಿವಾದಿ ಸಾಹಿತಿ 'ಕೊಡಗು' ಪತ್ರಿಕೆಯ ಸಂಪಾದಕ ರಾಗಿದ್ದ ಬಿ.ಡಿ. ಗಣಪತಿ ಅವರು ೧೬-೬-೧೯೨೦ರಲ್ಲ ಪೊನ್ನಂಪೇಟೆ ಬಳಿಯ ಬೆಸಗೂರಿನಲ್ಲಿ ಜನಿಸಿದ್ದು, ತಮ್ಮ ೭೮ನೆಯ ವಯಸ್ಸಿನಲ್ಲಿ ದಿನಾಂಕ ೧೬-೬-೯೮ ರಂದು ತಮ್ಮ ಹುಟ್ಟು ಹಬ್ಬದ ದಿನವೇ ದಿವಂಗತರಾದರು. ೧೯೪೨ರಲ್ಲಿ 'ಭಾರತದಿಂದ ತೊಲಗಿ' ಚಳವಳಿಯಲ್ಲಿ ಭಾಗವಹಿಸಿದ್ದ ಇವರು ಕೊಡವ ಸಂಸ್ಕೃತಿ ಮತ್ತು ಸಂಪ್ರದಾಯ, ಮಾನವ, ಬಿಡುಗಡೆ, ಸ್ಮರಣಯಾತ್ರೆ, ಕಾವೇರಿ, ಸತ್ಯಶೋಧನೆ, ಅಂತಃಕರಣ ಮುಂತಾದ ಸುಮಾರು ೪೦ ಕೃತಿ ರಚನೆ ಮಾಡಿದ್ದಾರೆ. ರಾಜ್ಯ ಸಾಹಿತ್ಯ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತು, ಕೊಡವ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಪಡೆದಿದ್ದರು.

೪. ಹಿರೇಮಲ್ಲೂರ್ ಈಶ್ವರನ್

ಅಂತಾರಾಷ್ಟ್ರೀಯ ಖ್ಯಾತಿಯ ವಿದ್ವಾಂಸರೂ ಕನ್ನಡ ಸಾಹಿತಿಯೂ ಆದ ಇವರು ೨೩-೬-೧೯೯೮ ರಂದು, ತಮ್ಮ ೭೬ನೆಯ ವಯಸ್ಸಿನಲ್ಲಿ ಧಾರವಾಡದಲ್ಲಿ ಇಹವನ್ನು ತೊರೆದರು. ಶಿಗ್ಗಾಂವ ತಾಲೂಕಿನ ಹಿರೇಮಲ್ಲೂರ ಇವರ ಜನ್ಮಸ್ಥಳ. ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿಯನ್ನೂ ಮುಂಬಯಿ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಯನ್ನೂ ಪಡೆದು, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದರು. ಧರ್ಮ, ಸಮಾಜಶಾಸ್ತ್ರ ವಿಷಯಗಳಲ್ಲಿ ಸುಮಾರು ೨೫ಕ್ಕೆ ಮಿಕ್ಕಿ ಗ್ರಂಥ ರಚನೆ, ಸುಮಾರು ೭೫ ಕೃತಿಗಳ ಸಂಪಾದನೆ ಮಾಡಿದ್ದಾರಲ್ಲದೆ, ತಾಯಿನಾಡಿಗೆ ಬಂದ ಮೇಲೆ ಧಾರ್ಮಿಕ ತೌಲನಿಕ ಗ್ರಂಥಗಳನ್ನು ರಚಿಸಿದ್ದಾರೆ. ಚಿತ್ರದುರ್ಗದ ಮುರುಘರಾಜೇಂದ್ರ ಮಠದ 'ಬಸವಶ್ರೀ' ಪ್ರಶಸ್ತಿಗೆ ಆಯ್ಕೆಗೊಂಡಿದ್ದರು. ಆದರೆ ಜುಲೈಯಲ್ಲಿ ನೇರವೇರುವ ಸಮಾರಂಭಕ್ಕೆ ಮೊದಲೇ ದೇಹವನ್ನು ತೊರೆದಿದ್ದರು.

೫. ಡಾ|| ಬೆಸಗರಹಳ್ಳಿ ರಾಮಣ್ಣ

ಬೆಸಗರಹಳ್ಳಿಯಲ್ಲಿ ೧೫-೮-೧೯೩೮ರಲ್ಲಿ ಜನಿಸಿದ ಇವರು ಖ್ಯಾತ ಕತೆಗಾರರಾಗಿದ್ದು ೧೩-೭-೯೮ ರಂದು ತಮ್ಮ ೬೦ನೆಯ ವರ್ಷ ವಯಸ್ಸಿನಲ್ಲಿ-ಬೆಂಗಳೂರಿನ ಮಲ್ಯ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಅವರಿಗೆ ಪತ್ನಿ, ಒಬ್ಬ ಪುತ್ರ ಮತ್ತು ಓರ್ವಳು ಪುತ್ರಿ ಇದ್ದಾರೆ. ಎಂ ಬಿ.ಬಿ.ಎಸ್. ಆಗಿ ಸರಕಾರಿ ವೈದ್ಯರಾಗಿ, ಗ್ರಾಮಾಂತರಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೆಲಸ ಮಾಡಿದ್ದಾರೆ. ಸಾಹಿತ್ಯ ಕೃಷಿಗೆ ತೊಡಗಿಸಿಕೊಂಡ ಇವರು ಅನೇಕ ಕಥಾ ಸಂಕಲನಗಳನ್ನು ಕಾದಂಬರಿಗಳನ್ನೂ

ರಚಿಸಿದ್ದಾರೆ. ತಮ್ಮ ಕೃತಿಗಳಲ್ಲಿ ಗ್ರಾಮೀಣ ಭಾಷೆಯ ಸೊಗಡನ್ನು ತುಂಬಿದ್ದಾರೆ. ೧೯೬೫ರಲ್ಲಿ ಕಥಾ ಸ್ಪರ್ಧೆಯ ಬಹುಮಾನ, ೧೯೬೮, ೧೯೭೩ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ, ೧೯೭೪ರಲ್ಲಿ 'ಹುಡುಗಸಿಗೆ ಬಿದ್ದ ಕನಸು' ಎಂಬ ಕಥಾ ಸಂಕಲನಕ್ಕೆ ವರ್ಧಮಾನ ಪ್ರಶಸ್ತಿ ಇವರಿಗೆ ಬಂದಿವೆ. ಮೃದುವಾದ ಮಾತಿನಲ್ಲಿ ಮನದೊಳಗಿನ ಜ್ವಾಲಾಮುಖಿಯನ್ನು ಅಭಿವ್ಯಕ್ತಿಸುತ್ತಿದ್ದ ರಾಮಣ್ಣ ತಮ್ಮದೇ ಆದ ಕಥನ ವಿಧಾನವನ್ನು ರೂಪಿಸಿಕೊಂಡವರು, ಯಾವ ಸಾಹಿತ್ಯದ ಗುಂಪಿಗೂ ಸೇರದವರು.

೬. ಡಿ. ಆರ್. ನಾಗರಾಜ್

ಸೃಜನಶೀಲ ಚಿಂತಕರಾಗಿ ವಿಮರ್ಶೆ ಕ್ಷೇತ್ರದಲ್ಲಿ ಖ್ಯಾತನಾಮರಾದ ದೊಡ್ಡ ಬಳ್ಳಾಪುರ ರಾಮಯ್ಯ ನಾಗರಾಜ್ ಅವರು ದಿನಾಂಕ ೧೩-೮-೯೮ ಬೆಂಗಳೂರ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನಗೊಂಡರು. ಅವ ರಿಗೆ ೪೪ ವರ್ಷ ವಯಸ್ಸಾಗಿದ್ದಿತು. ಅವರು ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಕೇಂದ್ರದ ಕೈಲಾಸಂ ಪೀಠದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದರು. ಅಮೆರಿಕದ ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಭಾರತೀಯ ಭಾಷಾಧ್ಯಯನ ವಿಭಾಗದ ಸಂದರ್ಶಕ ಪ್ರಾಧ್ಯಾಪಕರೂ ಆಗಿದ್ದರು ಶಕ್ತಿ ಶಾರದೆಯ ಮೇಳ, ಅಮೃತ ಮತ್ತು ಗರುಡ, ಸಾಹಿತ್ಯ ಕಥನ-ಎಂಬವು ಅವರ ವಿಮರ್ಶೆ ಕೃತಿಗಳು. ಶಕ್ತಿ ಶಾರದೆಯ ಮೇಳ ಎಂಬ ಮಹಾ ಪ್ರಬಂಧಕ್ಕಾಗಿ ಅವರಿಗೆ ಡಾಕ್ಟರೇಟ್ ಪದವಿ ಬಂದಿದೆ 'ಅಕ್ಷರ ಚಿಂತನ' ಮಾಲೆಯ ಹನ್ನೆರಡು ಕೃತಿಗಳಿಗೆ ಸಂಪಾದಕರಾಗಿದ್ದರು. ಅವರಿಗೆ ಶಿವರಾಮ ಕಾರಂತ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ ದೊರಕಿವೆ.

೭. ತ. ಸು. ಶಾಮರಾವ್

ಕನ್ನಡ ಸಾಹಿತ್ಯಕ್ಕೆ ಅನುಪಮ ಸೇವೆ ಸಲ್ಲಿಸಿ, ಶಿಷ್ಯಕೋಟಿಗೆ ವಿದ್ಯಾದಾನ ಅನ್ನ ದಾನಗಳನ್ನು ಮಾಡಿ, ನೂರಾರು ವಿದ್ವಾಂಸರನ್ನು ಸೃಷ್ಟಿಸಿದ ತ. ಸು. ಶಾಮರಾಯರು ೨೧-೮-೧೯೯೮ ಶುಕ್ರವಾರ ತಮ್ಮ ೯೨ನೆಯ ವರ್ಷ ವಯಸ್ಸಿನಲ್ಲಿ ದಿವಂಗತರಾದರು. ಚಿತ್ರದುರ್ಗ ಜಿಲ್ಲೆಯ ಚಳ್ಳಕರೆ ತಾಲೂಕಿನ ತಳಕು ಗ್ರಾಮದಲ್ಲಿ ೧೨-೬-೧೯೦೬ರಲ್ಲಿ ಅವರು ಜನಿಸಿ, ೧೯೨೦ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ, ಮುಂದೆ ೧೯೪೦ರಲ್ಲಿ ಮಹಾರಾಜ ಕಾಲೇಜಿನಲ್ಲಿ ಬಿ.ಎ ಆನರ್ಸ್ ಮತ್ತು ೧೯೩೧ರಲ್ಲಿ ಕನ್ನಡ ಎಂ.ಎ. ಪದವಿಯನ್ನು ಸ್ವರ್ಣಪದಕದೊಂದಿಗೆ ಪಡೆದರು. ಮೂವತ್ತು ವರ್ಷ ಕಾಲೇಜು ಅಧ್ಯಾಪಕರಾಗಿದ್ದುದಲ್ಲದೆ, ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕರಾಗಿ ಮತ್ತು ಗ್ರಂಥಪಾಲಕರಾಗಿ ದುಡಿದಿದ್ದಾರೆ. ಪ್ರಬುದ್ಧ ಕರ್ಣಾಟಕ, ವಿದ್ಯಾದಾಯಿನಿ, ಸೇವಾಸದನ, ಬ್ರಹ್ಮವಾದಿನಿ, ವಸಂತ-ಎಂಬ ಮಾಸಿಕ ಹಾಗೂ

ಸಾಪ್ತಾಹಿಕಗಳ ಸಂಪಾದಕರಾಗಿದ್ದರು. ತರಳಬಾಳು ಶ್ರೀಗಳಿಂದ ೧೯೬೯ರಲ್ಲಿ 'ಧೀಶ್ರೀ' ಎಂಬ ಬಿರುವನ್ನು ಪಡೆದಿದ್ದರು. ಗ್ರಂಥ ಸಂಪಾದನೆ, ವ್ಯಾಕರಣ, ಸಾಹಿತ್ಯ ಚರಿತ್ರೆ, ಕಾವ್ಯ ಸಂಗ್ರಹಗಳು, ಭಾರತ-ಭಾಗವತ-ರಾಮಾಯಣಗಳು, ಜೀವನ ಚರಿತ್ರೆಗಳು, ಗೌರವ ಗ್ರಂಥಗಳು, ಬಾಲ ಸಾಹಿತ್ಯ, ಇತಿಹಾಸ, ಅನುವಾದ ಹೀಗೆ ಅವರಿಂದಾದ ಗ್ರಂಥ ವೈವಿಧ್ಯವಾಗಿರುತ್ತದೆ.

ಪ್ರತಿಷ್ಠಾನದ ಗೌರವ ಸದಸ್ಯರಾಗಿದ್ದುದಲ್ಲದೆ ತಳುಕಿನಲ್ಲಿ ವೆಂಕಣ್ಣಯ್ಯ ಜನ್ಮ ಶತಾಬ್ದಿ ಸ್ಮಾರಕ ಭವನ ಹಾಗೂ ಕಾರ್ಯಕ್ರಮ ನಡೆಸಲು ಪ್ರತಿಷ್ಠಾನದೊಂದಿಗೆ ಸಕ್ರಿಯವಾಗಿ ಸಹಕರಿಸಿದ್ದರು.

೮. ಡಾ|| ಪು. ತಿ. ನರಸಿಂಹಾಚಾರ್

ನವೋದಯ ಮಹಾಕವಿ ರತ್ನತ್ರಯರಲ್ಲಿ (ಕುವೆಂಪು, ಬೇಂದ್ರೆ, ಪು.ತಿ.ನ.) ಒಬ್ಬರಾದ ಪಂಪ ಪ್ರಶಸ್ತಿ ವಿಜೇತ ಡಾ|| ಪು. ತಿ. ನರಸಿಂಹಾಚಾರ್ ದಿನಾಂಕ ೧೩-೧೦-೧೯೯೮ರಂದು ಪರಲೋಕವನ್ನೈದಿದರು. ಮೇಲುಕೋಟೆಯಲ್ಲಿ ೧೯೦೫ರಲ್ಲಿ ಪುರೋಹಿತ ತಿರುನಾರಾಯಣ ಅಯ್ಯಂಗಾರ್ ಮತ್ತು ಶ್ರೀರಂಗಮ್ಮ ದಂಪತಿಗಳ ಹಿರಿಯ ಮಗನಾಗಿ ಜನಿಸಿದ ಇವರು ತಮ್ಮ ಪತ್ನಿ, ಈರ್ವರು ಪುತ್ರಿಯರು ಮತ್ತು ಓರ್ವ ಪುತ್ರನನ್ನು ಅಗಲಿದ್ದಾರೆ. ಇವರಿಗೆ ಸಾಹಿತ್ಯ ಸೇವೆಗಾಗಿ ಬಂದಿರುವ ಪ್ರಶಸ್ತಿಗಳು ಅಗಣಿತ. ೧೯೨೬ರಲ್ಲಿ ತತ್ತ್ವಶಾಸ್ತ್ರ, ವೇದಾಂತ, ಸಂಸ್ಕೃತಗಳಲ್ಲಿ ಬಿ. ಎ. ಪದವೀಧರರಾದ ಇವರು ಫ್ರೆಂಚ್ ಭಾಷೆಯಲ್ಲಿಯೂ ಪರಿಣತರಾಗಿದ್ದರು. ಚಿಕ್ಕಮಗಳೂರಲ್ಲಿ ಜರಗಿದ ಅಖಿಳ ಭಾರತ 53ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. 'ಹರಿಚರಿತೆ' ಅವರ ಬೃಹಚ್ಛಂದಸ್ಸಿನ ಮಹಾಕಾವ್ಯ. ಕವನ ಸಂಕಲನಗಳು, ಗೀತ ನಾಟಕಗಳು, ಲಲಿತ ಪ್ರಬಂಧಗಳು, ಕಾವ್ಯಮೀಮಾಂಸೆ, ಅನುವಾದ ಕೃತಿಗಳು, ಇಂಗ್ಲೀಷ್–ಕನ್ನಡ ನಿಘಂಟಿನ ಸಂಪಾದಕತ್ವ–ಮುಂತಾಗಿ ಅವರ ಸಾಹಿತ್ಯ ಸೇವೆ ಅಸಾಮಾನ್ಯ. ಪ್ರತಿಷ್ಠಾನದ ಗೌರವ ಸದಸ್ಯರಾಗಿ ಸಂಸ್ಥೆಯ ಬಗ್ಗೆ ಅಪಾರ ಗೌರವ ಇಟ್ಟಿದ್ದರು.

೯. ಸತ್ಯಕಾಮ

ಸ್ವಾತಂತ್ರ್ಯ ಹೋರಾಟಗಾರರಾಗಿದ್ದು ಮಂತ್ರ ತಂತ್ರ ವಿಚಾರಗಳನ್ನು ವಸ್ತುವಾಗಿಸಿ, ನೂತನ ಶೈಲಿಯ ಕಥೆ ಕಾದಂಬರಿಗಳನ್ನು ರಚಿಸಿದ ಸತ್ಯಕಾಮ (ಅನಂತ ಕೃಷ್ಣ ಶಹಾಪೂರ) ಅವರು ದಿನಾಂಕ ೨೦-೧೦-೧೯೯೮ ಬೆಂಗಳೂರಿನಲ್ಲಿ ತಮ್ಮ ೭೮ನೆಯ ವರ್ಷ ವಯಸ್ಸಿನಲ್ಲಿ ಸ್ವರ್ಗಸ್ಥರಾದರು. ಬಿಜಾಪುರ ಜಿಲ್ಲೆಯ ಗಲಗಲಿ ಎಂಬಲ್ಲಿ ೨-೩-೧೯೨೦ ರಲ್ಲಿ ಜನಿಸಿದ ಇವರು ಖ್ಯಾತ ಸಾಹಿತಿಯಾಗಿ ಐವತ್ತಕ್ಕಿಂತಲೂ

ಹೆಚ್ಚು ಕೃತಿ ರಚನೆ ಮಾಡಿದ್ದಾರೆ. ಇವರ 'ತಂತ್ರಯೋಗಿ' ಕಾದಂಬರಿಗೆ ೧೯೯೧ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಪಂಚಮುಗಳ ನಡುವೆ, ರಾಜಕ್ರೀಡೆ, ಕೃಷ್ಣಾರ್ಪಣ, ವಿಪ್ರಯೋಗ, ಉತ್ತರಾಯಣ, ಬತ್ತಿದ ಕಡಲು. ಆಹುತಿ, ರಾಜಬಲಿ, ತಣ್ಣಗಿನ ಬೆಂಕಿ-ಇವು ಮುಖ್ಯ ಕಾದಂಬರಿಗಳು, ವೀಣೆ, ನೃತ್ಯಲಹರಿ, ಗಂಗಾಲಹರಿ-ಕವನ ಸಂಕಲನಗಳು. ನಾಯಿಯ ಮೂಗು, ಒಡೆದ ಕನ್ನಡಿ, ಮನ್ವಂತರ.ಇವು ಸಣ್ಣ ಕತೆಗಳ ಸಂಕಲನಗಳು. ಪತ್ರಿಕಾ ವ್ಯವಸಾಯಿಯೂ ಆಗಿದ್ದರು.

೧೦. ಚದುರಂಗ

ಚದುರಂಗ ಎಂಬ ಕಾವ್ಯನಾಮದಿಂದ ಕತೆ, ಕಾದಂಬರಿ, ನಾಟಕ ಕೃತಿಕರ್ತರೂ ಚಲನಚಿತ್ರ ನಿರ್ದೇಶಕರೂ ಆಗಿದ್ದ ಸುಬ್ರಹ್ಮಣ್ಯರಾಜೇ ಅರಸು-ಅವರು ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಕಲ್ಲಹಳ್ಳಿಯಲ್ಲಿ ೧೯೧೬, ಜನವರಿ ಒಂದರಂದು ಜನಿಸಿದವರು. ಇವರ ತಾಯ್ತಂದೆಯುವರು—ಮರುದೇವಮ್ಮಣ್ಣಿ ಮತ್ತು ಮುದ್ದ ರಾಜೇ ಅರಸು—ಅವರು. ಚದುರಂಗರು ತಮ್ಮ ೮೨ನೆಯ ವರ್ಷ ವಯಸ್ಸಿನಲ್ಲಿ ದಿನಾಂಕ : ೨೦-೧೦-೧೯೯೮ ಸೋಮವಾರ ಮೈಸೂರಿನಲ್ಲಿ ಕೊನೆಯುಸಿರೆಳೆದರು. ಇವರು ಮೈಸೂರನ್ನಾಳಿದ ಶ್ರೀ ಜಯಚಾಮ ರಾಜೇಂದ್ರ ಒಡೆಯರ್ ಮತ್ತು ಮಾಜಿ ಮುಖ್ಯಮಂತ್ರಿ ಶ್ರೀ ಡಿ. ದೇವರಾಜ್ ಅರಸು—ಅವರ ಸಂಬಂಧಿ. ಇವರು ಕೇಂದ್ರದ ಮತ್ತು ರಾಜ್ಯದ ಸಾಹಿತ್ಯ ಅಕಾಡಮಿ ಬಹುಮಾನಿತರು. ೧೯೯೩ರಲ್ಲಿ ಮೈಸೂರು ವಿಶ್ವವಿದ್ಯಾಲಯ ಡಾಕ್ಟರೇಟ್ ಪ್ರಶಸ್ತಿ ನೀಡಿ ಗೌರವಿಸಿದೆ. ೬೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನ ಮಂಡ್ಯದಲ್ಲಿ ಇವರ ಅಧ್ಯಕ್ಷತೆಯಲ್ಲಿ ನೆರವೇರಿದೆ. ಇವರ ಕಾದಂಬರಿಗಳಲ್ಲಿ ಮುಖ್ಯವಾದವು—ಸರ್ವಮಂಗಳ, ಉಯ್ಯಾಲೆ, ವೈಶಾಖ, ಹೆಜ್ಜಾಲ—ಮುಂತಾದವು. ಕುಮಾರರಾಮ, ಇಲಿಬೋನು, ಬಿಂಬ–ಇವು ಪ್ರಮುಖ ನಾಟಕಗಳು. ಇಣುಕುನೋಟ, ಶವದ ಮನೆ, ಮೀನಿನಹೆಜ್ಜೆ, ಬಂಗಾರದ ಗೆಜ್ಜೆ-ಮುಂತಾದವು ಸಣ್ಣ ಕತೆಗಳ ಸಂಕಲನಗಳು.

೧೧. ಡಾ॥ ಆರ್. ಸಿ. ಹಿರೇಮಠ

ಕರ್ನಾಟಕ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ, ಹೆಸರಾಂತ ಸಾಹಿತಿ ಡಾ॥ ಆರ್. ಸಿ. ಹಿರೇಮಠರು ೩-೧೧-೧೯೯೮ ಮಂಗಳವಾರ ಕೈಲಾಸವಾಸಿಯಾದರು. ಅವರಿಗೆ ವಯಸ್ಸು ೭೮ ವರ್ಷವಾಗಿತ್ತು. ಅವರಿಗೆ ಪತ್ನಿ, ಇರ್ವರು ಪುತ್ರರು ಮತ್ತು ಇಬ್ಬರು ಪುತ್ರಿಯರಿದ್ದಾರೆ. ಹಿರೇಮಠರ ಜನನ ೧೫-೧-೧೯೨೦ರಲ್ಲಿ ಗದಗಿನ ರೋಣ ತಾಲೂಕಿನ ಕುರಡಗಿಯಲ್ಲಿ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗವನ್ನು ಕಟ್ಟಿ ಬೆಳೆಸಿದರು. ಅಲ್ಲಿ ಉಪನ್ಯಾಸಕರಾಗಿ ೧೯೪೧ರಲ್ಲಿ ವೃತ್ತಿ

ಯನ್ನಾರಂಭಿಸಿ, ಭಾಷಾ ವಿಜ್ಞಾನದ ಸಂದರ್ಶಕ ಪ್ರಾಧ್ಯಾಪಕರಾಗಿ ೧೯೬೫ರಲ್ಲಿ ಅಮೇರಿಕಕ್ಕೆ ಹೋಗಿದ್ದರು. ೧೯೭೪ ರಿಂದ ಕ. ವಿ. ವಿದ್ಯಾಲಯದ ಕುಲಪತಿಗಳಾಗಿದ್ದರು. ೫೯ನೆಯ ಅಖಿಳ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ (೧೯೯೦) ಹುಬ್ಬಳ್ಳಿಯಲ್ಲಿ ಆದಾಗ ಇವರು ಅಧ್ಯಕ್ಷರಾಗಿದ್ದರು. ದ್ರಾವಿಡ ಭಾಷಾ ವಲಯದಲ್ಲಿ ಭಾಷಾಶಾಸ್ತ್ರವನ್ನು ನಿರಂತರ ಪ್ರತಿನಿಧಿಸಿದವರಲ್ಲಿ ಇವರೇ ಮೊದಲಿಗರು. ಷಟ್ಸ್ಥಲ ಪ್ರಭೆ-ಅವರ ವಿಶೇಷಾಧ್ಯಯನದ ಫಲ. ವಚನ ಸಾಹಿತ್ಯವನ್ನು ವಿಸ್ತಾರವಾಗಿ ಪರಿಷ್ಕರಿಸಿದ್ದಾರೆ. ಶಾಸ್ತ್ರೀಯವಾಗಿ ಕಾವ್ಯಗಳನ್ನು ಸಂಪಾದಿಸಿದ್ದಾರೆ. ವೀರಶೈವ ಮಹಾಪುರಾಣ—ಅವರ ಸಂಪಾದನೆಯದು. 'ಉರಿ ಬರಲಿ, ಸಿರಿ ಬರಲಿ' ಅವರ ಆತ್ಮ ಚರಿತ್ರೆ. 'ಬೆಳ್ಳೊಲ' ಎಂಬುದು ಅವರ ಸನ್ಮಾನ ಸಮಿತಿಯಿಂದ ಅರ್ಪಿತವಾದ ಅಭಿನಂದನ ಗ್ರಂಥ. ಪ್ರತಿಷ್ಠಾನದ ಗೌರವ ಸದಸ್ಯರೂ ಹಿತೈಷಿಗಳೂ ಆಗಿದ್ದರು.

ನಮ್ಮನ್ನಗಲಿದ ಖ್ಯಾತನಾಮರಾದ ಎಲ್ಲರಿಗೂ ಬಿ.ಎಂ.ಶ್ರೀ ಪ್ರತಿಷ್ಠಾನದ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ.

ಈ ಸಂಚಿಕೆಯ ಲೇಖಕರು

1. ಶ್ರೀ ತಲೆಂಗಳ ರಾಮಕೃಷ್ಣ ಭಟ್
ತಲೆಂಗಳ-ಹೌಸ್
ಬಾಯಾರ್-ಅಂಚೆ, ಪೈವಳಿಕೆ
ಕಾಸರಗೋಡು-671 348

2. ಶ್ರೀ ಎಸ್. ಎನ್. ಸಿಂಹ
ಉಪ್ಪುನೀರುಬಾವಿ ಬೀದಿ
ಮೇಲುಕೋಟೆ-571 431

3. ಪ್ರೊ|| ಟಿ. ಕೇಶವಭಟ್ಟ
754, 15ನೇ ಮುಖ್ಯರಸ್ತೆ
2ನೇ ಹಂತ, ಬನಶಂಕರಿ
ಬೆಂಗಳೂರು-560 070

4. ಶ್ರೀ ನಾ. ಗೀತಾಚಾರ್ಯ
ನಂ. 23/2, 5ನೇ ಕ್ರಾಸ್
ಕೆಂಪೇಗೌಡನಗರ, ಬೆಂಗಳೂರು-19

5. ಶ್ರೀ ಕೆ. ಪಿ. ರಾಜಗೋಪಾಲ್
ಕರಣಿಕ - ವ್ಯವಸ್ಥಾಪಕ
754, 15ನೇ ಮುಖ್ಯ ರಸ್ತೆ
ಬನಶಂಕರಿ 2ನೇ ಹಂತ
ಬೆಂಗಳೂರು-560 070

6. ಡಾ|| ಎಚ್. ಎಂ. ಮರುಳಸಿದ್ಧಯ್ಯ
62, 'ಈಶಕೃಪ'
ಮಂಜುನಾಥ ಕಾಲೋನಿ, ಜೆ.ಪಿ. ನಗರ
ಬೆಂಗಳೂರು-560 078

7. ಡಾ|| ಶ್ರೀನಿವಾಸ ಹಾವನೂರ
ಆಶ್ರಯ ಅಪಾರ್ಟಮೆಂಟ್
36, ವಿನಾಯಕ ಲೇಔಟ್
ವಿಜಯನಗರ-(ಪಶ್ಚಿಮ), ಬೆಂ-40

8. ಡಾ|| ಅಬ್ದುಲ್ ಅಜೀಜ್
ಪ್ರಾಧ್ಯಾಪಕರು, ಸಾಮಾಜಿಕ ಮತ್ತು
ಆರ್ಥಿಕ ಬದಲಾವಣೆಗಳ ಸಂಸ್ಥೆ
ಜ್ಞಾನಭಾರತಿ, ಬೆಂಗಳೂರು-56

9. ಡಾ|| ಸೂರ್ಯನಾಥ್ ಕಾಮತ್
798, ಕೀರ್ತಿ, 11ನೇ ಮೇನ್
6ನೇ ಕ್ರಾಸ್, ಹನುಮಂತನಗರ
ಬೆಂಗಳೂರು-560 019

10. ಡಾ|| ಆರ್. ಎಲ್. ಎಂ. ಪಾಟೀಲ್
ಆರ್-5, ಜ್ಞಾನಭಾರತಿ
ಬೆಂಗಳೂರು-560 056

11. ಶ್ರೀ ಎಂ. ಆರ್. ಅನಂತರಾಮಯ್ಯ
ನಂ. 14, 'ಇಂಚರ'
ಐ.ಡಿ. ಮುಖ್ಯರಸ್ತೆಯ ತುದಿ
(ಆಡನ್ ಪಬ್ಲಿಕ್ ಸ್ಕೂಲ್ ಹಿಂಭಾಗ)
ಗಿರಿನಗರ, 2ನೇ ಫೇಸ್
ಬೆಂಗಳೂರು-560 085

12. ಶ್ರೀ ಬಿ.ಎಸ್. ಪ್ರಣತಾರ್ತಿಹರನ್
ನಂ. 3059, 4ನೇ 'ಎ' ಕ್ರಾಸ್
ಗೋಕುಲ ಪಾರ್ಕ ರಸ್ತೆ
ಗೋಕುಲಂ, ಮೈಸೂರು-2

13. ಪ್ರೊ|| ಜಿ. ಅಶ್ವತ್ಥನಾರಾಯಣ
ನಂ. 95, 34'ಬಿ' ಕ್ರಾಸ್
16ನೇ ಮೇನ್, 4ನೇ 'ಟಿ' ಬ್ಲಾಕ್
ಜಯನಗರ
ಬೆಂಗಳೂರು-560 041

14. ವಿದ್ವಾನ್ ಅನಂತಕೃಷ್ಣ
ನಿವೃತ್ತ ಕೃಷ್ಣಯಜುರ್ವೇದ
ಪ್ರಾಧ್ಯಾಪಕ
ನಂ. 40, 1ನೇ ಕ್ರಾಸ್
ಹನುಮಂತನಗರ, ಬೆಂಗಳೂರು-19

15. ಶ್ರೀ ಪಿ. ವಿ. ಕೃಷ್ಣಮೂರ್ತಿ
ನಂ. 510, ಜಿ.ಬಿ.ಜಿ. ಕ್ವಾರ್ಟರ್ಸ್
12ನೇ ಕ್ರಾಸ್, ಮಾರತ್ತಹಳ್ಳಿ
ಬೆಂಗಳೂರು-560 037

ಪ್ರತಿಷ್ಠಾನದ ಗೌರವ ಸದಸ್ಯರು

1) ಪ್ರೊ|| ಎ. ಎನ್. ಮೂರ್ತಿರಾವ್, 2) ಪ್ರೊ|| ಎಸ್. ವಿ. ಪರಮೇಶ್ವರಭಟ್ಟ, 3) ಡಾ|| ಜಿ. ಎಸ್. ದೀಕ್ಷಿತ್, 4) ವಿದ್ವಾನ್ ಎನ್. ರಂಗನಾಥ ಶರ್ಮ, 5) ಪ್ರೊ|| ಗರ್ಗೇಶ್ವರಿ ವೆಂಕಟಸುಬ್ಬಯ್ಯ, 6) ಗೌರೀಶ ಕಾಯ್ಕಿಣಿ, 7) ಶ್ರೀಮತಿ ಶಾಂತಾದೇವಿ, ಮಾಳವಾಡ.

ವಿಮರ್ಶೆಗಾಗಿ ಗ್ರಂಥಗಳ ಎರಡು ಪ್ರತಿಗಳನ್ನು ಕಳಿಸಬೇಕು

ಸೃಜನಾತ್ಮಕ ಗ್ರಂಥಗಳನ್ನು ಸಾಧಾರಣವಾಗಿ ವಿಮರ್ಶೆ ಮಾಡಲಾಗುವುದಿಲ್ಲ. ಆದರೆ, ಕಳಿಸಿದರೆ ವೈಶಿಷ್ಟ್ಯವುಳ್ಳ ಅಂಥ ಗ್ರಂಥಗಳನ್ನು ಸಾಧ್ಯವಾದರೆ ಅವಲೋಕನ ಮಾಡಿಸಲಾಗುವುದು.

ವಿನಿಮಯ ಪತ್ರಿಕೆಗಳು

1) ಪ್ರಬುದ್ಧ ಕರ್ನಾಟಕ, ಮಾನವಿಕ ಕರ್ನಾಟಕ, ವಿಜ್ಞಾನ ಕರ್ನಾಟಕ, ಮೈಸೂರು 2) ಸಾಧನೆ, ಬೆಂಗಳೂರು 3) ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಬೆಂಗಳೂರು. 4) ಮಿಥಿಕ್ ಸೊಸೈಟಿ ಜರ್ನಲ್, 5) ಬಸವ ಪಥ, ಬೆಂಗಳೂರು. 6) ಶಂಕರ ಭಾಸ್ಕರ, ಬೆಂಗಳೂರು. 7) ಧರ್ಮಪ್ರಭ, ಬೆಂಗಳೂರು 8) ಜಾನಪದ ಜಗತ್ತು, ಬೆಂಗಳೂರು. 9) ಅನ್ವೇಷಣೆ, ಬೆಂಗಳೂರು. 10) ಅಪರಂಜಿ, ಬೆಂಗಳೂರು 11) ಕರ್ನಾಟಕ ಭಾರತಿ, ಧಾರವಾಡ. 12) ಸುಗುಣಮಾಲಾ, ಉಡುಪಿ. 13) ಸತ್ಯಶುದ್ಧ ಕಾಯಕ, ಚಿತ್ರದುರ್ಗ. 14) ತರಳಬಾಳು, ಸಿರಿಗೆರೆ. 15) ಅಭಿಮತ, ದೆಹಲಿ.

ಕರ್ನಾಟಕ ಲೋಚನ ಚಂದಾ ವಿವರ

ವಾರ್ಷಿಕ ಚಂದಾ	:	ವ್ಯಕ್ತಿಗಳಿಗೆ ರೂ. 15–00
		ಗ್ರಂಥಾಲಯ, ಸಂಘ ಸಂಸ್ಥೆಗಳಿಗೆ ರೂ. 25–00
ಆಜೀವ	:	ರೂ. 150–00
		ಬಿಡಿ ಪ್ರತಿ ರೂ. 10.00
		ಪ್ರತಿಷ್ಠಾನದ ಸದಸ್ಯರಿಗೆ ಲೋಚನ ಉಚಿತ.

ಪ್ರತಿಷ್ಠಾನದ ಸದಸ್ಯತ್ವ : ವಾರ್ಷಿಕ ರೂ. 25–00 ಆಜೀವ ರೂ. 250–00

KARNATAKA LOCHANA Half Yearly Journal, Published by B. M Sri Smaraka Prathishthana, Gokhale Institute of Public Affairs Premises, Basavanagudi Road, Bangalore – 560 019. Printed by : Prabhu Mudrana, Shakambari Nagar, Sarakki, Bangalore-560 078. Phone : 6640976

ಪ್ರತಿಷ್ಠಾನದ ಈಚಿನ ಪ್ರಕಟಣೆಗಳು

		ಉತ್ತಮ	ಸಾದಾ
1.	ಸಂಗಮರ ಕಾಲದ ವಿಜಯನಗರ		75–00
2.	ಕುಮಾರವ್ಯಾಸ ಭಾರತ ಸಂಗ್ರಹ	75–00	40–00
3.	ಶಂಬಾ ಕೃತಿ ಸಮೀಕ್ಷೆ		35–00
4.	ಎಂ. ವಿ. ಸೀ. ಸಂಸ್ಕರಣೆ		25–00
5.	ವೈಚಾರಿಕ ಜಾಗೃತಿ		21–00
6.	ಸಂವಿಧಾನ ಮತ್ತು ಕಾನೂನು		25–00
7.	ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಜೀವನ ಚರಿತ್ರೆ)		15–00
8.	ಬಸವಪ್ಪ ಶಾಸ್ತ್ರಿಗಳು		25–00
9.	ನವ್ಯಸ್ಫೂರ್ತಿ (ಗೋಕಾಕ್ ಸಾಹಿತ್ಯ ಸಮೀಕ್ಷೆ)		35–00
10.	ಕದಂಬ (ಎಂ.ವಿ ಸೀ. ಸಮಗ್ರ ಸಾಹಿತ್ಯ–1. ಸಮಗ್ರ ಸಂಶೋಧನ ಲೇಖನಗಳು)	100–00	80–00
11.	ಕವಿರಾಜಮಾರ್ಗ (ಎಂ.ವಿ.ಸೀ. ಸಮಗ್ರ ಸಾಹಿತ್ಯ-2)	100–00	80–00
12.	ಕವಿರಾಜಮಾರ್ಗ ವಿವಕ್ಷೆ (ಸಮಗ್ರ ಸಾಹಿತ್ಯ-3 ಕವಿರಾಜಮಾರ್ಗವನ್ನು ಕುರಿತ ಲೇಖನಗಳು)	100–00	
13.	ಶ್ರೀ ಕೃಷ್ಣ ಬಾಲಲೀಲೆ, ಭಾಗ-2 (ಸಮಗ್ರ ಸಾಹಿತ್ಯ-4)	200–00	
14.	ಪದ್ಮಿನಿ ಕಲ್ಯಾಣ		15–00
15.	ಬೇಟೆರಾಯ ದೀಕ್ಷಿತರ ದೇವರನಾಮಗಳು ಮತ್ತು ಸಂಪ್ರದಾಯದ ಹಾಡುಗಳು		25–00

ಸಿದ್ಧತೆಯಲ್ಲಿ

1. ತೌಲನಿಕ ಸಾಹಿತ್ಯ (ಅಚ್ಚಿನಲ್ಲಿ)
2. ತಿರುಕ್ಕುರಳ್ (ಕನ್ನಡಾನುವಾದ)
3. ಅಂತರ ಶಿಸ್ತೀಯ ಸಂಶೋಧನ ವಿಧಿವಿಧಾನ
4. ಲೋಚನ ಲೇಖನ ಸೂಚಿ